ಸಂಪುಟ: 21, ಸಂಚಿಕೆ: 224, ಪುಟಗಳು: 8, ಗುರುವಾರ, 23 ಮೇ 2024 RNI NO. KARKAN/2002/08054
epaper: www.sanjemugilu.com



ವೇಣು ಸಾರಥ್ಯದಲ್ಲಿ...

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

### ಸುಭಾಷಿತ

ತಮ್ಮಲ್ಲಿರುವ ಸ್ವಾರ್ಥ ಮನೋಭಾವದಿಂದಾಗಿಯೇ ಜನ ದುಃಖಕ್ಕೆ ಈಡಾಗುತ್ತಾರೆ.

। ಗೌತಮ ಬುದ್ಧ

### ಪಂಚಾಂಗ

(ಗುರುವಾರ 23, ಮೇ-2024)

- **ಸಂವತ್ಸರ:** ಕ್ರೋಧಿನಾಮ, **ಋತು:** ವಸಂತ
- **ಅಯನ:** ಉತ್ತರಾಯಣ, **ಮಾಸ:** ವೈಶಾಖ
- **ಪಕ್ಷ:** ಶುಕ್ಲ, **ತಿಥಿ:** ಪೌರ್ಣಮಿ
- **ನಕ್ಷತ್ರ:** ವಿಶಾಖ
- **ರಾಹುಕಾಲ:** 01:52 - 3:28
- **ಗುಳಿಕಕಾಲ:** 09:04 - 10:40
- **ಯಮಗಂಡಕಾಲ:** 05:52 - 7:28

# ಕಣದಲ್ಲಿರೋ 1,600 ಕ್ಕೂ ಹೆಚ್ಚು ಅಭ್ಯರ್ಥಿಗಳಿಗಿದೆ ಕ್ರಿಮಿನಲ್ ಹಿನ್ನೆಲೆ



**ನವದೆಹಲಿ:** ಚುನಾವಣಾ ಹಕ್ಕುಗಳ ಸಂಸ್ಥೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಹಂಚಿಕೊಂಡ ಅಂಕಿ-ಅಂಶಗಳ ವಿಶ್ಲೇಷಣೆಯ ಪ್ರಕಾರ, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಒಟ್ಟು 8,337 ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇದರಲ್ಲಿ 1,644 ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ ಎಂದಿದೆ.

ಈ ಅಭ್ಯರ್ಥಿಗಳ ಪೈಕಿ 1,188 ಮಂದಿ ಗಂಭೀರ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದಾರೆ. ಇದರಲ್ಲಿ ಕೊಲೆ, ಕೊಲೆ ಯತ್ನ, ಮಹಿಳೆಯರ ವಿರುದ್ಧದ ಅಪರಾಧಗಳು ಮತ್ತು ದ್ವೇಷದ ಭಾಷಣಕ್ಕೆ ಸಂಬಂಧಿಸಿದ ಆರೋಪಗಳಿವೆ.

**ಅಭ್ಯರ್ಥಿಗಳ ಹಂತ-ವಾರು ವಿವರ:**

**ಹಂತ 1:** 1,618 ಅಭ್ಯರ್ಥಿಗಳಲ್ಲಿ 252 ಮಂದಿ ಮೇಲೆ ಕ್ರಿಮಿನಲ್ ಪ್ರಕರಣ ಹಾಗೂ 161 ಮಂದಿ ಅಭ್ಯರ್ಥಿಗಳು ಗಂಭೀರ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದಾರೆ.

**ಹಂತ 2:** 1,192 ಅಭ್ಯರ್ಥಿಗಳಲ್ಲಿ 250 ಮಂದಿ ಮೇಲೆ ಕ್ರಿಮಿನಲ್ ಆರೋಪ ಹಾಗೂ 167 ಮಂದಿ ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಹೊಂದಿದ್ದಾರೆ.

**ಹಂತ 3:** 1,352 ಅಭ್ಯರ್ಥಿಗಳಲ್ಲಿ 244 ಮಂದಿ ಮೇಲೆ ಕ್ರಿಮಿನಲ್ ಮೊಕದ್ದಮೆ, 172 ಗಂಭೀರ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದಾರೆ.

**ಹಂತ 4:** 1,710 ಅಭ್ಯರ್ಥಿಗಳ ಪೈಕಿ 360 ಮಂದಿ ಕ್ರಿಮಿನಲ್ ಆರೋಪ ಎದುರಿಸುತ್ತಿದ್ದಾರೆ. 274 ಮಂದಿ ಗಂಭೀರ ಕ್ರಿಮಿನಲ್ ಆರೋಪಗಳನ್ನು ಹೊಂದಿದ್ದು, 4ನೇ ಹಂತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

**ಹಂತ 5:** 695 ಅಭ್ಯರ್ಥಿಗಳಲ್ಲಿ 159 ಅಭ್ಯರ್ಥಿಗಳು ಕ್ರಿಮಿನಲ್ ಪ್ರಕರಣ ಮತ್ತು 122 ಗಂಭೀರ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದಾರೆ.

**ಹಂತ 6:** 866 ಅಭ್ಯರ್ಥಿಗಳನ್ನು ವಿಶ್ಲೇಷಿಸಲಾಗಿದೆ. ಇದರಲ್ಲಿ 180 ಮಂದಿ ಕ್ರಿಮಿನಲ್ ಪ್ರಕರಣಗಳನ್ನು ಹೊಂದಿದ್ದಾರೆ. 141 ಮಂದಿ ಗಂಭೀರ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದಾರೆ.

**ಹಂತ 7:** 904 ಅಭ್ಯರ್ಥಿಗಳಲ್ಲಿ 199 ಅಭ್ಯರ್ಥಿಗಳು ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದರೆ, 151 ಮಂದಿಯ ವಿರುದ್ಧ ಗಂಭೀರ ಪುಟ 2

# ಒಡಿಶಾ, ಪಶ್ಚಿಮ ಬಂಗಾಳಕ್ಕೆ ಅಪ್ಪಳಿಸಲಿದೆ ಚಂಡಮಾರುತ



**ಒಡಿಶಾ:** ಇಂದು ಬಂಗಾಳಕೊಲ್ಲಿಯಲ್ಲಿ ತೀವ್ರವಾದ ಚಂಡಮಾರುತ ಅಪ್ಪಳಿಸುವ ಸಾಧ್ಯತೆ ಇದೆ. ಉತ್ತರ ಒಡಿಶಾ ಮತ್ತು ಪಶ್ಚಿಮ ಬಂಗಾಳದ ಕರಾವಳಿಯಲ್ಲಿ ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಸಲಹೆಯನ್ನು ನೀಡಿದೆ.

ಒಡಿಶಾ ಮತ್ತು ಪಶ್ಚಿಮ ಬಂಗಾಳದ ಉತ್ತರ ಭಾಗದ ಕರಾವಳಿಯುದ್ದಕ್ಕೂ, ಭಾರೀ ಗಾಳಿಯೊಂದಿಗೆ ಮಳೆಯಾಗುವ ನಿರೀಕ್ಷೆ ಇದೆ. ಒಡಿಶಾ ಅಲ್ಲದೆ, ಚಂಡಮಾರುತವು ಮೇ 23 ಮತ್ತು ಮೇ 27 ರ ನಡುವೆ ಮಹಾರಾಷ್ಟ್ರ ಮತ್ತು ಗುಜರಾತ್‌ನ ಮೇಲೂ ಪರಿಣಾಮ ಬೀರುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ತಿಳಿಸಿದೆ.

ಮೇ 28ರ ಸುಮಾರಿಗೆ ಗುಜರಾತ್ ಮತ್ತು ಮುಂಬೈನಲ್ಲಿ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅರುಣಾಚಲ ಪ್ರದೇಶ, ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ, ತ್ರಿಪುರಾ ಮತ್ತು ಇತರ ರಾಜ್ಯಗಳಲ್ಲಿ ಮೇ 23 ರವರೆಗೆ ಅಲ್ಪ ಪ್ರಮಾಣದ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರ್ನಾಟಕ, ಪುದುಚೇರಿ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಲಕ್ಷದ್ವೀಪ ಮತ್ತು ತೆಲಂಗಾಣದಲ್ಲಿ ಮೇ 23 ರವರೆಗೆ ಹಗುರದಿಂದ ಸಾಧಾರಣ ಮಳೆ, ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಪುಟ 2

## ಸಂಕ್ಷಿಪ್ತ ಸುದ್ದಿ

### ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರದ ಅರಣ್ಯದಲ್ಲಿ ಆನೆ ಗಣತಿ ಶುರು!



**ಚಾಮರಾಜನಗರ:** ಇತ್ತೀಚೆಗೆ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಲ್ಲಿ ಆನೆ-ಮಾನವ ಸಂಘರ್ಷದ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ಪರಿಹಾರೋಪಾಯಗಳನ್ನು ರೂಪಿಸಲು ಕರ್ನಾಟಕ, ಕೇರಳ, ತಮಿಳುನಾಡು ಹಾಗೂ ಆಂಧ್ರ ಪ್ರದೇಶದ ಗಡಿ ಅರಣ್ಯ ಪ್ರದೇಶಗಳಲ್ಲಿ ಏಕಕಾಲದಲ್ಲಿ 3 ದಿನಗಳ ಕಾಲ ಆನೆ ಗಣತಿ ನಡೆಸಲು ಅರಣ್ಯ ಇಲಾಖೆ ಮುಂದಾಗಿದೆ. ಪುಟ 2

### ಓವರ್ ಟೇಕ್ ಮಾಡಲು ಬಿಡಲಿಲ್ಲವೆಂದು ಹೆಲ್ಮೆಟ್‌ನಿಂದ ಕಾರಿನ ಮೇಲೆ ಹಲ್ಲೆ



**ಬೆಂಗಳೂರು:** ದಂಪತಿ ಮತ್ತು ಅವರ ಮೂರು ವರ್ಷದ ಮಗಳು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ದ್ವಿಚಕ್ರ ವಾಹನ ಸವಾರನೊಬ್ಬ ದಾಳಿ ನಡೆಸಿದ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಓವರ್ ಟೇಕ್ ಮಾಡಲು ಜಾಗ ಬಿಡಲಿಲ್ಲವೆಂದು ರೊಚ್ಚಿಗೆದ್ದ ಬೈಕ್ ಸವಾರ ಏಕಾಏಕಿ ಕಾರು ಚಾಲಕನ ಮೇಲೆ ದಾಳಿ ನಡೆಸಿದ್ದಾನೆ. ಘಟನೆ ಸಂಬಂಧ ಕಾರು ಮಾಲೀಕ ವರ್ತೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪುಟ 2

## ಪ್ರಜ್ವಲ್ ಅಶ್ಲೀಲ ವಿಡಿಯೋ ಪ್ರಕರಣ

# ಪ್ರಧಾನಿಗೆ ಪತ್ರ ಬರೆದ ಸಿಎಂ

**ಬೆಂಗಳೂರು:** ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿ ಸಿಎಂ ಸಿದ್ದರಾಮಯ್ಯ ಮತ್ತೊಮ್ಮೆ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ. ಈಗಾಗಲೇ ಅವರು ಒಂದು ಪತ್ರ ಬರೆದಿದ್ದರು. ಅದಕ್ಕೆ ಪ್ರತಿಕ್ರಿಯೆ ಬಾರದ ಕಾರಣ ಮತ್ತೆ ಪತ್ರ ಬರೆದಿದ್ದಾರೆ. ಪ್ರಜ್ವಲ್ ರಾಜತಾಂತ್ರಿಕ ಪಾಸ್ ಪೋರ್ಟ್ ರದ್ದು ಪಡಿಸುವಂತೆ ಮೋದಿಗೆ ಬರೆದ ಪತ್ರದಲ್ಲಿ ಸಿಎಂ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಪ್ರಜ್ವಲ್ ಪ್ರಕರಣದಲ್ಲಿ ಕೇಂದ್ರವನ್ನು ಹೊಣೆ ಮಾಡಿದ ರಾಜ್ಯ ಸರ್ಕಾರ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸುವಂತೆ ಒತ್ತಾಯಿಸಿದೆ. ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಿದರೆ ಪ್ರಜ್ವಲ್ ವಾಪಸ್ ಬರಲೇಬೇಕಾಗುತ್ತದೆ. ಹೀಗಾಗಿ ಆ ಕ್ರಮ ಕೈಗೊಳ್ಳಬೇಕು. ವಿದೇಶಾಂಗ ಸಚಿವಾಲಯ ಮಧ್ಯಪ್ರವೇಶಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಪ್ರಧಾನಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

ವಿದೇಶದಿಂದ ಪ್ರಜ್ವಲ್ ರೇವಣ್ಣರನ್ನು ಕರೆಸುವುದೇ ನಮ್ಮ ಆದ್ಯತೆಯ ಕೆಲಸ. ಕಾನೂನಾತ್ಮಕವಾಗಿ ಎಲ್ಲಾ ರೀತಿಯಲ್ಲೂ ಸಹಕರಿಸಲು ಎಸ್‌ಐಟಿ ಸಿದ್ಧವಿದೆ. ಹೀಗಾಗಿ ವಿದೇಶಾಂಗ ಸಚಿವಾಲಯ ಮಧ್ಯಪ್ರವೇಶಕ್ಕೆ ಪ್ರಧಾನಿ ಮೋದಿ ಸೂಚನೆ ನೀಡಬೇಕು. ವಿದೇಶಾಂಗ ಸಚಿವಾಲಯದ ಮೂಲಕ ಕೂಡಲೇ ಕ್ರಮಕೈಗೊಳ್ಳಬೇಕು. ಅಂತಾರಾಷ್ಟ್ರೀಯ ಪೊಲೀಸ್ ಏಜೆನ್ಸಿ ಮೂಲಕವೂ ಕ್ರಮಕೈಗೊಳ್ಳಬೇಕು. ಪ್ರಜಲ್ವ್ ಪಾಸ್‌ಪೋರ್ಟ್ ರದ್ದುಪಡಿಸಬೇಕು ಎಂದು ಮೇ ಮೊದಲ ವಾರ ಪ್ರಧಾನಿಗೆ ಬರೆದ ಪತ್ರದಲ್ಲಿ ಸಿದ್ದರಾಮಯ್ಯ ಆಗ್ರಹಿಸಿದ್ದರು. ಆದರೆ, ಈ ಪತ್ರಕ್ಕೆ ಈವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.



### ಭವಾನಿ ರೇವಣ್ಣ ಕಾರು ಚಾಲಕನಿಗೆ ಸಮನ್ಸ್

**ಮಹಿಳೆಯ ಅಪಹರಣ ಪ್ರಕರಣದಲ್ಲಿ ಜೆಡಿಎಸ್ ಶಾಸಕ ಹೆಚ್ ಡಿ ರೇವಣ್ಣ ಪತ್ನಿ ಭವಾನಿ ರೇವಣ್ಣ ಅವರ ಕಾರು ಚಾಲಕ ಅಜಿತ್ ಗೆ ಎಸ್‌ಐಟಿ ಪೊಲೀಸರು ಸಮನ್ಸ್ ಜಾರಿ ಮಾಡಿದ್ದಾರೆ. ಕಿಡ್ನಾಪ್ ಪ್ರಕರಣ ಸಂಬಂಧ ಎರಡು ಬಾರಿ ಸಮನ್ಸ್ ಜಾರಿ ಮಾಡಲಾಗಿದೆ. ಹೊಳೆನರಸೀಪುರದಲ್ಲಿರುವ ಚಾಲಕ ಅಜಿತ್ ನಿವಾಸಕ್ಕೆ ತೆರಳಿ ಸಮನ್ಸ್ ನೀಡಲಾಗಿದೆ. ಕಿಡ್ನಾಪ್ ಪ್ರಕರಣ ದಾಖಲಾದ ಬಳಿಕ ಅಜಿತ್ ತಲೆಮರೆಸಿಕೊಂಡಿದ್ದಾನೆ. ಸಂತ್ರಸ್ತೆಯನ್ನು ಕಾರಿನಲ್ಲಿ ಕರೆದೊಯ್ದಿದ್ದ ಆರೋಪ ಆತನ ಮೇಲಿದೆ.**

## ಕರ್ನಾಟಕದಲ್ಲಿ 1ನೇ ತರಗತಿ ಪ್ರವೇಶಕ್ಕೆ ವಯೋಮಿತಿ ಕಡ್ಡಾಯ

# ಪೋಷಕರ ಆಕ್ರೋಶ

**ಬೆಂಗಳೂರು:** ಒಂದನೇ ತರಗತಿ ಪ್ರವೇಶಾತಿಗೆ 2025-26ನೇ ಸಾಲಿನಿಂದ ಮಕ್ಕಳ ಕನಿಷ್ಠ ವಯೋಮಿತಿಯನ್ನು 6 ವರ್ಷಕ್ಕೆ ನಿಗದಿ ಮಾಡಿರುವುದು ಮತ್ತು ಎಲ್‌ಕೆಜಿಗೆ) ದಾಖಲಿಸಲು ಮಕ್ಕಳ ವಯಸ್ಸು ಜೂನ್ 1 ರೊಳಗೆ 4 ವರ್ಷ ಆಗಿರಬೇಕು (2023-24ರ ಶೈಕ್ಷಣಿಕ ವರ್ಷದಿಂದ) ಎಂಬ ನಿಯಮಕ್ಕೆ ಪೋಷಕರಿಂದ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಹೊಸ ನಿಯಮ ಅವೈಜ್ಞಾನಿಕ ಮತ್ತು ಅನ್ಯಾಯ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ಕಟ್ಟುನಿಟ್ಟಿನ ವಯೋಮಿತಿಗಳು ಮಕ್ಕಳನ್ನು ಸಕಾಲಿಕ ಶಿಕ್ಷಣದಿಂದ ವಂಚಿತಗೊಳಿಸುತ್ತಿವೆ. ಅದರಲ್ಲೂ ವಿಶೇಷವಾಗಿ ಕೇವಲ ಒಂದು ದಿನದ ಅಂತರದಲ್ಲಿ ವಯಸ್ಸು ಪೂರ್ಣಗೊಂಡಿರದಿದ್ದರೆ ಅಂಥ ಮಕ್ಕಳಿಗೆ ಅನ್ಯಾಯವಾಗುತ್ತದೆ. ಅಂಥ ಮಕ್ಕಳು ಇಡೀ ವರ್ಷ ಶಾಲಾ ಶಿಕ್ಷಣದಿಂದ ವಂಚಿತರಾಗುತ್ತಾರೆ ಎಂದು ಪೋಷಕರು ಹೇಳಿದ್ದು, ನಿಯಮದಲ್ಲಿ ಸಡಿಲಿಕೆಗೆ ಒತ್ತಾಯಿಸಿದ್ದಾರೆ.

ಗೊಂದಲಗಳ ಮಧ್ಯೆಯೂ ಇದೀಗ ಖಾಸಗಿ ಶಾಲೆಗಳು ಹೊಸ ನಿಯಮಗಳಿಗೆ ಬದ್ಧವಾಗಿದ್ದು, ವಯಸ್ಸು ಪೂರ್ಣಗೊಂಡಿರದ ಮಕ್ಕಳ ದಾಖಲಾತಿಗೆ ನಿರಾಕರಿಸುತ್ತಿವೆ. ಇದು ಅನೇಕ ಪೋಷಕರನ್ನು ನಿರಾಶೆಗೊಳಿಸಿದೆ.

ಕೆಲವು ಪ್ರಕರಣಗಳಲ್ಲಿ ಸುಳ್ಳು ಮಾಹಿತಿ ನೀಡಿ ಇನ್ನೂ 4 ವರ್ಷ ತುಂಬದ ಮಕ್ಕಳನ್ನು ಶಾಲೆಗಳಿಗೆ ಸೇರಿಸಲಾಗುತ್ತಿದೆ ಎಂದು ವರದಿಯಾಗಿದೆ. ಈ ದಾಖಲಾತಿಗಳಿಗೆ ಅನುಮತಿ ನೀಡುವ ಅಧಿಕೃತ ಆದೇಶವಿದೆ ಎಂದು ಪೋಷಕರನ್ನು ತಪ್ಪುದಾರಿಗೆ ಎಳೆಯಲಾಗುತ್ತಿದೆ. ಪುಟ 2

# ಬಿಜೆಪಿಯಿಂದ ಜಯಂತ್ ಸಿನ್ಹಾಗೆ ಶೋಕಾಸ್ ನೋಟಿಸ್



**ನವದೆಹಲಿ:** ಲೋಕಸಭಾ ಚುನಾವಣೆ ಘೋಷಿಸಿದಾಗಿನಿಂದ ಸಂಸದ ಜಯಂತ್ ಸಿನ್ಹಾ ಪ್ರಚಾರಕ್ಕೂ ಬಂದಿಲ್ಲ, ಮತದಾನವನ್ನೂ ಮಾಡಿಲ್ಲ ಎಂದು ಬಿಜೆಪಿ ಶೋಕಾಸ್ ನೋಟಿಸ್ ನೀಡಿತ್ತು. ಅದಕ್ಕೆ ಪ್ರತಿಕ್ರಿಯಿಸಿದ ಜಯಂತ್ ಸಿನ್ಹಾ, ಯಕ್ತಿಕ ಬದ್ಧತೆಯಿಂದಾಗಿ ವಿದೇಶದಲ್ಲಿದ್ದ ಕಾರಣ ಅಂಚೆ ಮತಪತ್ರ ಪ್ರಕ್ರಿಯೆಯ ಮೂಲಕ ಮತ ಚಲಾಯಿಸಿದ್ದೇನೆ ಎಂದರು. ''ನಾನು ಯಾವುದೇ ಚುನಾವಣಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಪಕ್ಷ ಬಯಸಿದರೆ, ನೀವು ಖಂಡಿತವಾಗಿಯೂ ನನ್ನನ್ನು ಸಂಪರ್ಕಿಸಬಹುದಿತ್ತು''.

''ಪಕ್ಷದ ಒಬ್ಬ ಹಿರಿಯ ಅಧಿಕಾರಿ, ಸಂಸದ ಅಥವಾ ಜಾರ್ಖಂಡ್ ಶಾಸಕರು ನನ್ನ ಬಳಿಗೆ ಬಂದಿಲ್ಲ. ಪಕ್ಷದ ಯಾವುದೇ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿಲ್ಲ. ಇದರೊಂದಿಗೆ ಯಾವುದೇ ರ್ಯಾಲಿ ಅಥವಾ ಸಂಘಟನಾ ಸಭೆಗಳಿಗೆ ನನಗೆ ಆಹ್ವಾನ ಬಂದಿಲ್ಲ'' ಎಂದು ಸ್ಪಷ್ಟಪಡಿಸಿದ್ದಾರೆ.

ಸೋಮವಾರ, ಭಾರತೀಯ ಜನತಾ ಪಕ್ಷವು ಚುನಾವಣಾ ಪ್ರಚಾರದಲ್ಲಿ ಭಾಗವಹಿಸದಿದ್ದಕ್ಕಾಗಿ ಜಯಂತ್ ಸಿನ್ಹಾ ಅವರಿಗೆ ಶೋಕಾಸ್ ನೋಟಿಸ್ ನೀಡಿತ್ತು. ಹಜಾರಿಬಾಗ್ ಲೋಕಸಭಾ ಕ್ಷೇತ್ರದಿಂದ ಮನೀಶ್ ಜೈಸ್ವಾಲ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದ ಪುಟ 2

## ಬೆಳಗಾವಿ ಮೇಯರ್, ಉಪಮೇಯರ್ ಕಚೇರಿಗೆ ಬೀಗ

# ಸಿಎಂ ಕಚೇರಿಗೂ ಬೀಗ ಹಾಕಿ ಎಂದ ಶಾಸಕ ಅಭಯ್ ಪಾಟೀಲ್



**ಬೆಳಗಾವಿ:** ಚುನಾವಣೆ ಮಾದರಿ ನೀತಿ ಸಂಹಿತೆ ಹೆಸರಲ್ಲಿ ಬೆಳಗಾವಿ ಮೇಯರ್ , ಉಪಮೇಯರ್ ಕಚೇರಿಗೆ ಅಧಿಕಾರಿಗಳು ಬೀಗ ಹಾಕಿದ್ದಾರೆ. ಇದಕ್ಕೆ ಬಿಜೆಪಿ ಶಾಸಕ ಅಭಯ್ ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದ್ದು, ಸಿಎಂ ಕಚೇರಿಗೂ ಬೀಗ ಹಾಕಿ ಎಂದು ವಾಗ್ದಾಳಿ ನಡೆಸಿದ್ದಾರೆ. ನಗರದಲ್ಲಿ ನೀರಿನ ಸಮಸ್ಯೆ, ಮಳೆಯಿಂದ ಅನಾಹುತಗಳು, ಚರಂಡಿ ವ್ಯವಸ್ಥೆ ಸರಿಯಾಗಿಲ್ಲ, ಕಸ ವಿಲೇವಾರಿ ಆಗುತ್ತಿಲ್ಲ. ಈ ಎಲ್ಲ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಬೇಕಿದ್ದ ಮೇಯರ್ ಕಚೇರಿಗೆ ಅಧಿಕಾರಿಗಳು ಬೀಗ ಹಾಕಿದ್ದು, ಶಾಸಕರ ಸಿಟ್ಟಿಗೆ ಕಾರಣವಾಗಿದೆ.

ಕಾರು ಸುಪರ್ದಿಗೆ ಪಡೆಯುವುದು ಪದ್ಧತಿ. ಅದರ ಪ್ರಕಾರ ಅಧಿಕಾರಿಗಳು ಕೆಲಸ ಮಾಡಲಿ. ಅದನ್ನು ಬಿಟ್ಟು ನೀತಿ ಸಂಹಿತೆ ಹೆಸರಲ್ಲಿ ಮೇಯರ್, ಉಪಮೇಯರ್ ಕಚೇರಿಗೆ ಬೀಗ ಹಾಕುವುದು ಸರಿಯಲ್ಲ. ಇತಿಹಾಸದಲ್ಲಿಯೇ ಮೊದಲ ಬಾರಿಗೆ ಇಂಥದೊಂದು ಪದ್ಧತಿಗೆ ಅಧಿಕಾರಿಗಳು ನಾಂದಿ ಹಾಡಿದ್ದಾರೆಂದು ಅಭಯ ಪಾಟೀಲ್ ಕಿಡಿ ಕಾರಿದರು.

ಹೊಸ ಕೆಲಸ, ಹೊಸ ಯೋಜನೆ ಘೋಷಣೆ ಮಾಡಬಾರದು ಎಂದು ನೀತಿ ಸಂಹಿತೆ ಹೇಳುತ್ತದೆ. ಆದರೆ ಕೆಲಸ ಮಾಡುವ ಕಚೇರಿಗೆ ಅಧಿಕಾರಿಗಳು ಬೀಗ ಪುಟ 2

## ಮೇಣದಬತ್ತಿ ಬೆಳಕಲ್ಲಿ ಚಿಕಿತ್ಸೆ ವಿಡಿಯೋ ವೈರಲ್

# ವೈದ್ಯನಿಗೆ ಶಾಸಕರಿಂದ ತರಾಟೆ

**ಚಿತ್ರದುರ್ಗ:** ಜಿಲ್ಲೆಯ ಮೊಳಕಾಲ್ಮೂರು ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಮೇಣದಬತ್ತಿ ಬೆಳಕಲ್ಲಿ ಚಿಕಿತ್ಸೆ ನೀಡಿದ್ದ ವಿಡಿಯೋ ವೈರಲ್ ಆಗಿದ್ದು ವೈದ್ಯನಿಗೆ ಮೊಳಕಾಲ್ಮೂರು ಶಾಸಕ ಗೋಪಾಲಕೃಷ್ಣ ತರಾಟೆಗೆ ತೆಗೆದುಕೊಂಡಿದ್ದಾರೆ. ಮೊಳಕಾಲ್ಮೂರು ಸರ್ಕಾರಿ ಆಸ್ಪತ್ರೆ ದುಸ್ಥಿತಿ ವಿಡಿಯೋ ವೈರಲ್ ಆಗುತ್ತಿದ್ದಂತೆ ಕಾಂಗ್ರೆಸ್ ಶಾಸಕ ಎನ್ ವೈ ಗೋಪಾಲಕೃಷ್ಣ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯ ಡಾ.ಸುದೀಂದ್ರಬಾಬುಗೆ ತರಾಟೆ ತೆಗೆದುಕೊಂಡಿದ್ದಾರೆ. ಶಾಸಕ ಹಾಗೂ ವೈದ್ಯನ ನಡುವೆ ಜಟಾಪಟಿ ನಡೆದಿದೆ.

ಆಸ್ಪತ್ರೆ ಬಂದ ಶಾಸಕ ಸೀದಾ ವೈದ್ಯ ಸುಧೀಂದ್ರಬಾಬು ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ. ವೈರಲ್ ವಿಡಿಯೋದಲ್ಲಿ ನೀವಿದ್ದೀರಿ. ಆಸ್ಪತ್ರೆಯಲ್ಲಿ ಸಮಸ್ಯೆ ಇದ್ದರೆ ನನಗೆ ತಿಳಿಸಬೇಕಿತ್ತು ಎಂದು ವೈದ್ಯ ಸುದೀಂದ್ರಬಾಬು ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ. ಈ ವೇಳೆ ವೈದ್ಯ, ವೈರಲ್ ವಿಡಿಯೋಗೂ



ನನಗೂ ಸಂಬಂಧವಿಲ್ಲ. ವಿಡಿಯೋ ಯಾರು ತೆಗೆದಿದ್ದಾರೋ ಗೊತ್ತಿಲ್ಲ ಎಂದು ಉತ್ತರಿಸಿದ್ದು ಶಾಸಕರೆದುರೇ ಬೇಜವಬ್ದಾರಿ ಉತ್ತರ ನೀಡುತ್ತಿದ್ದೀರಿ ಎಂದು ಶಾಸಕರ ಬೆಂಬಲಿಗರು ಗರಂ ಆದ ಘಟನೆ ನಡೆಯಿತು.

ಕೈತೋರಿಸಿ ಮಾತಾಡಬೇಡಿ ಎಂದು ಬೆಂಬಲಿಗರು ವೈದ್ಯರ ಕೈ ಕೆಳಗಿಳಿಸಿ ಆಕ್ರೋಶ ವ್ಯಕ್ತಪಡಿಸಿದರು. ಆಗ ವೈದ್ಯಾಧಿಕಾರಿ ಮೇಲೆ ದೌರ್ಜನ್ಯ ಮಾಡುತ್ತೀರಾ ಎಂದು ವೈದ್ಯ ಪ್ರಶ್ನಿಸಿದ್ದು ಇದು ಪ್ರಜಾಪ್ರಭುತ್ವ ಪುಟ 2

## ರಾಜಸ್ಥಾನದಲ್ಲಿ ಉರಿ ಉರಿ ಬಿಸಿಲು

# ಮರಳಿನಲ್ಲಿ ಹಪ್ಪಳ ಹುರಿದ ಬಿಎಸ್‌ಎಫ್ ಯೋಧ

**ರಾಜಸ್ಥಾನ:** ಉತ್ತರ ಭಾರತದಲ್ಲಿ ಬಹುತೇಕ ಸ್ಥಳಗಳಲ್ಲಿ ಶಾಖದ ಅಲೆ ಮುಂದುವರೆದಿದೆ. ತಾಪಮಾನ 45 ಡಿಗ್ರಿ ಸೆಲ್ಸಿಯಸ್ ದಾಟಿದೆ. ರಾಜಸ್ಥಾನವಂತೂ ಮರುಭೂಮಿ ಇರುವುದರಿಂದ ಬೇರೆಲ್ಲಾ ರಾಜ್ಯಗಳಿಗಿಂತ ಹೆಚ್ಚು ಬಿಸಿಲನ್ನು ಕಾಣುತ್ತಿದೆ. ರಾಜಸ್ಥಾನದಲ್ಲಿ ಬಿಎಸ್ ಎಫ್ ಯೋಧರೊಬ್ಬರು ಮರಳಿನಲ್ಲಿ ಹಪ್ಪಳ ಹುರಿಯುತ್ತಿರುವ ದೃಶ್ಯ ಕಂಡುಬಂದಿದೆ. ಹಪ್ಪಳ ಹುರಿದು ಬಿಸಿಲ ಧಗೆ ಯಾವ ಪ್ರಮಾಣದಲ್ಲಿ ಇದೆ ಎಂಬುದನ್ನು ಸಾಬೀತುಪಡಿಸಿದ್ದಾರೆ.

ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ, ಬಿಕಾನೇರ್ ತೀವ್ರ ಶಾಖದ ಅಲೆಯಿಂದ ತತ್ತರಿಸುತ್ತಿದೆ ಮತ್ತು ತಾಪಮಾನವು 45 ಡಿಗ್ರಿ ಸೆಲ್ಸಿಯಸ್ ದಾಟಿದೆ. ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಪ್ರಕಾರ, ಬುಧವಾರದಂದು ಗರಿಷ್ಠ ತಾಪಮಾನ 46.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.



ಮುಂದಿನ ಮೂರು ದಿನಗಳ ಕಾಲ ಅಲ್ವಾರ್, ಭರತ್‌ಪುರ್, ದೌಸಾ, ಧೋಲ್ ಪುರ್, ಜೈಪುರ್, ಜುಂಜುನು, ಕರೌಲಿ, ಸಿಕರ್, ಬಾರ್ಮರ್, ಬಿಕಾನೇರ್, ಚುರು, ಹನುಮಾನ್‌ಗಢ, ಜೈಸಲ್ಮೇರ್, ಜೋಧ್‌ಪುರ, ನಾಗೌರ್ ಮತ್ತು ಗಂಗಾನಗರದಲ್ಲಿ ತೀವ್ರ ಬಿಸಿಗಾಳಿ ಇರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಹವಾಮಾನ ಇಲಾಖೆಯು ದೆಹಲಿ ಮತ್ತು ರಾಜಸ್ಥಾನ, ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ಪುಟ 2

## ಈ ಗ್ರಾಮದಲ್ಲಿ ರಸ್ತೆ ಇಲ್ಲ

# ನೀರೂ ಇಲ್ಲ

**ಅನುಪ್ಪುರ್ :** ಒಂದೆಡೆ ಮೆಟ್ರೋ ರೈಲು, ಇನ್ನೊಂದೆಡೆ ಬುಲೆಟ್ ರೈಲುಗಳು ಓಡುತ್ತಿರುವ ಈ ಕಾಲದಲ್ಲೂ ಈ ಊರಿಗೆ ಸೈಕಲ್‌ನಲ್ಲಿ ಬರುವುದೂ ಕಷ್ಟ. ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಕತ್ತಲೆಯಲ್ಲೇ ಬದುಕುತ್ತಿರುವ ಸಮುದಾಯ ಇದು. ನಮ್ಮ ಭಾರತ ದೇಶವು ಇಂದು ವಿಶ್ವದ ಅಗ್ರ ರಾಷ್ಟ್ರಗಳಿಗೆ ಸಮನಾಗಿ ನಿಂತಿದೆ ಮತ್ತು ಅನೇಕ ಕ್ಷೇತ್ರಗಳಲ್ಲಿ ವಿಶ್ವದ ಎಲ್ಲಾ ದೇಶಗಳಿಗಿಂತ ಮುಂದಿದೆ. ಆದರೆ ವಿದ್ಯುತ್, ರಸ್ತೆ ಮತ್ತು ನೀರಿಗಾಗಿ ಜನರು ಕಾಯುತ್ತಿರುವ ಅನೇಕ ಸ್ಥಳಗಳು ದೇಶದಲ್ಲಿವೆ. ಮಧ್ಯಪ್ರದೇಶದ ಅನುಪ್ಪುರ್ ಜಿಲ್ಲೆಯಲ್ಲಿರುವ ಬುಡಕಟ್ಟು ಸಮುದಾಯ ಎಲ್ಲಾ ಯೋಜನೆಗಳಿಂದ ವಂಚಿತವಾಗಿದೆ. ಪುಟ 2



### ಬಿಜೆಪಿ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್ ಆರೋಪ

# ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತ

**ಕೆ.ಆರ್.ನಗರ:** ಸಿದ್ದರಾಮಯ್ಯನವರ ಸರ್ಕಾರ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿದ್ದು, ಕಳೆದ ಒಂದು ವರ್ಷಗಳಿಂದ ರಾಜ್ಯ ಅಭಿವೃದ್ಧಿಯಲ್ಲಿ ತೀವ್ರ ಹಿಂದುಳಿದಿದೆ ಎಂದು ಬಿಜೆಪಿ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್ ಹೇಳಿದರು.

ಪಟ್ಟಣದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ಪರವಾಗಿ ಮತಯಾಚನೆ ಮಾಡಿ ಮಾತನಾಡಿದ ಅವರು ಸರ್ಕಾರಿ ನೌಕರರಿಗೆ ಶೇ.10ರಷ್ಟು ವೇತನ ಹೆಚ್ಚಳ ಮಾಡುವುದಾಗಿ ಸರ್ಕಾರ ಭರವಸೆ ನೀಡಿದೆ, ಖಜಾನೆ ಖಾಲಿ ಇರುವ ಸಂದರ್ಭದಲ್ಲಿ 10,500 ಕೋಟಿ ಹಣ ಹೊಂದಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಶಿಕ್ಷಕರು ಮತ್ತು ಪಧವೀಧರ ಶಿಕ್ಷಕರ ಪರವಾಗಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಸಾಕಷ್ಟು ಕೆಲಸ ಮಾಡಿರುವುದರ ಜತೆಗೆ ಅವರ ಸಮಸ್ಯೆಗಳಿಗೆ ಸದಾ ಸ್ಪಂದಿಸುತ್ತಿರುವುದನ್ನು ಕಾಣುತ್ತಿದ್ದೇವೆ ಇದರ ಜತೆಗೆ ಎರಡು ಪಕ್ಷಗಳು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು



ಒತ್ತುಕೊಟ್ಟು ಕೆಲಸ ಮಾಡಿರುವುದನ್ನು ಮನಗಾಣಬೇಕು ಎಂದು ಮನವಿ ಮಾಡಿದರು. ಜಿ.ಪಂ. ಮಾಜಿ ಸದಸ್ಯ ಅಮಿತ್.ವಿ.ದೇವರಹಟ್ಟಿ ಮಾತನಾಡಿ ಕುರುಬರ ಸಂಘದ ಉಪಾಧ್ಯಕ್ಷ ಬಿ.ಸುಬ್ರಮಣ್ಯ ಕುರುಬ ಸಮುದಾಯ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಬೆಂಬಲ ನೀಡಲಿದೆ ಎಂಬುದು ಹಾಸ್ಯಾಸ್ಪದವಾಗಿದೆ ಎಂದು ಟೀಕಿಸಿದರು. ಸುಬ್ರಮಣ್ಯ ವೈಯುಕ್ತಿಕ ವಿಚಾರವನ್ನು ಸಮಾಜಕ್ಕೆ ಮತ್ತು ಸಂಘಕ್ಕೆ ತರುತ್ತಿರುವುದನ್ನು ಖಂಡೀಸುವುದಾಗಿ ಹೇಳಿದ ಜಿ.ಪಂ. ಮಾಜಿ ಸದಸ್ಯರು ನಾನು ಸೇರಿದಂತೆ ಹಲವು ಕುರುಬ ಸಮುದಾಯದ ಮುಖಂಡರು ಮತ್ತು ಪದವೀಧರ ಮತದಾರರು ವಿವೇಕಾನಂದ ಅವರ ಪರವಾಗಿ ಕೆಲಸ ಮಾಡುತ್ತಿರುವುದನ್ನು ಅರಿಯಬೇಕು ಎಂದು ಸಲಹೆ ನೀಡಿದರು.

ಕುರುಬ ಸಮುದಾಯ ಮತ್ತು ಸಂಘ ಒಂದು ಪಕ್ಷಕ್ಕೆ ಸೀಮಿತಗೊಂಡಿಲ್ಲ ಸಂಘ ಸಮುದಾಯದ ಏಳಿಗೆಗೆ ದುಡಿಯಬೇಕು ವೈಯುಕ್ತಿಕ ಲಾಭಕ್ಕಾಗಿ ಈ ರೀತಿಯ ಹೇಳಿಕೆ ನೀಡುತ್ತಿರುವ ಸುಬ್ರಮಣ್ಯ ಕೂಡಲೇ ತಮ್ಮ ಹೇಳಿಕೆಯನ್ನು ವಾಪಾಸ್ಸು ಪಡೆಯಬೇಕು ಎಂದು ಒತ್ತಾಯಿಸಿದರು.

ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯ ಕಾರ್ಯದರ್ಶಿ ಹೆಚ್.ಡಿ.ಪ್ರಭಾಕರ್‌ಜೈನ್, ತಾಲೂಕು ಜೆಡಿಎಸ್ ಅಧ್ಯಕ್ಷ ಹೆಚ್.ಸಿ.ಕುಮಾರ್, ಬಿಜೆಪಿ ಅಧ್ಯಕ್ಷರಾದ ಸಾ.ರಾ.ತಿಲಕ್, ಹೊಸೂರುಧರ್ಮ, ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ದಾಕ್ಷಾಯಿಣಿ, ಪುರಸಭೆ ಸದಸ್ಯರಾದ ಉಮೇಶ್, ಸಂತೋ?ಗೌಡ, ಮಾಜಿ ಸದಸ್ಯರಾದ ಜಿ.ಪಿ.ಮಂಜು, ನಂಜುಂಡ, ಉಮಾಶಂಕರ್(ಗುಂಡ), ರಂಗಸ್ವಾಮಿ, ಜೆಡಿಎಸ್ ನಗರ ಪ್ರಧಾನ ಕಾರ್ಯದರ್ಶಿ ರುದ್ರೇಶ್(ಅಯ್ಯ) ಮತ್ತಿತರರು ಹಾಜರಿದ್ದರು.

## ಇಂದು ಬುದ್ಧ ಪೂರ್ಣಿಮೆ

**ಬೇಲೂರು :** ತಾಲೂಕಿನ ಬಿಕ್ಕೋಡು ಸಮೀಪದ ಮದಘಟ್ಟ ಗಾಂಧಾರ ಬುದ್ಧ ವಿಹಾರದಲ್ಲಿ ಗುರುವಾರ 2568 ನೇ ವೈಶಾಖ ಬುದ್ಧ ಪೂರ್ಣಿಮೆ ಕಾರ್ಯಕ್ರಮ ಆಯೋಜಿಸಲಾಗಿದ್ದು ಬುದ್ಧ, ಬಸವ, ಅಂಬೇಡ್ಕರ್ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಗಾಂಧಾರ ಬುದ್ಧ ವಿಹಾರ ಚಾರಿಟಬಲ್ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ವಕೀಲ ರಾಜು ತಿಳಿಸಿದರು. ವೈಶಾಖ ಪೌರ್ಣಮೆಯ ಬುದ್ಧ ಜಯಂತಿ ಅಂಗವಾಗಿ ಮಧಘಟ್ಟ ಗಾಂಧಾರ ಬುದ್ಧ ವಿಹಾರಕ್ಕೆ ಸೋಮವಾರ ಆಗಮಿಸಿದ್ದ ಬೆಂಗಳೂರಿನ ಮಹಾ ಬೋದಿ ಸೊಸೈಟಿಯ ಬಿಕ್ಕು ಸಂಘದವರನ್ನು ಸ್ವಾಗತಿಸಿ ಮಾತನಾಡಿದ ಅವರು, ಬುದ್ಧ ಜಯಂತಿಯಂದು ಗುರುವಾರ ಬೆಳ್ಳಗೆ 9 ಗಂಟೆಗೆ ಬೇಲೂರು ಪಟ್ಟಣದಲ್ಲಿರುವ ಡಾ.ಅಂಬೇಡ್ಕರ್‌ರವರ ಪ್ರತಿಮೆಗೆ ಪದಾಧಿಕಾರಿಗಳು ಹೂವಿನ ಮಾಲಾರ್ಪಣೆ ಸಲ್ಲಿಸಿ, ಬುದ್ಧ ವಿಹಾರಕ್ಕೆ ತೆರಳಲು ಬೈಕ್ ಜಾಥಾಕ್ಕೆ ಚಾಲನೆ ನೀಡುವ ಮೂಲಕ ಭಗವಾನ್ ಬುದ್ಧರ ಕರುಣೆ ಪ್ರೀತಿ ಮೈತ್ರಿ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುವುದು. ವಿಹಾರದ ಅಧ್ಯಕ್ಷರಾದ ಪೂಜ್ಯ ಭಂತೆ ಬೋದಿದತ್ತ ಮಹಾ ಥೇರಾರವರ ದಿವ್ಯ ಸಾನಿಧ್ಯದಲ್ಲಿ ವಿಹಾರದಲ್ಲಿ ಬುದ್ಧ ಪೂಜೆ, ದೀಪ ಬೆಳಗಿಸುವುದು, ತ್ರಿರತ್ನ ಪೂಜಾ, ಪರಿತ್ತ ಪಠಣೆ, ತಿಸರಣ ಮತ್ತು ಪಂಚಶೀಲ ಭೋಧನೆ ನೆಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿದ್ದು ನಿವೃತ್ತ ಐಎಎಸ್ ಅಧಿಕಾರಿ ಹಾಗೂ ವಿಹಾರದ ಗೌರವ ಕಾರ್ಯದರ್ಶಿ ಸಿದ್ದಯ್ಯರವರು ರಕ್ತದಾನ ಶಿಬಿರಕ್ಕೆ ಚಾಲನೆ ನೀಡಲಿದ್ದಾರೆ. ಸಂಜೆ 5 ಗಂಟೆಗೆ ಬುದ್ಧ ಪೂಜೆ ಹಾಗೂ 7 ಗಂಟೆಗೆ ಬೆಳಕಿನ ದೀಪೋತ್ಸವ ಆಯೋಜಿಸಲಾಗಿದೆ. ಈ ಒಂದು ಅರ್ಥ ಪೂರ್ಣ ಕಾರ್ಯಕ್ರಮಕ್ಕೆ ಬುದ್ಧ, ಬಸವ, ಅಂಬೇಡ್ಕರ್ ಅಭಿಮಾನಿಗಳು, ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದರು. ಗಾಂಧಾರ ಬುದ್ಧ ವಿಹಾರ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳಾದ ಗಂಗಾಧರ್, ಕುಮಾರ್ ಮಾಳೇಗೆರೆ, ಮಂಜು ಮೊಗಸಾವರ, ವಿರೂಪಾಕ್ಷ ಇತರರಿದ್ದರು.



## ಶರಣರ ಹೋರಾಟದಿಂದ ಸಮಾಜದಲ್ಲಿ ಬದಲಾವಣೆ

**ಮೈಸೂರು:** 12ನೇ ಶತಮಾನದಲ್ಲಿ ಶರಣರು ನಡೆಸಿದ ಕ್ರಾಂತಿಕಾರಕ ಹೋರಾಟ ಸಾಮಾಜಿಕ ವ್ಯವಸ್ಥೆಯನ್ನೇ ಬದಲಾವಣೆ ಮಾಡಿತು ಎಂದು ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವತಿಯಿಂದ ಮುಕ್ತ ಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣ ಹಾಗೂ ಶರಣರ ವಚನಗಳು ಸಾಮಾಜಿಕ ಬದಲಾವಣೆ ಚಳವಳಿಯ ದರ್ಶನ ಮಾಡಿಸುತ್ತವೆ. ಶರಣರು ಎನ್ನ ಕಾಲೇ ಕಂಬ, ದೇಹವೇ ದೇಗುಲ, ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ ಎನ್ನುವ ಮೂಲಕ ಜನರಿಗೆ ವಾಸ್ತವದ ಅರಿವು ಮೂಡಿಸಲು ಯತ್ನಿಸಿದರು. ತತ್ವ ಜ್ಞಾನದ ಮೂಲಕ ಸಾಮಾಜಿಕ ಕ್ರಾಂತಿ ಹುಟ್ಟುಹಾಕಿದರು. ಇದರಿಂದಾಗಿ ವಚನಗಳು ಸಮಾಜದಲ್ಲಿ ಸಾಕಷ್ಟು ಬದಲಾವಣೆ ತಂದಿವೆ ಎಂದರು.

ಮನುವಾದಿಗಳು ಬೌದ್ಧ ಧರ್ಮವನ್ನು ಓಡಿಸಿದರು. ಜೈನ ಧರ್ಮವನ್ನು ದುರ್ಬಲಗೊಳಿಸಿದರು. ಮೂಢನಂಬಿಕೆಗಳನ್ನು ವ್ಯಾಪಕವಾಗಿ ಹುಟ್ಟುಹಾಕಿದರು. ಇದು ದಕ್ಷಿಣ ಭಾರತದಲ್ಲಿ ಉತ್ತುಂಗದಲ್ಲಿತ್ತು. ಅಂತಹ ಸಮಯದಲ್ಲಿ ಬಸವಣ್ಣ ಅವರಂತಹ ಶರಣರು, ತಮ್ಮ ವಚನಗಳ ಮೂಲಕ ಜನರಿಗೆ ಸತ್ಯವನ್ನು ತಿಳಿಸುವ ಯತ್ನವನ್ನು ಪರಿಣಾಮಕಾರಿಯಾಗಿ ಮಾಡಿದ ಪರಿಣಾಮ, ಸಮಾಜದಲ್ಲಿ ಹೊಸ ಬದಲಾವಣೆ ಬಂದಿತು ಎಂದರು.

ಶರಣರು ಎನಗಿಂತ ಕಿರಿಯರಿಲ್ಲ ಎನ್ನುವ ಮೂಲಕ ಎಲ್ಲರನ್ನೂ ಗೌರವಿಸಿದರು. ತಂದೆ, ತಾಯಿ, ಬಂಧು-ಬಳಗದಲ್ಲಿ ದೇವರನ್ನು ಕಂಡರು. ಆದರೆ, ಇತ್ತೀಚಿನ ದಿನಗಳಲ್ಲಿ ತಂದೆ, ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸಿ ಕಲ್ಲು ದೇವರಗಳನ್ನು ಪೂಜೆ ಮಾಡುತ್ತಾರೆ. ಅಂತಹವರು ಶರಣರ ವಚನಗಳ ಸಾರವನ್ನು ತಿಳಿದುಕೊಳ್ಳಬೇಕು. ಅಲ್ಲದೇ ಕಾಯಕವೇ ದೇವರು ಎಂಬ ಭಾವನೆ ಬರಬೇಕು ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಯೋಜಕ ಡಾ.ಎನ್.ಆರ್.ಚಂದ್ರೇಗೌಡ, ಬಸವಣ್ಣ ಹಾಗೂ ಶರಣರು ತಮ್ಮ ವಚನಗಳ ಮೂಲಕ ಸಾಮಾಜಿಕ ಅಸಮಾನತೆಯನ್ನು ತೊಡೆದುಹಾಕಲು ಶ್ರಮಿಸಿದರು. ಅಂತಹ ಮಹನೀಯರ ಬಗ್ಗೆ ಇಂದಿನ ಹಾಗೂ ಮುಂದಿನ ಪೀಳಿಗೆಗೆ ತಿಳಿಸುವ ಅವಶ್ಯಕತೆ ಇದೆ. ಶರಣರ ಬಗ್ಗೆ ತಿಳಿದಷ್ಟು ಜೀವನದ ಮೌಲ್ಯ ನಮಗೆ ಗೊತ್ತಾಗುತ್ತದೆ ಎಂದರು. ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ, ಡಾ.ಎಚ್.ವಿಶ್ವನಾಥ್, ಡೀನ್‌ಗಳಾದ ಎನ್.ಲಕ್ಷ್ಮೀ, ಪ್ರೊ.ಎಂ.ರಾಮನಾಥಂ ನಾಯ್ಡು ಹಾಜರಿದ್ದರು.



# ಮಳೆಹಾನಿ ಸಂತ್ರಸ್ತರಿಗೆ ಪರಿಹಾರ ನೀಡಿ

## ನಷ್ಟಕೊಳಗಾದ ರೈತರೊಂದಿಗೆ ನಿಂತು ಧೈರ್ಯ ತುಂಬಿ: ಹೆಚ್‌ಡಿ.ಕುಮಾರಸ್ವಾಮಿ

**ಪಿರಿಯಾಪಟ್ಟಣ:** ಮಳೆಹಾನಿಯಿಂದ ಸಂಕಷ್ಟಕ್ಕೆ ಒಳಗಾದವರಿಗೆ ಸರ್ಕಾರ ಶೀಘ್ರ ಪರಿಹಾರ ಒದಗಿಸುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದರು.

ಪಿರಿಯಾಪಟ್ಟಣ ತಾಲೂಕಿನ ವಿವಿಧೆಡೆ ಮಳೆಯಿಂದ ಹಾನಿಯಾದ ಪ್ರದೇಶಗಳನ್ನು ವೀಕ್ಷಿಸಿ ಅವರು ಮಾತನಾಡಿದರು. ಮಳೆಯಿಂದ ಹಾನಿಯಾದ ಪ್ರದೇಶಗಳಿಗೆ ಸರ್ಕಾರದ ಯಾವ ಸಚಿವರಾಗಲಿ ಈವರೆಗೂ ಭೇಟಿ ನೀಡಿ ರೈತರಿಗೆ ಸಾಂತ್ವನ ಹೇಳುವ ಕೆಲಸ ಮಾಡಿಲ್ಲ, ಕನಿಷ್ಠ ಮಾಧ್ಯಮಗಳ ಮೂಲಕವಾದರೂ ರೈತರಿಗೆ ಧೈರ್ಯ ತುಂಬುವ ಕೆಲಸ ಮಾಡುತ್ತಿಲ್ಲ, ಬರ ಪರಿಹಾರ ನೀಡುವ ವಿಚಾರದಲ್ಲಿ ಕೇಂದ್ರ ಸರ್ಕಾರ ನೀಡುತ್ತಿಲ್ಲ ಎಂದು ದೂರಿದ ಮುಖ್ಯಮಂತ್ರಿ ಮತ್ತು ಸಚಿವರು ಮತ್ತೆ ಈಗ ಮಳೆ ಹಾನಿಯಿಂದ ನಷ್ಟಕ್ಕೆ ಒಳಗಾದ ರೈತರು ಹಾಗೂ ಸಾರ್ವಜನಿಕರಿಗೆ ಶೀಘ್ರ ಪರಿಹಾರ ವಿತರಿಸಲು ಮತ್ತೆ ಕೇಂದ್ರ ಸರ್ಕಾರದ ಕಡೆ ದೂರುತ್ತಾರೆ ಎಂದು ವ್ಯಂಗ್ಯವಾಡಿ ಈ ಬಾರಿ ಬರಗಾಲದ ನಡುವೆಯೂ ಮಳೆಯಾದ ಸಂದರ್ಭ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು ಆದರೆ ಅತಿ ಹೆಚ್ಚು ಮಳೆಯಿಂದಾಗಿ ನಷ್ಟಕೊಳಗಾಗಿದ್ದಾರೆ, ರಾಜ್ಯದ ಹಲವೆಡೆ ವ್ಯಾಪಕ ಮಳೆಯಿಂದ ವಾಣಿಜ್ಯ ಬೆಳೆಗಳಾದ ಬಾಳೆ, ದಾಳಿಂಬೆ, ಅಡಿಕೆ, ಶುಂಠಿ, ತಂಬಾಕು ಮತ್ತಿತರ ಬೆಳೆಗಳು ನೆಲಕಚ್ಚಿ ರೈತರಿಗೆ ಅಪಾರ ಪ್ರಮಾಣದ ನಷ್ಟ ಉಂಟಾಗಿದೆ ಬೆಳೆ ಹಾನಿಯಿಂದ ನಷ್ಟಕ್ಕೊಳಗಾದ ರೈತರು ಆತ್ಮಹತ್ಯೆ ದಾರಿ ತುಳಿಯಬೇಡಿ. ನಿಮ್ಮೊಂದಿಗೆ ನಾವಿದ್ದೇವೆ ಎಂದು ಹೇಳಿ ಕೂಡಲೇ ಸರ್ಕಾರ ಅಧಿಕಾರಿಗಳ ಮೂಲಕ ವರದಿ ತರಿಸಿಕೊಂಡು ಪರಿಹಾರ ವಿತರಿಸುವಂತೆ ಒತ್ತಾಯಿಸಿದರು.

ಪಿರಿಯಾಪಟ್ಟಣ ತಾಲೂಕಿನ ಶಿಲ್ಪಾ ಎಂಬ ರೈತ ಮಹಿಳೆಯೊಬ್ಬರು ತಲಾ 50 ಸಾವಿರ ರೂ ಗಳಂತೆ 7 ಜನರಿಂದ ಕೃಷಿ ಭೂಮಿ ಗುತ್ತಿಗೆ ಪಡೆದು ಸಾಲ ಮಾಡಿ ತಂಬಾಕು ನಾಟಿ ಮಾಡಿ ಸುಮಾರು 7 ಲಕ್ಷ ರೂ ವೆಚ್ಚವಾಗಿದೆ ಆದರೆ ಈಗ ಮಳೆಯಿಂದ ತಂಬಾಕು ಬೆಳೆ ಸಂಪೂರ್ಣವಾಗಿ ಕೊಚ್ಚಿ ಹೋಗಿದ್ದು ಆ ಮಹಿಳೆ ಸಾಲ ತೀರಿಸುವ ಬಗೆ ಹೇಗೆ ಎಂದು ಪ್ರಶ್ನಿಸಿ ಇದೇ ರೀತಿ ರಾಜ್ಯದಲ್ಲಿ ಲಕ್ಷಾಂತರ ರೈತರು ನಷ್ಟ ಅನುಭವಿಸಿದ್ದು ಸರ್ಕಾರ ಅವರ ನೆರವಿಗೆ ಬರುವ ಅಗತ್ಯವಿದೆ, ಮಳೆಯಿಂದ ಆಗಿರುವ ನಷ್ಟದ ಪ್ರಮಾಣವನ್ನು ನನ್ನ ಕೇವಲ ಎರಡು ಗಂಟೆಯ ಭೇಟಿಯ ಅವಧಿಯಲ್ಲಿ ಅಂದಾಜಿಸಲು ಸಾಧ್ಯವಿಲ್ಲ ಎಂದ ಅವರು ಸರ್ಕಾರ ಕೂಡಲೇ ಅಧಿಕಾರಿಗಳನ್ನು ನೇಮಿಸಿ ಮಳೆಯಿಂದ ಆಗಿರುವ ನಷ್ಟದ ಬಗ್ಗೆ ಮಾಹಿತಿ ಪಡೆಯಲಿ ಎಂದರು.

ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸಿರುವ ರಾಗಿಗೆ ಈವರೆಗೂ ಹಣ ಬಿಡುಗಡೆ ಮಾಡಿಲ್ಲ ಖರೀದಿ ಸಂದರ್ಭ 4 ಕೆಜಿ ಕಡಿತಗೊಳಿಸುತ್ತಿರುವುದು ವರದಿಯಾಗಿದ್ದು, ಪದೇಪದೇ ರೈತನ ಮೇಲೆ



### ಮಳೆಹಾನಿ ಪ್ರದೇಶ ಪರಿಶೀಲಿಸಿದ ಸಚಿವರು

**ಪಿರಿಯಾಪಟ್ಟಣ ತಾಲೂಕಿನಲ್ಲಿ ಮಳೆಯಿಂದ ಹಾನಿ ಉಂಟಾದ ಸ್ಥಳಗಳಿಗೆ ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು. ಬೆಟ್ಟದಪುರ ಸಮೀಪದ ಚಪ್ಪರದಹಳ್ಳಿ ಹಾಗೂ ಹಾರನಹಳ್ಳಿ ವ್ಯಾಪ್ತಿಯ ಹಲವು ಪ್ರದೇಶಗಳಿಗೆ ಭೇಟಿ ನೀಡಿ ಬಳಿಕ ಹಳಿಯೂರು ಗ್ರಾಮದ ಕರಿಕಟ್ಟೆ ಹಳ್ಳದಲ್ಲಿ ಕುಸಿತ ಕಂಡ ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರು ಹಾಗೂ ರೈತರಿಂದ ಸಮಸ್ಯೆ ಬಗ್ಗೆ ಮಾಹಿತಿ ಪಡೆದುಕೊಂಡು ಬಳಿಕ ಸಂಭಂದಪಟ್ಟ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಒತ್ತುವರಿಯಾಗಿರುವ ಜಾಗವನ್ನು ತೆರವುಗೊಳಿಸಿ ಉಂಟಾಗಿರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸೂಚನೆ ನೀಡಿದರು. ಈ ವೇಳೆ ಹಾರನಹಳ್ಳಿ ಗ್ರಾಮದಲ್ಲಿ ಹುಲಿಕೆರೆ ಮುಖ್ಯರಸ್ತೆ ಕುಸಿದಿರುವ ಸ್ಥಳ ಹಾಗೂ ತರಿಕಲ್ಲು ಸೇರಿದಂತೆ ಹಲವು ಗ್ರಾಮಗಳಿಗೆ ಭೇಟಿ ನೀಡಿ ಮಾಹಿತಿ ಪಡೆದು ಕೂಡಲೆ ಸಮಸ್ಯೆ ಬಗೆಹರಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಸರ್ಕಾರದ ಮಟ್ಟದಲ್ಲಿ ಪರಿಹಾರ ನೀಡುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಸುರೇಂದ್ರ, ಮೂರ್ತಿ, ತಾಲೂಕು ಪಂಚಾಯಿತಿ ಇಒ ಡಿ.ಬಿ ಸುನೀಲ್ ಕುಮಾರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಸಾದ್, ಆರ್ ಎಫ್‌ಒ ಕಿರಣ್ ಕುಮಾರ್, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇಂಜಿನಿಯರ್ ಹಿತೇಂದ್ರ, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಗ್ರಾಮದ ಮುಖಂಡರು, ಪಕ್ಷದ ಪದಾಧಿಕಾರಿಗಳು, ರೈತರು ಇದ್ದರು.**

ಅನ್ಯಾಯವಾಗುತ್ತಿದ್ದರೂ ಸರ್ಕಾರದ ಗಮನಕ್ಕೆ ಬರುತ್ತಿಲ್ಲವೇ ಎಂದು ಪ್ರಶ್ನಿಸಿದರು. ನಾನು ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದೇನೆ ಎಂಬ ವಿಷಯ ತಿಳಿದ ತಾಲೂಕಿನ ಶಾಸಕ ಹಾಗೂ ಸಚಿವ ಕೆ.ವೆಂಕಟೇಶ್ ಅವರು ನನಗಿಂತ ಒಂದು ಗಂಟೆ ಮುಂಚೆಯೇ ತರಾತುರಿಯಲ್ಲಿ ಭೇಟಿ ನೀಡಿ ಹೋಗಿದ್ದಾರೆ ಅವರನ್ನು ಅಭಿನಂದಿಸುತ್ತೇನೆ ಎಂದು ವ್ಯಂಗ್ಯದ ಮಾತನಾಡಿ ಬೆಳೆ ನಷ್ಟ ಅನುಭವಿಸಿರುವ ರೈತರಿಗೆ ಸಾಂತ್ವನ ಹೇಳುವ ಬದಲು ಕರಾಬು ಜಾಗದಲ್ಲಿ ಕೃಷಿ ಚಟುವಟಿಕೆ ಕೈಗೊಂಡಿದ್ದೀರಾ ಎಂದು ಸಚಿವರು ಪ್ರಶ್ನಿಸಿ ಹೋಗಿರುವುದು ಅವರ ಘನತೆಗೆ ತಕ್ಕುದಲ್ಲ ಎಂದರು. ಮಳೆ ಹಾನಿಯಿಂದಾಗಿ ನಷ್ಟ ಅನುಭವಿಸಿರುವ ರೈತರಿಗೆ ಸರ್ಕಾರದಿಂದ ನೀಡಲಾಗುವ ಪರಿಹಾರ ಯಾವುದಕ್ಕೂ ಸಾಲುವುದಿಲ್ಲ ಜೆಡಿಎಸ್ ಪಕ್ಷದ ಮುಖಂಡರು ಶಾಸಕರೊಂದಿಗೆ ಚರ್ಚಿಸಿ ನಮ್ಮ ಪಕ್ಷದ ವತಿಯಿಂದಲೂ ರೈತರಿಗೆ ನೆರವು ನೀಡಲು ಚಿಂತನೆ ಮಾಡುವುದಾಗಿ ತಿಳಿಸಿದರು. ಈ ವೇಳೆ ಪಿರಿಯಾಪಟ್ಟಣ ತಾಲ್ಲೂಕಿನ ಚಪ್ಪರದಹಳ್ಳಿ, ಹಾರನಹಳ್ಳಿ ಹಾಗೂ ಅಂಬಲಾರೆ ಗ್ರಾಮಗಳಿಗೆ ಭೇಟಿ ನೀಡಿ ಮಳೆಯಿಂದ ಹಾನಿಯಾದ ಪ್ರದೇಶಗಳನ್ನು ವೀಕ್ಷಿಸಿದರು.

ಈ ಸಂದರ್ಭ ಶಾಸಕರಾದ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಕೆ.ಮಹದೇವ್, ತಾಲೂಕು ಜೆಡಿಎಸ್ ಘಟಕ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಬಿಜೆಪಿ ಅಧ್ಯಕ್ಷ ಕೊಪ್ಪ ರಾಜೇಂದ್ರ, ಮಾಜಿ ಮೇಯರ್ ರವಿಕುಮಾರ್, ಮುಖಂಡರಾದ ಸಿ.ಎನ್ ರವಿ, ಎಂ.ಎಂ ರಾಜೇಗೌಡ, ಆರ್.ಟಿ ಸತೀಶ್, ಅತ್ತರ್ ಮತಿನ್, ವಿದ್ಯಾಶಂಕರ್, ಸೇರಿದಂತೆ ಜೆಡಿಎಸ್ ಹಾಗೂ ಬಿಜೆಪಿ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಇದ್ದರು.

## ಭಾರಿ ಮಳೆಗೆ ಅಂಗಡಿ ಮುಂಗಟ್ಟುಗಳಿಗೆ ನುಗ್ಗಿದ ನೀರು

**ಹನಗೋಡು:** ಗ್ರಾಮದ ಸುತ್ತಮುತ್ತಲೂ ಸುರಿದ ಭಾರಿ ಮಳೆಗೆ ಮನೆಗಳಿಗೆ ಮತ್ತ ಬೆಳೆಗೆ ನೀರು ನುಗ್ಗಿ ಸಾಕಷ್ಟು ಅನಾಹುತವಾಗಿದೆ.

ಮಳೆಯಿಂದಾಗಿ ಅಂಗಡಿ- ಮುಂಗಟ್ಟುಗಳು, ಬೇಕರಿ ಒಳಗೆ ನೀರು ನುಗ್ಗಿ ಕೆಲ ಸಮಯ ಪರದಾಡುವಂತ ಪರಿಸ್ಥಿತಿ ಎದುರಾಯಿತು.

ಸಂಜೆ ಒಂದು ಗಂಟೆ ಕಾಲ ಸುರಿದ ಸತತ ಮಳೆಗೆ ಆಂಜನೇಯ ದೇವಸ್ಥಾನದ ಪಕ್ಕದ ಶ್ರೀಧರ್ ಹಾಗೂ ಕಾಂತರಾಜುರಿಗೆ ಸೇರಿದ ಬೇಕರಿ, ಕೃಷ್ಣಮೆಡಿಕಲ್ಸ್, ರಾಮಣ್ಣರ ದಿನಸಿ ಅಂಗಡಿ, ಪ್ರಕಾಶ್ ಅವರ ಫ್ಯಾನ್ಸಿ ಸ್ಟೋರ್ ಹಾಗೂ ಮನೆಗೆ ನೀರು ನುಗ್ಗಿತು. ಇದರಿಂದ ಅಂಗಡಿ ದಿನಸಿ, ಬೇಕರಿ ಪದಾರ್ಥಗಳಿಗೆ ಹಾನಿಯಾಗಿದೆ. ಮಳಿಗೆಗೆ ನುಗ್ಗಿದ ನೀರನ್ನು ಹರಸಾಹಸಪಟ್ಟು ಹೊರ ಹಾಕಬೇಕಾದ ಪರಿಸ್ಥಿತಿ ಎದುರಾಯಿತು.

ಪ್ರತಿ ಬಾರಿ ಮಳೆ ಬಂದಾಗ ಚರಂಡಿಯಲ್ಲಿ ಸರಿಯಾದ ನೀರು ಹರಿದು ಹೋಗದ ಕಾರಣದಿಂದಾಗಿ ಅಂಗಡಿ ಒಳಗಡೆ ನೀರು ಗುತ್ತಿರುವುದು ಪ್ರತಿ ಬಾರಿಯೂ ಕಂಡು ಬಂದರೂ ಗ್ರಾಮ ಪಂಚಾಯಿತಿ ಕಣ್ಮುಚ್ಚಿ ಕುಳಿತಿದೆ

ಹನಗೋಡು ಸಮೀಪದ ಬೋವಿ ಕಾಲೋನಿಯ ಗ್ರಾಮದ ಮಹದೇವ ಬೋವಿ ಅವರ ಮನೆ ಮಳೆಯಿಂದಾಗಿ ಬಿದ್ದು ಮನೆಯೊಳಗಿದ್ದ ದವಸ, ಧಾನ್ಯ, ಬಟ್ಟೆ ಸೇರಿದಂತೆ ಪದಾರ್ಥಗಳು ನೀರಿನಲ್ಲಿ ತೋಯ್ದು ಹಾಳಾಗಿ ಹೋಗಿದ್ದು ಅದೇ ಗ್ರಾಮದ ಸಣ್ಣಮ್ಮ ರವರ ತಂಬಾಕು ಬ್ಯಾರನ್ ಸಹ ಬಿದ್ದು ಹೋಗಿದೆ.

ಅಲ್ಲದೆ ಹನಗೋಡು ಅಬ್ಬೂರು, ಶಿಂಡೇನಹಳ್ಳಿ, ನೇಗತ್ತೂರು, ಕಚವಿನಹಳ್ಳಿ, ನೇರಳಕುಪ್ಪೆ, ಬಿ ಆರ್ ಕಾವಲು, ಮುದಗನೂರು ದೊಡ್ಡ ಹೆಜ್ಜೂರು, ಹಿಂಡಗುಡ್ಲು,ಗ್ರಾಮಗಳ ಜಮೀನುಗಳಲ್ಲಿ ಬಾರೀ ಪ್ರಮಾಣದ ನೀರು ಹರಿದು ಶುಂಠಿ ಹಾಗೂ ತಂಬಾಕು ಹೊಲಗಳು ನೀರಿನಲ್ಲಿ ಮುಳುಗಿ ಸಾಕಷ್ಟು ಬೆಳೆ ಹಾನಿಯಾಗಿರುವ ಬಗ್ಗೆ ವರದಿಯಾಗಿದೆ.



## ಇಂದು ಅಭಿನಂದನೆ ಸಲ್ಲಿಕೆ

**ಮೈಸೂರು:** ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡಿರುವ ಮುಳ್ಳೂರು ಗುರುಪ್ರಸಾದ್ ಅವರಿಗೆ ಮೇ 23ರಂದು ಅಭಿನಂದನ ಸಮಾರಂಭ ಆಯೋಜಿಸಲಾಗಿದೆ. ಅಂದು ಮಧ್ಯಾಹ್ನ 2ಕ್ಕೆ ನಗರದ ಚಾಮುಂಡಿಪುರಂನಲ್ಲಿರುವ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ನಡೆಯುವ ಸಭೆಯಲ್ಲಿ ಮುಳ್ಳೂರು ಗುರುಪ್ರಸಾದ್ ಅವರನ್ನು ಅಭಿನಂದಿಸಲಾಗುತ್ತಿದೆ. ಭಾನುಪ್ರಕಾಶ್ ಶರ್ಮ, ವೆಂಗಿಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಬ್ರಾಹ್ಮಣ ಹಿರಿಯ ಮುಖಂಡ ಕೆ.ರಘುರಾಂ ವಾಜಪೇಯಿ, ಹೊಯ್ಸಳ ಕರ್ನಾಟಕದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್ ಪಾಲ್ಗೊಳ್ಳಲಿದ್ದಾರೆ.

## ಸಾಂಕ್ರಾಮಿಕ ರೋಗ ತಡೆಗೆ ಮಹಾನಗರ ಪಾಲಿಕೆ ಸೂಚನೆ

**ಮೈಸೂರು:** ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾಲರಾ ರೋಗ ಪತ್ತೆಯಾಗಿದ್ದು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಲಾಗಿದೆ. ಸಾರ್ವಜನಿಕ ನೀರಿನ ಕೊಳಾಯಿ ಮತ್ತು ಕುಡಿಯುವ ನೀರನ್ನು ಸಂಗ್ರಹಿಸುವ ಸ್ಥಳವನ್ನು ಸ್ವಚ್ಛವಾಗಿಡುವುದು, ಕುದಿಸಿ ಆರಿಸಿದ ನೀರನ್ನೇ ಕುಡಿಯುವುದು, ಶುದ್ಧ ನೀರಿನ ಘಟಕದಲ್ಲಿನ ನೀರನ್ನು ಉಪಯೋಗಿಸುವುದು, ಹೋಟೆಲ್‌ಗಳಲ್ಲಿ ಕಡ್ಡಾಯವಾಗಿ ಕುಡಿಯಲು ಬಿಸಿ ನೀರನ್ನು ಗ್ರಾಹಕರಿಗೆ ನೀಡುವುದು, ರಸ್ತೆ ಬದಿಯಲ್ಲಿ ಮಾರಾಟ ಮಾಡುವ ತಂಪು ಪಾನೀಯ ಮತ್ತು ಸೋಡಾಗಳನ್ನು ಸಾರ್ವಜನಿಕರು ಸಾಧ್ಯವಾದಷ್ಟು ಜಾಗೃತೆಯಿಂದ ಉಪಯೋಗಿಸುವುದು, ಊಟ ಮಾಡುವ ಮುನ್ನ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಸ್ವಚ್ಛಗೊಳಿಸಬೇಕು, ಹೋಟೆಲ್ ಅಥವಾ ರೆಸ್ಟೋರೆಂಟ್ ಅಥವಾ ಬೇಕರಿಗಳಲ್ಲಿ ಬಿಸಿಯಾದ ಆಹಾರ ಪದಾರ್ಥಗಳನ್ನು ಗ್ರಾಹಕರಿಗೆ ನೀಡುವುದು ಮತ್ತು ತಿಂಡಿ ತಿನಿಸು ಮಾರಾಟ ಮಾಡುವ ಎಲ್ಲಾ ವ್ಯಾಪಾರಸ್ಥರು ಮತ್ತು ಹೋಟೆಲ್‌ನಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ಕಾರ್ಮಿಕರು ಕಡ್ಡಾಯವಾಗಿ ಸುರಕ್ಷಾ ಧಿರಿಸುಗಳನ್ನು ಧರಿಸುವುದು. ರಸ್ತೆ ಬದಿಯಲ್ಲಿ ತೆರೆದ ರೀತಿಯಲ್ಲಿ ಮಾರಾಟ ಮಾಡುವ ಆಹಾರ ಪದಾರ್ಥ, ತಿಂಡಿ ತಿನಿಸುಗಳು, ಕತ್ತರಿಸಿದ ಹಣ್ಣು ಹಂಪಲುಗಳನ್ನು ತಿನ್ನಬಾರದು. ಹೊರಗಡೆ ಬಂದಾಗ ಬಾಟಲ್‌ಗಳಲ್ಲಿ ನೀರನ್ನು ಸಂಗ್ರಹಿಸಿ ಸಾಧ್ಯವಾದಷ್ಟು ಮನೆಯ ನೀರನ್ನು ಬಳಸುವುದು. ಸಿದ್ಧಪಡಿಸಿದ ಆಹಾರ ಪದಾರ್ಥಗಳ ಮೇಲೆ ಕ್ರಿಮಿಕೀಟಗಳು ಕುಳಿತುಕೊಳ್ಳದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಸಾರ್ವಜನಿಕರು ಹೋಟೆಲ್ ಮಾಲೀಕರು ಮತ್ತು ಬೀದಿಬದಿ ವ್ಯಾಪಾರಸ್ಥರು ಸಾಂಕ್ರಾಮಿಕ ರೋಗಗಳು ಹರಡದಂತೆ ಮಹಾನಗರ ಪಾಲಿಕೆಯೊಂದಿಗೆ ಸಹಕರಿಸುವಂತೆ ಮಹಾನಗರ ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

## ಇಂದು ವಿಶೇಷ ಉಪನ್ಯಾಸ

**ಮೈಸೂರು:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ವತಿಯಿಂದ ಮೇ 23ರಂದು ಕಾವೇರಿ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ಬಸವರಾಜು ಉದ್ಘಾಟಿಸುವರು. ಕ.ರಾ.ಮು.ವಿ ಯ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ಹಾಗೂ ಹಣಕಾಸು ಅಧಿಕಾರಿ ಪ್ರೊ.ಕೆ.ಬಿ.ಪ್ರವೀಣ್ ಉಪಸ್ಥಿತರಿರುವರು ಹಾಗೂ ಕುಲಸಚಿವ (ಪರೀಕ್ಷಾಂಗ) ಡಾ.ಹೆಚ್.ವಿಶ್ವನಾಥ್ ವಿಶೇಷ ಉಪನ್ಯಾಸ ಮಾಡಲಿದ್ದಾರೆ.

### ದೇವಸ್ಥಾನದ ಆದಾಯ ಬೇರೆ ಕಾರ್ಯಕ್ಕೆ ಬಳಕೆ ಆರೋಪ

# ಚುಂಚನಕಟ್ಟೆಯಲ್ಲಿ ಭಕ್ತರಿಗಿಲ್ಲ ರಾಮಪ್ರಸಾದ

**ಹೊಸೂರು (ಸಂಘಟನೆ ಮಂಜುನಾಥ್):** ಸಾಲಿಗ್ರಾಮ ತಾಲೂಕಿನ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಶ್ರೀ ಕೋದಂಡರಾಮ ದೇವಾಲಯದಲ್ಲಿ ವಾರಾಂತ್ಯದ ಅನ್ನಸಂತರ್ಪಣೆಯನ್ನು ಅನುದಾನದ ಕೊರತೆಯಿಂದ ನಿಲ್ಲಿಸಲಾಗಿದ್ದು, ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆ.

ಜಿಲ್ಲೆಯಲ್ಲಿಯೇ ಹೆಸರುವಾಸಿಯಾಗಿರುವ ಚುಂಚನಕಟ್ಟೆ ಜಲಪಾತ ಮತ್ತು ಶ್ರೀರಾಮದೇವರ ದೇವಾಲಯ ಮೈಸೂರು ಅಲ್ಲದೆ ಹೊರ ಜಿಲ್ಲೆಗಳಿಂದ ಬರುವ ಪ್ರವಾಸಿಗರಿಗೆ ಪ್ರೇಕ್ಷಣೀಯ ಸ್ಥಳ ಮಾತ್ರವಲ್ಲದೆ ಶ್ರದ್ಧಾ ಕೇಂದ್ರವೂ ಆಗಿದ್ದು, ಇದನ್ನು ಮನಗಂಡು ಈ ಹಿಂದೆ ಶಾಸಕರಾಗಿದ್ದ ಸಾ.ರಾ. ಮಹೇಶ್ ರವರು ಸರ್ಕಾರಕ್ಕೆ ಮನವಿ ಮಾಡಿ ವಾರದ ಅಂತ್ಯದ ದಿನಗಳಲ್ಲಿ ಶನಿವಾರ ಮತ್ತು ಭಾನುವಾರ ಜಲಪಾತ ವೀಕ್ಷಣೆ ಮತ್ತು ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಉಪಹಾರವಾಗಿ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು ಆದರೆ ಅನುದಾನದ ಕೊರತೆಯನ್ನು ನೆಪವೊಡ್ಡಿ ಇದೀಗ ನಿಲ್ಲಿಸಲಾಗಿದ್ದು ದೇವಾಲಯಕ್ಕೆ ಬರುವ ಭಕ್ತರ ಪ್ರಸಾದಕ್ಕೂ ಕತ್ತರಿ ಬಿದ್ದಿದೆ.

ದೇವಾಲಯದ ಹಣ ಬೇರೆ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎಂಬ ಆರೋಪ ನಿರಂತರವಾಗಿ ಸರ್ಕಾರದ ಮೇಲೆ ಬರುತ್ತಿದ್ದು ಇತ್ತ ವಾರ್ಷಿಕ ಏಳೆಂಟು ಲಕ್ಷ ಆದಾಯ ಇರುವ ಶ್ರೀರಾಮ ದೇವಾಲಯದ ಆವರಣದಲ್ಲಿ ವಾರಾಂತ್ಯಕ್ಕೆ ಏರ್ಪಡಿಸಿದ್ದ ಪ್ರಸಾದ ವ್ಯವಸ್ಥೆಯನ್ನು ನಿಲ್ಲಿಸುವ ಹಂತಕ್ಕೆ ಸರ್ಕಾರದ ಬಳಿ ಹಣವಿಲ್ಲವೇ ಎಂಬ ಪ್ರಶ್ನೆ ಸಾರ್ವಜನಿಕ ವಲಯವನ್ನು ಕಾಡುತ್ತಿದೆ.

ಆದರೆ ಸ್ಥಳೀಯರು ಹೇಳುವ ಪ್ರಕಾರ ದೇವಾಲಯದ ಯಾವುದೇ ಧಾರ್ಮಿಕ ಕಾರ್ಯಕ್ರಮಗಳನ್ನು ಪ್ರಚಾರ ಮಾಡದೆ, ದೇವಾಲಯದ ಆದಾಯವನ್ನು ಹೆಚ್ಚಿಸದೆ, ದೇವಾಲಯದ ಅಭಿವೃದ್ಧಿ ಕಾರ್ಯಗಳನ್ನು ಮಾಡದೆ ಹಣ ಬರುವುದು ಎಲ್ಲಿಂದ? ದೇವಾಲಯಕ್ಕೆ ದೂರದಿಂದ ಬರುವ ಪ್ರವಾಸಿಗರಿಗೆ ಮಾಹಿತಿಯ ಕೊರತೆ ಇದ್ದು ಈ ವಿಚಾರದಲ್ಲಿ ದೇವಾಲಯದ ಆಡಳಿತ ಸಂಪೂರ್ಣ ಮೈಮರೆತಿದೆ ಎಂದು ಸಾರ್ವಜನಿಕರು ದೂರುತ್ತಾರೆ.

ಒಟ್ಟಾರೆ ದೇವಾಲಯದಲ್ಲಿ ಈ ಹಿಂದೆ ಯಾವ ರೀತಿ ಇಲಾಖೆ ವತಿಯಿಂದಲೂ ಅಲ್ಲದೇ ದೇವಾಲಯದ ಆದಾಯದಿಂದಲೂ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಅದೇ ರೀತಿ ಮುಂದೆಯೂ ಮುಂದುವರೆದರೆ ದೇವಾಲಯದ ಅಭಿವೃದ್ಧಿ ತಾನಾಗಿಯೇ ಮುಂದುವರಿಯುತ್ತದೆ. ದೇವಾಲಯಕ್ಕೆ ದೂರದಿಂದ ಬರುವ ಯಾತ್ರಾರ್ಥಿಗಳಿಗೆ ಸಾಕಷ್ಟು ಅನುಕೂಲವಾಗುತ್ತದೆ. ಇಂತಹ ಕಾರ್ಯಕ್ರಮವನ್ನು ಬಿಟ್ಟು ಅನ್ಯ ಕಾರ್ಯಗಳಿಗೆ ದೇವಾಲಯದ ಹಣವನ್ನು ಬಳಸುವುದು ಎಷ್ಟು ಸರಿ? ಈಗಲಾದರೂ ಸಂಬಂಧಪಟ್ಟವರು ಜನಪ್ರತಿನಿಧಿಗಳು ಇತ್ತ ಗಮನಹರಿಸಿ ಈ ಹಿಂದಿನಂತೆಯೇ ವಾರಾಂತ್ಯದ ಅನ್ನಪ್ರಸಾದ ಯೋಜನೆಯನ್ನು ಮುಂದಿರುವರಿಸಬೇಕೆಂದು ಭಕ್ತಾದಿಗಳು, ಸಾರ್ವಜನಿಕರು ಆಗ್ರಹಿಸಿದ್ದಾರೆ.



> **"ದೇವಾಲಯದ ವ್ಯಾಪ್ತಿಯಲ್ಲಿ ಚುಂಚನಕಟ್ಟೆ ಮುಖ್ಯರಸ್ತೆಯ ಆಸು-ಪಾಸಿನಲ್ಲಿರುವ ಮಳಿಗೆಗಳು ಖಾಲಿಯಿದ್ದು ಸದ್ಯ ಅವುಗಳನ್ನು ಬಾಡಿಗೆ ನೀಡಿ ದೇವಾಲಯದ ಆದಾಯ ಹೆಚ್ಚಿಸಿ ಇಂತಹ ಪ್ರಸಾದ ವಿನಿಯೋಗ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಮುಂದಾಗುತ್ತಿದ್ದು ಕೆಲವೇ ದಿನಗಳಲ್ಲಿ ಪ್ರಸಾದ ವ್ಯವಸ್ಥೆ ಮತ್ತೆ ಪ್ರಾರಂಭ ಮಾಡಲಾಗುವುದು**
> **-ರಘು, ಇಒ. ಚುಂಚನಕಟ್ಟೆ** ಶ್ರೀರಾಮದೇಗುಲ.

> **"ದೂರದ ಊರುಗಳಿಂದ ವಾರಾಂತ್ಯದ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಮತ್ತು ಪ್ರವಾಸಿಗರು ಚುಂಚನಕಟ್ಟೆಗೆ ಆಗಮಿಸುತ್ತಿದ್ದು, ಈ ಹಿಂದೆ ಪ್ರಸಾದ ವ್ಯವಸ್ಥೆಯು ತುಂಬಾ ಅಚ್ಚುಕಟ್ಟಾಗಿ ನಡೆದಿತ್ತು. ಜನರು ಸಾಕಷ್ಟು ಸಂತಸಪಟ್ಟಿದ್ದರು. ಸರ್ಕಾರ ಮತ್ತು ಇಲಾಖೆ ಈ ಬಗ್ಗೆ ಕ್ರಮ ಕೈಗೊಂಡು ಪ್ರಸಾದ ವ್ಯವಸ್ಥೆ ಮಾಡಬೇಕಾಗಿದೆ.**
> **-ರಾಜೇಗೌಡ,** ಲಕ್ಷ್ಮಿಪುರ ಗ್ರಾಮ.

## ಶಂಕರರ ತತ್ವ ಇಂದಿಗೂ ಪ್ರಸ್ತುತ

**ಮೈಸೂರು:** ಸರ್ವರಿಗೂ ಕಲ್ಯಾಣ ಮಾಡುವವನೇ ಶಂಕರ, ವೇದ ಸಂಸ್ಕೃತಿಯನ್ನು ವಿಶ್ವಕ್ಕೆ ನೀಡಿದ ಶಂಕರಾಚಾರ್ಯರರ ತತ್ವಗಳು ಇಂದಿಗೂ ಪ್ರಸ್ತುತ ಎಂದು ಬಿಜೆಪಿಯ ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ರಾಕೇಶ್ ಭಟ್ ಹೇಳಿದರು.

ನಗರದ ಬೋಗಾದಿಯ ರವಿಶಂಕರ್ ಲೇಔಟ್‌ನಲ್ಲಿ ಜನಸೇವಕ ಯುವ ಬ್ರಿಗೇಡ್ ವತಿಯಿಂದ ನಡೆದ ಶ್ರೀ ಶಂಕರಾಚಾರ್ಯ ಜಯಂತಿ ಅಂಗವಾಗಿ ವಿವಿಧ ಜಾತಿಯ ಗಿಡಗಳನ್ನು ನೆಟ್ಟು ಮಾತನಾಡಿದ ಅವರು, ಎಳೆಯ ವಯಸ್ಸಿನಲ್ಲಿಯೇ ವೇದ ಅಧ್ಯಯನ ಮಾಡಿ ಶಂಕರರು ಪ್ರಸಿದ್ಧರಾಗುತ್ತಾರೆ. ಒಬ್ಬ ಬಡ ವಿಧವೆ ಮನೆಗೆ ಹೋಗಿ ಭಿಕ್ಷೆ ಬೇಡಲು ಅವಳ ಮನೆಯಲ್ಲಿ ಏನೂ ಇರುವುದಿಲ್ಲವಾದ್ದರಿಂದ ಅವಳು ಒಣಗಿದ ಒಂದು ನೆಲ್ಲಿಕಾಯಿಯನ್ನು ಭಿಕ್ಷೆ ಹಾಕುತ್ತಾಳೆ. ಅದರಿಂದ ಸಂತುಷ್ಟರಾಗಿ ಅಲ್ಲಿಯೇ ಕನಕಧಾರಾ ಸ್ತೋತ್ರವನ್ನು ರಚಿಸುತ್ತಾರೆ. ಆ ಮನೆಯನ್ನು ಈಗಲೂ ಕಾಲಟಿಯಲ್ಲಿ ನೋಡಬಹುದಾಗಿದೆ ಎಂದರು. ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮೋನಿಕಾ, ಪ್ರಾಣವ್ಯ ಎಜುಕೇಶನ್ ಟ್ರಸ್ಟ್ ನಿರ್ದೇಶಕಿ ಸವಿತಾ ಪುಟ್ಟೇಗೌಡ, ಜನಸೇವಕ ಯುವ ಬ್ರಿಗೇಡ್ ಅಧ್ಯಕ್ಷ ರಾಘವೇಂದ್ರ, ನಂಜುಂಡಸ್ವಾಮಿ, ಬಸಪ್ಪ, ವೀರೇಶ್, ಮಾಯ ಶಾನ್ ಬಾಗ್, ರಮ್ಯಾ, ಗೀತಾ, ರವಿಕುಮಾರ್ ಇನ್ನಿತರರು ಹಾಜರಿದ್ದರು.



## ಕಂಟ್ರೋಲ್ ರೂಂಗಳ ಸ್ಥಾಪನೆ

**ಮೈಸೂರು:** ಜಿಲ್ಲೆಯಲ್ಲಿ ಅಧಿಕ ಮಳೆಯಿಂದ ಅಥವಾ ಪ್ರವಾಹ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಕಲುಷಿತ ನೀರು ಸರಬರಾಜಾಗುತ್ತಿದ್ದಲ್ಲಿ ಹಾಗೂ ಕಲುಷಿತ ನೀರು ಸೇವನೆಯಿಂದ ವಾಂತಿ ಭೇದಿ ಪ್ರಕರಣಗಳು ಕಂಡು ಬಂದಲ್ಲಿ ದೂರುಗಳನ್ನು ದಾಖಲಿಸಲು ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಕಚೇರಿಗಳಲ್ಲಿ 24★7 ಕಂಟ್ರೋಲ್ ರೂಂ ತೆರೆಯಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿಯ ದೂ.ಸಂ:0821-2423800, 1077, ತಾಲೂಕು ಕಚೇರಿಗಳಾದ ಮೈಸೂರು ದೂ.ಸಂ:0821-2414812, ನಂಜನಗೂಡು ದೂ.ಸಂ:08221-223108, ತಿ.ನರಸೀಪುರ ದೂ.ಸಂ:08227-260210, ಹುಣಸೂರು ದೂ.ಸಂ:08222-252959, ಕೆ.ಆರ್.ನಗರ ದೂ.ಸಂ:08223-262371, ಸಾಲಿಗ್ರಾಮ ದೂ.ಸಂ:08223-283833, ಪಿರಿಯಾಪಟ್ಟಣ ದೂ.ಸಂ:08223-274175, ಹೆಚ್.ಡಿ.ಕೋಟೆ ದೂ.ಸಂ:08228-255325, ಸರಗೂರು ದೂ.ಸಂ:08228-296100ನ್ನು ಸಂಪರ್ಕಿಸಿ ದೂರು ದಾಖಲಿಸಬಹುದು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ತಿಳಿಸಿದ್ದಾರೆ.

## ಮದ್ಯ ಮಾರಾಟ ನಿಷೇಧ

**ಮೈಸೂರು:** ಕರ್ನಾಟಕ ವಿಧಾನ ಪರಿಷತ್ತಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನ ಮತ್ತು ಮತ ಎಣಿಕೆ ಕಾರ್ಯವನ್ನು ಸುಸೂತ್ರವಾಗಿ ನಡೆಸಲು ಹಾಗೂ ಶಾಂತಿಯುತವಾಗಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಠಿಯಿಂದ ಜೂ.3ರಂದು ಮತದಾನ ನಡೆಯಲಿರುವುದರಿಂದ ಜಿಲ್ಲೆಯಾದ್ಯಂತ ಜೂ.1ರ ಸಂಜೆ 4 ಗಂಟೆಯಿಂದ ಜೂ.3ರ ಮಧ್ಯರಾತ್ರಿ 12 ಗಂಟೆಯವರೆಗೆ ಮತ್ತು ಮತ ಎಣಿಕೆ ಕಾರ್ಯ ಜೂ.6ರಂದು ನಡೆಯಲಿರುವುದರಿಂದ ನಗರ ಮತ್ತು ನಗರ ವ್ಯಾಪ್ತಿಯಿಂದ 05 ಕಿ.ಮೀ ವ್ಯಾಪ್ತಿಯವರೆಗೆ ಜೂ.5ರಂದು ಮಧ್ಯರಾತ್ರಿ 12 ಗಂಟೆಯಿಂದ ಜೂ.6ರಂದು ಮಧ್ಯರಾತ್ರಿ 12 ಗಂಟೆಯವರೆಗೆ ಮಧ್ಯ ಮಾರಾಟ ನಿಷೇಧಿಸಲಾಗಿದೆ. ಎಲ್ಲಾ ರೀತಿಯ ಮದ್ಯದ ಅಂಗಡಿಗಳನ್ನು ಮತ್ತು ಮದ್ಯ ತಯಾರಿಕಾ ಘಟಕಗಳನ್ನು ಮಾಲೀಕರು, ಅಧಿಭೋಗದಾರರು ಮತ್ತು ವ್ಯವಸ್ಥಾಪಕರು ಅಂಗಡಿ ಮುಚ್ಚಲು ಹಾಗೂ ಮೊಹರು ಮಾಡಿ ಅದರ ಕೀಯನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

## ನೇರ ನೇಮಕಾತಿಗೆ ಸಂದರ್ಶನ

**ಮಂಡ್ಯ:** ಮಂಡ್ಯ ಅಂಚೆ ಅಧೀಕ್ಷಕರು, ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ಅಂಚೆ ಜೀವ ವಿಮೆ ಪ್ರತಿನಿಧಿಗಳ ನೇಮಕಾತಿಗಾಗಿ ಜೂನ್ 6 ರಂದು ಬೆಳಿಗ್ಗೆ 10:30 ಗಂಟೆಗೆ ಮಂಡ್ಯ ವಿ.ವಿ ರೋಡ್ ಅಂಚೆ ಅಧೀಕ್ಷಕರ ಸಮ್ಮುಖದಲ್ಲಿ ನೇರ ಸಂದರ್ಶವನ್ನು ಏರ್ಪಡಿಸಲಾಗಿದೆ. ಸಂದರ್ಶನದಲ್ಲಿ ಭಾಗವಹಿಸುವವರು 10ನೇ ತರಗತಿ ಅಂಕಪಟ್ಟಿ ಪಾನ್ ಕಾರ್ಡ್ ಆಧಾರ್ ಕಾರ್ಡ್ ಪಾಸ್ಪೋರ್ಟ್ ಅಳತೆಯ ಇತ್ತೀಚಿನ 3 ಭಾವ ಚಿತ್ರಗಳನ್ನು ತರತಕ್ಕದ್ದು. ನೇಮಕಾತಿಗೆ ಇರಬೇಕಾದ ನಿಬಂದನೆಗಳು ಕನಿಷ್ಠ 18 ವರ್ಷ ವಯಸ್ಸಾಗಿರಬೇಕು, 10ನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು, ಮಂಡ್ಯ ಜಿಲ್ಲಯಲ್ಲಿ ವಾಸವಾಗಿರುವ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ಇರುತ್ತದೆ. ಈ ಉದ್ಯೋಗವು ಸರ್ಕಾರದ ಯಾವುದೇ ಭತ್ಯೆ ಒಳಗೊಂಡಿರುವುದಿಲ್ಲ. ಪ್ರತಿನಿಧಿಗಳು ಮಾರಾಟ ಮಾಡಿದ ಉತ್ಪನ್ನಗಳ ಆಧಾರದ ಮೇಲೆ ಕಮಿಷನ್ ರೂಪದಲ್ಲಿ ಪ್ರೋತ್ಸಾಹಧನವನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ:9483658775 ನ್ನು ಸಂಪರ್ಕಿಸಬಹುದು ಎಂದು ಮಂಡ್ಯ ವಿಭಾಗ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ನಾಳೆಯಿಂದ ಮಾವು , ಹಲಸು ಮೇಳ

**ಮೈಸೂರು:** 2024-25ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ನ ತೋಟಗಾರಿಕೆ ಇಲಾಖೆ ವತಿಯಿಂದ ಮಾವು ಮತ್ತು ಹಲಸು ಮೇಳವನ್ನು ಮೇ.24 ರಿಂದ 26 ರವರೆಗೆ ನಜರಬಾದ್‌ನ ಕುಪ್ಪಣ್ಣ ಉದ್ಯಾನವನದಲ್ಲಿ ಆಯೋಜಿಸಲಾಗಿದೆ.

ಮೈಸೂರು, ಮಂಡ್ಯ ಹಾಗೂ ರಾಮನಗರ ಜಿಲ್ಲೆಯ ಮಾವು ಬೆಳೆಗಾರರಿಗೆ ಅನುಕೂಲವಾಗುವಂತೆ ಹಾಗೂ ಗ್ರಾಹಕರಿಗೆ ನೈಸರ್ಗಿಕವಾಗಿ ಮಾಗಿಸಿರುವ ಉತ್ಕೃಷ್ಟ ಗುಣಮಟ್ಟದ ವಿವಿಧ ತಳಿಯ ಹಣ್ಣುಗಳು ಲಭ್ಯವಾಗುವ ಉದ್ದೇಶದಿಂದ ಮೇ 24 ರಂದು ಬೆಳಿಗ್ಗೆ 11 ಗಂಟೆಗೆ ಉದ್ಘಾಟನೆ ಕಾರ್ಯಕ್ರಮವಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಜಿಲ್ಲಾ ಪಂಚಾಯತ್ನ ತೋಟಗಾರಿಕೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೂನ್ 6 ರಂದು ಅಂಚೆ ಅದಾಲತ್

**ಮಂಡ್ಯ:** ಜೂನ್ 6 ರಂದು ಮಧ್ಯಹ್ನ 3 ಗಂಟೆಗೆ ಮಂಡ್ಯ ವಿಭಾಗದ ಅಂಚೆ ಅಧೀಕ್ಷಕರ ಕಛೇರಿಯಲ್ಲಿ ಅಂಚೆ ಅದಾಲತ್ ಏರ್ಪಡಿಸಲಾಗಿದೆ. ಸಾರ್ವಜನಿಕರು ಅಂಚೆ ಸೇವೆಗಳ ಬಗ್ಗೆ ಕುಂದು ಕೊರತೆಗಳಿದ್ದರೆ ಮೇ 28 ರೊಳಗೆ ಅಂಚೆ ಅಧೀಕ್ಷಕರ ಕಛೇರಿಗೆ ಲಿಖಿತ ರೂಪದಲ್ಲಿ ತಲುಪಿಸುವಂತೆ ತಿಳಿಸಲಾಗಿದೆ. ಇಚ್ಛೆಯುಳ್ಳ ಸಾರ್ವಜನಿಕರು ಅಂಚೆ ಅದಾಲತ್ ನಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಭಾಗವಹಿಸಬಹುದು.

## ಇಕ್ಬಾಲ್ ಅಹ್ಮದ್ ಸರಡಗಿಗೆ ಸಂತಾಪ

**ಬೆಂಗಳೂರು:** ಮಾಜಿ ಸಂಸದರು ಹಾಗೂ ಹಿರಿಯ ಮುತ್ಸದ್ದಿ ನಾಯಕರಾದ ಇಕ್ಬಾಲ್ ಅಹ್ಮದ್ ಸರಡಗಿ ಅವರು ಇಂದು ದೈವಾದೀನರಾದ ಸುದ್ದಿ ತಿಳಿದು ಅತೀವ ದುಃಖವಾಯಿತು. ಸದರಿಯವರು 2 ಬಾರಿ ಸದಸ್ಯರಾಗಿ ಹಾಗೂ 1 ಬಾರಿ ವಿಧಾನಪರಿಷತ್ ಸದಸ್ಯರಾಗಿ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುತ್ತಾರೆ. ಅವರ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಅವರ ಕುಟುಂಬಸ್ಥರಿಗೆ ಅವರ ಅಗಲಿಕೆಯ ನೋವು ಭರಿಸುವ ಶಕ್ತಿ ನೀಡಲಿ ಎಂದು ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ ಅಧ್ಯಕ್ಷರಾದ ಮಹಬೂಬ್ ಪಾಷ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಯುವರಾಜ ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭದಲ್ಲಿ ಲೋಕನಾಥ್ ಸಲಹೆ

# ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಿ

**ಮೈಸೂರು:** ವಿದ್ಯಾರ್ಥಿಗಳು ವಿದ್ಯೆ ಕಲಿತರೆ ಸಾಲದು, ಓದಿನ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ ನೀಡಿದರು.

ಯುವರಾಜ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಕಾಲೇಜಿನ 2023-24ನೇ ಸಾಲಿನ ಜ್ಞಾನವಾಹಿನಿಯ ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡೆ, ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ಕಾಲೇಜು ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವ್ಯಕ್ತಿತ್ವ ವಿಕಸನಗೊಳ್ಳಬೇಕಾದರೆ ಪಠ್ಯೇತರ ಚಟುವಟಿಕೆಗಳು ಸಹಕಾರಿಯಾಗಲಿವೆ. ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಿಗೆ ಪಾಠದ ಜತೆ ಜತೆಗೆ ಇತರ ಸಾಮಾನ್ಯ ಜ್ಞಾನಗಳ ಅರಿವೂ ಮೂಡಲಾರಂಭಿಸುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ತರಗತಿಯಿಂದಾಚೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕೆಂದು ಸಲಹೆ ನೀಡಿದರು.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕಲು ಬೇಕಾದ ವಿದ್ಯೆಯನ್ನು ಪಠ್ಯೇತರ ಚಟುವಟಿಕೆಗಳು ಕಲಿಸುತ್ತವೆ. ಕ್ರೀಡೆ, ಸಂಗೀತ, ನೃತ್ಯ, ಜಾನಪದ, ನಾಟಕಗಳು ನಮ್ಮ ಭಾಗವಾಗಬೇಕು. ಶಿಸ್ತು, ಸಂಯಮ, ಸಹನೆ, ಧೈರ್ಯ, ಉತ್ಸಾಹ ಎಲ್ಲವೂ ವಿದ್ಯಾರ್ಥಿಗೆ ದಕ್ಕುತ್ತವೆ ಎಂದರು.



ಎಲ್ಲ ವಿದ್ಯಾರ್ಥಿಗಳು ಕಾಲೇಜಿನಲ್ಲಿ ನಡೆಯುವ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು. ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಗೆಲ್ಲುವುದಕಿಂತಲೂ ಭಾಗಿಯಾಗುವುದೇ ಮುಖ್ಯವಾಗಿದೆ. ಹೀಗಾಗಿ ಪ್ರತಿಯೊಬ್ಬರೂ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಿ ಎಂದರು.

ಪದವಿ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳ ಜತೆಗೆ ಉತ್ತಮವಾಗಿ ಓದುವ ಮೂಲಕ ಬದುಕು ರೂಪಿಸಿಕೊಳ್ಳಬೇಕು. ಉನ್ನತ ಶಿಕ್ಷಣ ಮಾಡಬೇಕು. ಹೆಚ್ಚು ಹೆಚ್ಚು ಜ್ಞಾನ ಸಂಪಾದಿಸಬೇಕು. ಉತ್ತಮವಾದ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಮಾರ್ಗದರ್ಶನ ಮಾಡಿದರು.

ಹಾಸ್ಯ ಕಲಾವಿದ ವಿನೋದ್ ಗೊಬ್ಬರಗಾಲ ಮಾತನಾಡಿ, ಕಾಲೇಜು ಎಂದರೆ ಕಾಲ ಕಳೆದು ಹೋಗುವುದು ಅಲ್ಲ. ಕಷ್ಟಪಟ್ಟು ಕಲಿತು ಹೋಗಬೇಕು. ಕಾಲೇಜಿನಿಂದ ಹೋಗುವ ಮುನ್ನ ಜೀವನ ರೂಪಿಸಿಕೊಂಡೇ ಹೋಗಬೇಕು. ವಿದ್ಯಾಭ್ಯಾಸದಿಂದ ಉತ್ತಮ ಜೀವನ ಮತ್ತು ವ್ಯಕ್ತಿತ್ವ ರೂಪಿಸಿಕೊಳ್ಳಬಹುದು. ಕಲಿತ ವಿದ್ಯೆ ಎಂದೂ ಕೈ ಬಿಡಲ್ಲ. ಶಿಕ್ಷಣವಿದ್ದರೆ ಪ್ರಪಂಚದ ಯಾವುದೇ ಮೂಲೆಯಲ್ಲಾದರೂ ಬದುಕಬಹುದು. ಶಿಕ್ಷಣದಿಂದ ತಿಳುವಳಿಕೆ ಬರುತ್ತದೆ ಎಂದರು.

ಕಿರುತರೆ ನಟ ಚಂದ್ರಪ್ರಭಾ ಮಾತನಾಡಿದರು. ಇದೇ ವೇಳೆ ವಿವಿಧ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಜತೆಗೆ ಹೆಚ್ಚು ಅಂಕಗಳಿಸಿದ್ದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಪ್ರೊ.ಎಂ.ಕೆ. ಮಹೇಶ್, ಜ್ಞಾನವಾಹಿನಿ ಸಂಚಾಲಕ ಜಿ.ಕೃಷ್ಣಮೂರ್ತಿ, ಐಕ್ಯೂಎಸಿ ಸಂಚಾಲಕ ಪ್ರೊ.ಬಿ.ಎಂ.ವೆಂಕಟೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಕೆ.ಅಜಯ್‌ಕುಮಾರ್ ಇತರರಿದ್ದರು.

### ಚಿಕ್ಕಬಳ್ಳಾಪುರಲ್ಲಿ ಪರಿಸರ ದಿನಾಚರಣೆ

# ನಗರದ ಕಲ್ಯಾಣಿ ಸ್ವಚ್ಛತೆ

**ಚಿಕ್ಕಬಳ್ಳಾಪುರ:** ವಿಶ್ವ ಪರಿಸರ ದಿನ ಹಿನ್ನೆಲೆಯಲ್ಲಿ ಇಂದು ನಗರದ ಬಿ.ಬಿ. ರಸ್ತೆಯಲ್ಲಿರುವ ಕಲ್ಯಾಣಿಯನ್ನು ಸ್ವಚ್ಛಗೊಳಿಸುವ ಮೂಲಕ ಅರ್ಥಪೂರ್ಣ ಕಾರ್ಯಕ್ರಮ ನಡೆಯಿತು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿ, ಜಿಲ್ಲಾ ಪಂಚಾಯತ್, ನಗರಸಭೆ, ಜಿಲ್ಲಾ ವಕೀಲರ ಸಂಘ, ಟೈಟಾನ್ ಕಂಪೆನಿ, ಶಾಂತಿನಿಕೇತನ್ ಪದವಿ ಪೂರ್ವ ಕಾಲೇಜು, ಇನ್ನಿತರ ಇಲಾಖೆಗಳ ಸಹಯೋಗದೊಂದಿಗೆ ಕಲ್ಯಾಣಿ ಸ್ವಚ್ಚತಾ ಕಾರ್ಯಕ್ರಮ ನೆರವೇರಿತು.

ನ್ಯಾಯಾಧೀಶರು, ವಕೀಲರು, ವಿದ್ಯಾರ್ಥಿಗಳು, ವಿವಿಧ ಇಲಾಖೆ, ನಗರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿ, ಪೌರಕಾರ್ಮಿಕರೊಂದಿಗೆ ಜೊತೆಗೂಡಿ ಕಲ್ಯಾಣಿ ಸ್ವಚ್ಛಗೊಳಿಸಿದರು.ಕೈಗವಸು ತೊಟ್ಟು ಉತ್ಸಾಹದಿಂದ ಕಲ್ಯಾಣಿ ಹಾಗೂ ಸುತ್ತಮುತ್ತಲು ಬೆಳೆದಿದ್ದ ಗಿಡ-ಗಂಟಿಗಳನ್ನು ತೆರವುಗೊಳಿಸಿದರು. ಕಲ್ಯಾಣಿಯ ಮೆಟ್ಟಿಲುಗಳ ಮೇಲೆ ತುಂಬಿದ್ದ ಮಣ್ಣು ಇನ್ನಿತರ ತ್ಯಾಜ್ಯಗಳನ್ನು ತೆಗೆದು ಸ್ವಚ್ಛಗೊಳಿಸಿದರು. ಕಲ್ಯಾಣಿಗೆ ಸಾಗುವ ಹಾದಿಯಲ್ಲಿ ಬೆಳೆದಿದ್ದ, ತ್ಯಾಜ್ಯ, ಮುಳ್ಳುಗಿಡಗಳನ್ನು ಕಿತ್ತು ಹಾಕಿ ಸುಗಮವಾಗಿ ಓಡಾಡಲು ಅನುವು ಮಾಡಿದರು. ನ್ಯಾಯಾಧೀಶರು, ವಕೀಲರು, ಅಧಿಕಾರಿಗಳು ಕಲ್ಯಾಣಿ ಆವರಣದಲ್ಲಿ ಗಿಡ ನೆಟ್ಟು ನೀರೆರೆದರು.

ಕಲ್ಯಾಣಿ ಸ್ವಚ್ಚತಾ ಕಾರ್ಯಕ್ರಮಕ್ಕೆ 1ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶರಾದ ಕೆ.ಬಿ.ಶಿವಪ್ರಸಾದ್ ಅವರು ಚಾಲನೆ ನೀಡಿದರು.

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮೊಹಮ್ಮದ್ ರೋಷನ್ ಷಾ ಅವರು ಪರಿಸರ ರಕ್ಷಣೆಯ ಕುರಿತ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಇದೇ ವೇಳೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ನ್ಯಾಯಾಧೀಶರಾದ ಮೊಹಮ್ಮದ್ ರೋಷನ್ ಷಾ ಅವರು ಪರಿಸರದ ಬಗ್ಗೆ ಪ್ರತಿಯೊಬ್ಬರಲ್ಲೂ ಕಾಳಜಿ ಇರಬೇಕು. ಗಿಡ ಮರಗಳನ್ನು ಬೆಳೆಸಿ ಪೋಷಿಸಬೇಕು. ಮುಂದಿನ ಭವಿಷ್ಯದ ಹಿತದೃಷ್ಟಿಯಿಂದ ಪರಿಸರ ರಕ್ಷಣೆ ಮಾಡುವ ಹೊಣೆಗಾರಿಕೆ ಪ್ರತಿಯೊಬ್ಬರಲ್ಲೂ ಇರಬೇಕು ಎಂದರು.



ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಆರ್. ಶ್ರೀನಿವಾಸ್ ಅವರು ಮಾತನಾಡಿ, ಕಲ್ಯಾಣಿ ಸ್ವಚ್ಛಗೊಳಿಸಲು ವಿವಿಧ ಇಲಾಖೆಗಳು ಹಮ್ಮಿಕೊಂಡಿರುವ ಇಂತಹ ಕಾರ್ಯಕ್ರಮಗಳು ಹೆಚ್ಚು ನಡೆಯಬೇಕು.ಪರಿಸರ ಅಸಮತೋಲನದಿಂದ ಹವಾಮಾನದಲ್ಲಿ ಸಾಕಷ್ಟು ವೈಪರೀತ್ಯಗಳನ್ನು ಇಂದು ಕಾಣುತ್ತಿದ್ದೇವೆ. ಕಾಂಕ್ರೀಟ್ ನಾಡನ್ನಾಗಿ ಪರಿವರ್ತಿಸುವುದನ್ನು ಬಿಟ್ಟು, ಗಿಡ-ಮರಗಳನ್ನು ಬೆಳೆಸಲು ಉತ್ತೇಜನ ನೀಡಬೇಕಿದೆ ಎಂದು ತಿಳಿಸಿದರು. ಜಿಲ್ಲಾ ಪರಿಸರ ಅಧಿಕಾರಿ ಟಿ.ಎಂ. ಸಿದ್ದೇಶ್ವರ ಬಾಬು ಅವರು ಮಾತನಾಡಿ, ವಿಶ್ವ ಪರಿಸರ ದಿನ ಆಚರಣೆ ಅಂಗವಾಗಿ ಎಲ್ಲರ ಸಹಕಾರದೊಂದಿಗೆ ಸ್ವಚ್ಚತೆ ಕುರಿತು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪರಿಸರ ಸಂರಕ್ಷಣೆ ಕುರಿತ ಜಾಗೃತಿ ಮೂಡಿಸಲಾಗುತ್ತಿದೆ. ಉತ್ತಮ ಪರಿಸರ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ನಿರಂತರ ಬೆಂಬಲ ಅಗತ್ಯವಾಗಿದೆ ಎಂದರು. ನಗರಸಭೆ ಪೌರಾಯುಕ್ತರಾದ ಎ.ಎಸ್. ಮಂಜುನಾಥ, ವಿವಿಧ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮಕದಲ್ಲಿ ಉಪಸ್ಥಿತರಿದ್ದರು.

# ನಿರಂತರ ಮಳೆಯಿಂದ ಹಸಿರು ಹೊದ್ದಿರುವ ಭೂಮಿ

**ಹುಳಿಯಾರು:** ಬರದಿಂದ ತತ್ತರಿಸಿ ಹೋಗಿದ್ದ ಚಿಕ್ಕನಾಯಕನಹಳ್ಳಿ ತಾಲೂಕು ಕೃತಿಕಾ ಮಳೆಯಿಂದ ತಂಪಾಗಿದೆ. ಭರಣಿ ಮಳೆಯ ಕೊನೆಯ ದಿನ ತಾಲೂಕಿಗೆ ವರುಣ ಕೃಪೆಯಾಗಿದ್ದು ಇಲ್ಲಿಯವರೆವಿಗೂ ನಿರಂತವಾಗಿ ಸುರಿಯುತ್ತಿದೆ. ಪರಿಣಾಮ ಇಳೆ ತಂಪಾಗಿ ಬಿಸಿಗಾಳಿ ದೂರಾಗಿ ತಂಗಾಳಿ ಬೀಸುತ್ತಿದೆ. ಒಂದರ್ಥದಲ್ಲಿ ತಾಲೂಕಿ ಈಗ ಮಲೆನಾಡಾಗಿ ಬದಲಾಗಿದೆ.

ಕಳೆದ ವರ್ಷ ಮಳೆಯಿಲ್ಲದೆ ಬೀಕರ ಬರ ತಾಲೂಕಿನಲ್ಲಿ ಆವರಿಸಿತ್ತು. ಕೆರೆಕಟ್ಟೆಗಳಲ್ಲಿ ನೀರು ಖಾಲಿಯಾಗುವ ಜೊತೆಗೆ ಅಂತರ್ಜಲ ಸಹ ಕುಸಿದು ತೋಟ ಉಳಿಸಿಕೊಳ್ಳಲು ರೈತ ಪರದಾಡುತ್ತಿದ್ದ. ಇನ್ನು ಹಸಿರು ಮೇವಿರಲಿ ಒಣ ಮೇವು ಸಹ ಖಾಲಿಯಾಗಿ ರೈತ ದನಕರುಗಳನ್ನು ಮಾರಿಕೊಳ್ಳುತ್ತಿದ್ದ. ಅಲ್ಲದೆ ಹಿಂದೆಂದೂ ಕಂಡರಿಯಾದ ವಾತಾವರಣದ ತಾಪಮಾನ ಉಷ್ಣಾಂಶ 40 ಡಿಗ್ರಿ ಆಸುಪಾಸು ಬಂದು ತಾಲೂಕಿನ ಭೂಮಿ ಕಾದ ಹೆಂಚಿನಂತಾಗಿತ್ತು. ಅಲ್ಲದೆ ಬಿಸಿಗಾಳಿ ಸಹ ಬೀಸಿ ಜನಜಾನುವಾರುಗಳನ್ನು ಹೈರಾಣಾಗಿಸಿತ್ತು.

ಅದೃಷ್ಟವಶತ್ ಕೃತಿಕಾ ಮಳೆ ತಾಲೂಕಿನ ಕೈ ಹಿಡಿದಿದೆ. ನಿತ್ಯ ಹಗಲಿನಲ್ಲಿ ಮೋಡ ಕವಿದ ವಾತಾವರಣ ಇದ್ದು ಸಂಜೆಯಾದ ತಕ್ಷಣ ಧೋ ಎಂದು ಮಳೆ ಸುರಿಯುತ್ತಿದೆ. ಕೆಲ ದಿನಗಳಂತೂ ಇಡೀ ರಾತ್ರಿ ಮಳೆ ಸುರಿದಿದೆ. ನಿರಂತರವಾಗಿ ಸುರಿಯುತ್ತಿರುವ ಮಳೆ ಬೇಸಿಗೆಯ ದುರ್ದಿನಗಳನ್ನು ಮರೆಸಿದೆ. ಬಿಸಿಗಾಳಿ ದೂರಾಗಿ ತಂಗಾಳಿ ಬೀಸತೊಡಗಿದೆ. ಕೆರೆಕಟ್ಟೆಗಳಲ್ಲಿ ನೀರು ಸಂಗ್ರಹವಾಗುತ್ತಿದೆ. ಬಿಸಿಲ ಝಳಕ್ಕೆ ಬಾಡಿದ್ದ ತೆಂಗು, ಅಡಿಕೆ ಈಗ ನಳನಳಿಸುತ್ತಿವೆ. ಬದಗಳಲ್ಲಿ ಹಸಿಲು ಹುಲ್ಲು ಚಿಗುರೊಡೆಯುತ್ತಿದ್ದು ಎತ್ತ ನೋಡಿದರೂ ಹಸಿರು ಕಾಣಸಿಗುತ್ತಿದೆ. ಬಿಸಿಲ ಝಳ ಹೆಚ್ಚಾಗಿದ್ದಾಗ ಎಳನೀರು, ಕಲ್ಲಂಗಡಿ, ಜ್ಯೂಸ್ ಸೆಂಟರ್ ಬಳಿ ಜನಜಾತ್ರೆ ಇರುತ್ತಿತ್ತು. ಈಗ ಬೊಂಡ, ಚಿರುಮುರಿ, ಚಹಾ ಅಂಗಡಿಗಳ ಮುಂದೆ ಜನ ಸೇರಿತ್ತಿದ್ದಾರೆ. ಕೃಷಿಯಿಂದ ವಿಮುಖರಾಗಿದ್ದ ರೈತರು ಉಳುಮೆ, ಬಿತ್ತನೆ ಕಾರ್ಯದಲ್ಲಿ ತೊಡಗುತ್ತಿದ್ದಾರೆ. ಭರಣಿ ಮಳೆಗೆ ಬಿತ್ತಿದ್ದ ಹೆಸರು ಈಗಾಗಲೇ ಚಿಗುರೊಡೆದಿದ್ದು ರೈತನ ಹರ್ಷಕ್ಕೆ ಕಾರಣವಾಗಿದೆ. ಹೆಸರು ಬಿತ್ತದ ರೈತರು ರಾಗಿ ಬಿತ್ತುವ ತಯಾರಿಯಲ್ಲಿದ್ದಾರೆ.



### ಒಂದು ರಾಸಿಗೆ ಒಂದು ದಿನಕ್ಕೆ ಆರು ಕಿಲೋನಂತೆ ಒಂದು ವಾರಕ್ಕೆ ಆಗುವಷ್ಟು ಮೇವು

# ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ 8 ಸಾವಿರ ಮೇವಿನ ಕಿಟ್ ವಿತರಣೆ

**ಹುಳಿಯಾರು:** ಚಿಕ್ಕನಾಯಕನಹಳ್ಳಿ ತಾಲೂಕಿನ ಕಂದಿಕೆರೆಯಲ್ಲಿ ತಾಲೂಕಿನ ಮೂರನೇ ಮೇವಿನ ಬ್ಯಾಂಕನ್ನು ಮಂಗಳವಾರ ಪ್ರಾರಂಭಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ರೆ.ಮ.ನಾಗಭೂಷಣ ಮಾತನಾಡಿ ಬರಗಾಲ ಎದುರಾದ ಸಂದರ್ಭದಲ್ಲಿ ಸರ್ಕಾರವು ಮೇವು ಬ್ಯಾಂಕ್ ಗಳನ್ನು ಸ್ಥಾಪಿಸಿ ಅತಿ ಕಡಿಮೆ ಬೆಲೆಗೆ ಮಾರಾಟ ಮಾಡುವ ಮೂಲಕ ರೈತರು ಬದುಕು ಕಟ್ಟಿಕೊಳ್ಳಲು ನೆರವಾಗುತ್ತಿದೆ. ಕೇವಲ ಎರಡು ರೂಪಾಯಿಗೆ ಒಂದು ಕಿಲೋ ಮೇವನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಒಂದು ರಾಸಿಗೆ ಒಂದು ದಿನಕ್ಕೆ ಆರು ಕಿಲೋನಂತೆ ಒಂದು ವಾರಕ್ಕೆ ಆಗುವಷ್ಟು ಮೇವು ನೀಡಲಾಗುವುದು. ರೈತರಿಗೆ ಈಗಾಗಲೇ ಸುಮಾರು ಎಂಟು ಸಾವಿರ ಮೇವಿನ ಕಿಟ್ ಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ಹಸಿರು ಮೇವು ಮತ್ತು ಇಲ್ಲಿ ಕೊಡುವ ಒಣ ಮೇವು ಎರಡನ್ನೂ ಒಟ್ಟಿಗೆ ಸೇರಿಸಿ ಕೊಡುವುದರಿಂದ ತಿಂಡಿ ಪ್ರಮಾಣ ಕಡಿಮೆ ಮಾಡಿ ಹಾಲು ಉತ್ಪಾದನೆಗೆ ತಗಲುವ ಖರ್ಚನ್ನು ಕಡಿಮೆ ಮಾಡಬಹುದು. ರೈತರು ಮುಸುಕಿನ ಜೋಳ, ನೇಪಿಯಾರ್ ಹುಲ್ಲು, ಗಿನಿಹುಲ್ಲು, ಅಲಸಂದೆ, ಕುದುರೆ ಮಸಾಲೆ ಅಂತಹ ಉತ್ತಮ ಜಾತಿಯ ಮೇವಿನ ಬೆಳೆಗಳನ್ನು ಬೆಳೆದು ಕೊಳ್ಳಬೇಕಿದೆ. ಪ್ರತಿ ರಾಸಿಗೆ ನೀಡುವ ಆರು ಕಿಲೋ ಒಣ ಮೇವಿನೊಂದಿಗೆ (2-3 ಇಂಚು ತುಂಡು ತುಂಡು ಮಾಡಿ) ಸುಮಾರು 2.5 ಕಿಲೋ ಹಸಿರೆಲೆ ಸೊಪ್ಪುಗಳನ್ನು (ಹಾಳುವಾಣ, ನುಗ್ಗೆ, ಹಿಪ್ಪುನೇರಳೆ, ಕರಿಬೇವು, ಅಲಸಂದೆ, ಹುರುಳಿ, ಸುಬಾಬುಲ್ ಮುಂತಾದವು) ಸೇರಿಸಿ ಕೊಡುವುದು ಬಹಳ ಉತ್ತಮ ಅಭ್ಯಾಸ ಎಂದರು.



ಒಣ ಮೇವಿಗೆ ಬೆಲ್ಲದ ಮಡ್ಡಿ ಸೇರಿಸಿಕೊಡುವುದು, ಅಂದರೆ 5 ಕಿಲೋ ಒಣ ಮೇವಿಗೆ 100 ಗ್ರಾಂ ಬೆಲ್ಲವನ್ನು ಒಂದು ಲೀಟರ್ ನೀರಿನಲ್ಲಿ ಕರಗಿಸಿ ಸಿಂಪಡಿಸುವುದರಿಂದ ಒಣ ಮೇವು ತಿನ್ನುವ ಪ್ರಮಾಣವನ್ನು ಹೆಚ್ಚಿಸಬಹುದಲ್ಲದೆ ಮೇವು ಹಾಳಾಗುವುದನ್ನು ತಪ್ಪಿಸಬಹುದು. ಇದಲ್ಲದೆ ಒಣ ಮೇವನ್ನು ಯೂರಿಯಾ, ಕಾಕಂಬಿ ದ್ರಾವಣದಲ್ಲಿ ಸಂಸ್ಕರಿಸಿ ಅದರ ಗುಣ ಮಟ್ಟವನ್ನು ಹೆಚ್ಚಿಸಬಹುದು. ಸುಮಾರು 15 ಲೀಟರ್ ನೀರಿನಲ್ಲಿ ಎರಡು ಕಿಲೋ ಯೂರಿಯಾ ವನ್ನು ಕರಗಿಸಿ ಅದರಲ್ಲಿ ಒಂದು ಕಿಲೋ ಉಪ್ಪು, ಒಂದು ಕಿಲೋ ಲವಣ ಮಿಶ್ರಣ, ಕೊನೆಯಲ್ಲಿ 5-8 ಕಿಲೋ ಕಾಕಂಬಿ ಇಲ್ಲವೇ ಬೆಲ್ಲ ಬೆರೆಸಿ ದ್ರಾವಣ ತಯಾರಿಸಿ 2-3 ಇಂಚು ತುಂಡು ತುಂಡು ಮಾಡಿದ 100 ಕಿಲೋ ಒಣ ಮೇವನ್ನು ಕಲ್ಲು ಚಪ್ಪಡಿ, ಸಿಮೆಂಟ್ ನೆಲ, ಅಥವಾ ಪ್ಲಾಸ್ಟಿಕ್ ಹಾಳೆಯ ಮೇಲೆ ಸಮನಾಗಿ ಹರಡಿ ಅರ್ದ ಭಾಗ ದ್ರಾವಣವನ್ನು ಹುಲ್ಲಿನ ಮೇಲೆ ಸಿಂಪಡಿಸಿ ಬೇಕು. ಸಿಂಪಡಿಸಿದ ದ್ರಾವಣ ಪೂರ್ತಿ ಒಣಗಿದ ಮೇಲೆ ಒಣ ಮೇವನ್ನು ತಿರುವಿ ಹಾಕಿ ಮಿಕ್ಕ ಅರ್ಧ ಭಾಗ ಯೂರಿಯಾ ದ್ರಾವಣವನ್ನು ಸಿಂಪಡಿಸಬೇಕು. ಸುಮಾರು 2-3 ಗಂಟೆ ಕಳೆದ ನಂತರ ಈ ಹುಲ್ಲನ್ನು ಕಂತೆ ಕಂತೆ ಕಟ್ಟಿ ಬಣವೆ ಮಾಡಿ ಶೇಖರಿಸಿ ಇಡಬೇಕು. ಈ ರೀತಿ ಸಂಸ್ಕರಿಸಿದ ಒಣ ಮೇವನ್ನು ರಾಸುಗಳಿಗೆ ನೀಡುವುದರಿಂದ ನಾರಿನ ಪಚನತೆ ವೃದ್ಧಿಯಾಗುವುದು ಜೊತೆಗೆ ರಾಸುಗಳು ಹೆಚ್ಚು ಮೇವನ್ನು ತಿನ್ನುತ್ತವೆ. ಅಲ್ಲದೆ ಈ ಹುಲ್ಲಿನಲ್ಲಿ ಸಸಾರಜನಕ ಮತ್ತು ಕ್ಯಾಲ್ಸಿಯಂ ಪ್ರಮಾಣ ಕೂಡ ಹೆಚ್ಚು ಇರುತ್ತದೆ ಎಂದು ವಿವರಿಸಿದರು. ತಿಮ್ಮನಹಳ್ಳಿ ಹಿರಿಯ ಪಶವೈದ್ಯಾಧಿಕಾರಿ ಡಾ.ಶಾಂತೇಶ್, ಉಪ ತಹಸೀಲ್ದಾರ್ ರೇಖಾ, ಪಿಡಿಒ ಶೇಷಗಿರಿ, ಕಂದಾಯ ಅಧಿಕಾರಿ ಸಿದ್ದಲಿಂಗಸ್ವಾಮಿ, ಗ್ರಾಮ ಲೆಕ್ಕಿಗ ಪ್ರದೀಪ್, ರಮ್ಯ, ಜಾನುವಾರು ಅಧಿಕಾರಿ ಲೋಖರೆ ಉಪಸ್ಥಿತರಿದ್ದರು.

> **"ತಾಲೂಕಿನಲ್ಲಿ ಈಗಾಗಲೇ ಹದಿನಾರು ದಿನಗಳಿಂದ ಕಾರೇಹಳ್ಳಿ ಮತ್ತು ಸೋಮವಾರದಿಂದ ಹಂದನಕೆರೆಯಲ್ಲಿ ಮೇವಿನ ಬ್ಯಾಂಕುಗಳು ನಡೆಯುತ್ತಿದ್ದು ಸುಮಾರು 525 ಟನ್ ಒಣ ಮೇವನ್ನು 3670 ರೈತರ 10488 ಜಾನುವಾರುಗಳಿಗೆ ವಿತರಿಸಲಾಗಿದೆ. ಇದುವರೆಗೆ ರೈತರಿಂದ ಸಂಗ್ರಹಿಸಿದ 880992 ರೂ ಗಳನ್ನು ಸರ್ಕಾರಕ್ಕೆ ಸಂದಾಯ ಮಾಡಲಾಗಿದೆ.**
> **। ಡಾ.ರೆ.ಮ.ನಾಗಭೂಷಣ್** ಸಹಾಯಕ ನಿರ್ದೇಶಕ, ಪಶುಇಲಾಖೆ, ಚಿಕ್ಕನಾಯಕನಹಳ್ಳಿ

# ಡೆಂಗಿ ಜ್ವರದ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಚಿಕಿತ್ಸೆ ಪಡೆದುಕೊಳ್ಳಿ: ಡಾ.ಕೆ.ಶಶಿಧರ್

**ರಾಮನಗರ:** ಹಗಲು ಹೊತ್ತಿನಲ್ಲಿ ಕಚ್ಚುವ ಈಡಿಸ್ ಸೊಳ್ಳೆಗಳಿಂದ ಡೆಂಗಿ ಜ್ವರ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ವಿಪರೀತ ಜ್ವರ, ಮೈಮೇಲೆ ಕೆಂಪು ಗಂದೆಗಳು, ಕಣ್ಣಿನ ಹಿಂಭಾಗ ನೋವು, ತಲೆ ನೋವು, ಮಾಂಸಖಂಡಗಳ ನೋವು, ಈ ರೋಗದ ಪ್ರಮುಖ ಲಕ್ಷಣಗಳಾಗಿದ್ದು ರೋಗ ತೀವ್ರ ಸ್ಥಿತಿ ತಲುಪಿದಾಗ ಬಾಯಿ, ಮೂಗು ಮತ್ತು ಒಸಡುಗಳಿಂದ ರಕ್ತಸ್ರಾವ ಹಾಗೂ ಚರ್ಮದ ಅಲ್ಲಲ್ಲಿ ರಕ್ತಸ್ರಾವದ ಗುರುತು ಕಾಣಿಸಿಕೊಳ್ಳುತ್ತವೆ. ಇಂತಹ ಲಕ್ಷಣಗಳು ಕಂಡು ಬಂದ ತಕ್ಷಣ ವೈದ್ಯರನ್ನು ಸಂಪರ್ಕಿಸುವಂತೆ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಕೆ. ಶಶಿಧರ್ ಅವರು ತಿಳಿಸಿದರು.



ಅವರು ಮೇ 22ರ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಯ ಸಂಯುಕ್ತಾಶ್ರಯದಲ್ಲಿ ರಾಮನಗರ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಮತ್ತು ಡಿಪೋಗಳಲ್ಲಿ ಡೆಂಗಿ ನಿಯಂತ್ರಣ ಕುರಿತು ಸಮುದಾಯದೊಂದಿಗೆ ಸೇರಿ ಡೆಂಗಿ ಜ್ವರವನ್ನು ನಿಯಂತ್ರಿಸೋಣ ಎಂಬ ಘೋಷವಾಕ್ಯದೊಂದಿಗೆ ಆಯೋಜಿಸಲಾಗಿದ್ದ ರಾಷ್ಟ್ರೀಯ ಡೆಂಗೀ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಒಂದು ವೇಳೆ ಡೆಂಗಿಯೆಂದು ದೃಢಪಟ್ಟಲ್ಲಿ, ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡಿ ಗುಣ ಪಡಿಸಬಹುದು ಹಾಗೂ ಡೆಂಗಿಯಿಂದ ಉಂಟಾಗುವ ಸಾವು-ನೋವುಗಳನ್ನು ತಪ್ಪಿಸಬೇಕಾದರೆ ಮುಖ್ಯವಾಗಿ ನಿಯಂತ್ರಣ ಕ್ರಮಗಳನ್ನು ಪಾಲಿಸುವಂತೆ ಸಲಹೆ ನೀಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಉಮಾ ಅವರು ಮಾತನಾಡಿ, ಸೊಳ್ಳೆಗಳ ನಿಯಂತ್ರಣ ಒಂದೇ ಡೆಂಗಿ ರೋಗದ ಹತೋಟಿಗೆ ಮುಖ್ಯ ವಿಧಾನ. ಈ ಸೊಳ್ಳೆಗಳು ನೀರು ಶೇಖರಣೆ ಪರಿಕರಗಳಾದ ಸಿಮೆಂಟ್ ತೊಟ್ಟಿ, ಬ್ಯಾರಲ್, ಮಣ್ಣಿನ ಮಡಿಕೆಗಳನ್ನು ವಾರಕೊಮ್ಮೆ ಸ್ವಚ್ಚಗೊಳಿಸಬೇಕು ಹಾಗೂ ಈಗಾಗಲೆ ಮಳೆ ಪ್ರಾರಂಭವಾಗಿದ್ದು ಘನತ್ಯಾಜ್ಯಗಳಾದ ಟೈರು, ಎಳನೀರ ಚಿಪ್ಪು, ಒಡೆದ ಪ್ಲಾಸ್ಟಿಕ್ ವಸ್ತುಗಳು ಹಾಗೂ ಅನುಪಯುಕ್ತ ಒರಳುಕಲ್ಲು ಇವುಗಳಲ್ಲಿ ನೀರು ನಿಂತು ಸೊಳ್ಳೆಗಳ ಉತ್ಪತ್ತಿ ತಾಣಗಳಾಗಿರುತ್ತದೆ. ಆದ್ದರಿಂದ ನೀರು ನಿಲ್ಲದಂತೆ ಕ್ರಮವಹಿಸಿ ಪರಿಸರ ಸ್ವಚ್ಚತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಡಿಪೋಗಳಲ್ಲಿ ಬಳಸಲು ಯೋಗ್ಯವಲ್ಲದ ಟೈರ್‌ಗಳು ಮತ್ತು ಇತರೆ ಘನತ್ಯಾಜ್ಯ ವಸ್ತುಗಳಲ್ಲಿ ನೀರು ನಿಲ್ಲದಂತೆ ಪ್ಲಾಸ್ಟಿಕ್‌ನಿಂದ ಸಂರಕ್ಷಿಸಿಡುವಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಅರ್ಪಿತ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರಾಜೇಂದ್ರ, ಕೆ.ಎಸ್.ಆರ್.ಟಿ.ಸಿ ಕಾರ್ಮಿಕ ಅಧಿಕಾರಿ ಜಯರಾಂ, ಸಂಚಾರಿ ಅಧೀಕ್ಷಕಿ ಭಾಗ್ಯಮ್ಮ, ಕೀಟಶಾಸ್ತ್ರಜ್ಞೆ ಸೌಮ್ಯ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ದಾಸಪ್ಪ, ವಿಠಲ್, ಕೆ.ಎಸ್.ಆರ್.ಟಿ.ಸಿ ಸಿಬ್ಬಂದಿಗಳು, ಆರೋಗ್ಯ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಹಾಜರಿದ್ದರು.

# ಭೂಮಿಗೆ ವೈಜ್ಞಾನಿಕ ದರ ನಿಗದಿಗೆ ಆಗ್ರಹ

**ಬೇಲೂರು :** ಸರ್ಕಾರ ಗ್ರಾಮೀಣ ಭಾಗದಲ್ಲಿ ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾರ್ಯಕ್ಕೆ ನಮ್ಮ ವಿರೋಧವಿಲ್ಲ. ಆದರೆ ರೈತರ ಭೂಮಿಗೆ ವೈಜ್ಞಾನಿಕ ದರ ನಿಗದಿ ಮಾಡದ ಹೊರತು ನಾವು ಭೂಮಿ ಕೊಡಲು ಒಪ್ಪುವುದಿಲ್ಲ ಎಂದು ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸ್ವಾಮೀಗೌಡ ಹೇಳಿದರು.

ತಾಲೂಕಿನ ಅರೇಹಳ್ಳಿ-ಗೆಂಡೇಹಳ್ಳಿ ವಿದ್ಯುತ್ ಉಪ ಕೇಂದ್ರಕ್ಕೆ 66 ಕೆವಿ ವಿದ್ಯುತ್ ಸ್ಥಾವರ ನಿರ್ಮಾಣದಿಂದ ರೈತರಿಗಾಗುತ್ತಿರುವ ಅನ್ಯಾಯದ ವಿರುದ್ಧ ಅನುಘಟ್ಟ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಅನುಘಟ್ಟ, ಅರೇಹಳ್ಳಿ, ತೊಳಲು ಗ್ರಾಪಂ ವ್ಯಾಪ್ತಿಯ ರೈತರು ಹಾಗೂ ಸೆಸ್ಕ್ ಸಹಾಯಕ ಅಭಿಯಂತರರ ಸಮ್ಮುಖದಲ್ಲಿ ಜರುಗಿದ ಸಭೆಯಲ್ಲಿ ಅವರು ಮಾತನಾಡಿದರು.

ವಿದ್ಯುತ್ ಸ್ಥಾವರ ನಿರ್ಮಾಣಕ್ಕಾಗಿ ಸೂಕ್ತವಾಗಿ ಸ್ಥಳ ಪರಿಶೀಲನೆ ಮಾಡದೇ ಜಮೀನಿಗೆ ಬೇಕಾಬಿಟ್ಟಿ ದರ ನಿಗದಿ ಮಾಡಿರುವುದು ಅಧಿಕಾರಿಗಳ ನಿರ್ಲಕ್ಯ ಎದ್ದು ಕಾಣುತ್ತಿದೆ. ಬೆಲೆ ಬಾಳುವ ಗಿಡ ಮರಗಳನ್ನು ಹಲವಾರು ವರ್ಷಗಳಿಂದ ರೈತರು ಬೆಳೆಸಿದ್ದಾರೆ. ಆದರೆ ರೈತರ ಕಣ್ಣೊರೆಸುವುದಕ್ಕಾಗಿ ರೈತರಿಗೆ ಬಿಡಿಗಾಸನ್ನು ನೀಡಿ ಕಾಮಗಾರಿ ಆರಂಭಿಸಲು ಪ್ರಯತ್ನಿಸಿದರೆ ನಾವು ಸುಮ್ಮನೆ ಇರುವುದಿಲ್ಲ ಎಂದು ಆಕ್ರೋಶ ಹೊರಹಾಕಿದ ಅವರು ರೈತರಿಗೆ ಸೂಕ್ತ ಧರ ನಿಗದಿಯಾಗುವವರೆಗೂ ರೈತ ಸಂಘ ಹೊರಾಟ ನಿಲ್ಲಿಸುವುದಿಲ್ಲ. ಅಧಿಕಾರಿಗಳು ಎಚ್ಚೆತ್ತು ರೈತರಿಗೆ ನ್ಯಾಯ ದೊರಕಿಸಲು ಮುಂದಾಗಬೇಕು ಎಂದರು.



ರೈತ ಸಂಘದ ತಾಲೂಕ ಅಧ್ಯಕ್ಷ ಭೋಗಮಲ್ಲೇಶ್ ಮಾತನಾಡಿ, ರೈತರೆಲ್ಲಾ ತೀರ್ಮಾನ ಮಾಆಡಿ ಮತ್ತೊಮ್ಮೆ ಸಭೆ ನಿಗದಿ ಮಾಡುತ್ತೇವೆ. ಈ ಸಭೆಗೆ ಇಲಾಖೆಗೆ ಸಂಬಂಧಿಸಿದ ಹಿರಿಯ ಅಧಿಕಾರಿಗಳು ಬಾಗವಹಿಸಿ ರೈತರ ಸಮಸ್ಯೆ ಆಲಿಸಿ ಸಮರ್ಪಕವಾಗಿ ಪರಿಹಾರ ನೀಡಬೇಕು. ಇಲ್ಲವಾದರೆ ಯಾವುದೇ ಕಾರಣಕ್ಕೂ ಕಾಮಗಾರಿ ಮಾಡಲು ಬಿಡುವುದಿಲ್ಲ ಎಂದರು.

ಸೆಸ್ಕ್ ಸಹಾಯಕ ಅಭಿಯಂತರ ಜಗದೀಶ್ ಮಾತನಾಡಿ, ಇಲಾಖೆಯಿಂದ ಅಧಿಕಾರಿಗಳು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಮಾಹಿತಿ ತೆಗೆದುಕೊಂಡು ಅದಕ್ಕಿರುವ ಮೌಲ್ಯವನ್ನು ಲೆಕ್ಕಹಾಗಿ ಇಂತಿಷ್ಟು ದರ ಎಂದು ಜಿಲ್ಲಾಧಿಕಾರಿಗಳು ಬೆಲೆ ನಿಗದಿ ಮಾಡಿದ್ದಾರೆ. ಗುಂಟೆಗೆ 5 ಸಾವಿರದಂತೆ ಎಕರೆಗೆ 2 ಲಕ್ಷದ ಪರಿಹಾರವನ್ನು ಮೊದಲ ಕಂತಿನ ಹಣವಾಗಿ 25,000 ರೂ, ಗಳನ್ನು ಫಲಾನುಭವಿಗಳಿಗೆ ನೀಡಲಾಗಿದೆ. ರೈತರ ಬೇಡಿಕೆಯಂತೆ ಮೇಲ್ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಿ ಸಭೆಗೆ ಭಾಗವಹಿಸುವಂತೆ ಮನವಿ ಮಾಡುತ್ತೇನೆ ಎಂದರು.

ರೈತ ಸಂಘದ ಅಂತರಾಷ್ಟ್ರೀಯ ಪ್ರತಿನಿಧಿ ಅರೇಹಳ್ಳಿ ರಾಜೇಗೌಡ, ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಬಿ.ಪಿ.ಬಸವರಾಜು, ಅರೇಹಳ್ಳಿ ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಬಿ.ಪುಟ್ಟರಾಜು, ರೈತ ಸಂಘದ ಮುಖಂಡರಾದ ಸುರೇಶ್, ತಾಪಂ ಮಾಜಿ ಉಪಾಧ್ಯಕ್ಷ ನವಿಲಹಳ್ಳಿ ಕುಮಾರ್ ಸೇರಿದಂತೆ ಇತರರಿದ್ದರು.

### ಭಾರತ ವಿಕಸಿತ ರಾಷ್ಟ್ರವಾಗಲು ವಿಜ್ಞಾನ, ತಂತ್ರಜ್ಞಾನ ಸಹಕಾರಿ: ಎ.ಎಸ್.ಕಿರಣ್ ಕುಮಾರ್

# ಚಂದ್ರಯಾನದಿಂದ ವಿಶ್ವವೇ ಭಾರತದತ್ತ ನೋಡುತ್ತಿದೆ



**ಮೈಸೂರು:** 2047ಕ್ಕೆ ಭಾರತ ಸಂಪೂರ್ಣ ವಿಕಸಿತ ರಾಷ್ಟ್ರವಾಗಲು ವಿಜ್ಞಾನ ಮತ್ತು ತಂತ್ರಜ್ಞಾನ ಹಲವು ಬಗೆಗಳಲ್ಲಿ ಸಹಕಾರಿಯಾಗಿದ್ದು, ಚಂದ್ರಯಾನದ ಯಶಸ್ಸು ಇಡೀ ವಿಶ್ವವೇ ಭಾರತದ ಕಡೆ ನಿಬ್ಬೆರಗಾಗಿ ನೋಡುವಂತೆ ಮಾಡಿದೆ ಎಂದು ಇಸ್ರೋದ ನಿವೃತ್ತ ಅಧ್ಯಕ್ಷ, ಭಾರತ ಸರ್ಕಾರದ ಬಾಹ್ಯಾಕಾಶ ಆಯೋಗದ ಸದಸ್ಯ ಎ.ಎಸ್.ಕಿರಣ್ ಕುಮಾರ್ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬುಧವಾರ ನಡೆದ 16ನೇ ಪದವೀಧರರ ದಿನಾಚರಣೆಯಲ್ಲಿ ಮಾತನಾಡಿದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಇಸ್ರೋ ಹಲವು ಸಮಾಜಮುಖಿ ಕಾರ್ಯಗಳನ್ನು ಸಾಧಿಸಿದೆ. ಈ ಸಾಧನೆಗಳು ಒಂದೊಂದು ಮೈಲಿಗಲ್ಲಾಗಿ ನಿಂತಿವೆ. ಇಂದು ಅತಿ ಉನ್ನತವಾದ ತಂತ್ರಜ್ಞಾನದಿಂದ ಮಾನವ ಜೀವನದ ಸಾಧನೆಯ ಮುಖಗಳು ವಿಸ್ತರಿಸಿವೆ. ಎಲ್ಲಾ ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳ ಮೂಲ ಕಲ್ಪನೆ ಪ್ರಕೃತಿಯೇ ಆಗಿದೆ. ಇದನ್ನು ಮನಗಂಡು ಪ್ರಕೃತಿಯನ್ನು ಗೌರವಿಸುತ್ತಾ ಅದನ್ನು ಕಾಪಾಡಿಕೊಂಡು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬೆಳೆಸಬೇಕು ಎಂದರು.

ವಿದ್ಯಾರ್ಥಿಗಳಿಗೆ ಪದವೀಧರರ ದಿನಾಚರಣೆ ಬಹುಮುಖ್ಯವಾದ ದಿನ. ಹಿಂದಿನ ನಿಮ್ಮ ಗುರಿ ಕನಸುಗಳು ಸಾಕಾರಗೊಂಡು ಮುಂದಿನ ಜೀವನದ ಗುರಿ ಮತ್ತು ಕನಸುಗಳನ್ನು ಕಾಣುವ ಕ್ಷಣವಿದು. ಈ ಗುರಿ ಸಾಧನೆಯ ಹಿಂದೆ ಇರುವ ತಂದೆ ತಾಯಿ ಮತ್ತು ಗುರು ಹಿರಿಯರನ್ನು ಸ್ಮರಿಸಬೇಕು. ಪರಂಪರಾಗತ ಮೌಲ್ಯಗಳನ್ನು ಮರೆಯದೆ ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜೆಎಸ್ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ನೂತನ ಪದವೀಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ಸ್ನಾತಕ ಪದವಿ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಪ್ರಾಂಶುಪಾಲ ಡಾ.ಎಂ.ಪ್ರಭು ವಂದಿಸಿದರು.

ಜೆಎಸ್ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮಹೇಶಪ್ಪ ಮತ್ತು ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಬಿ.ಪ್ರಭುಸ್ವಾಮಿ ಉಪಸ್ಥಿತರಿದ್ದರು. 2020-23ರ ಅವಧಿಯಲ್ಲಿ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಸ್ನಾತಕ ವಿಭಾಗದ 383 ಹುಡುಗರು ಮತ್ತು 188 ವಿದ್ಯಾರ್ಥಿನಿಯರನ್ನು ಒಳಗೊಂಡಂತೆ ಒಟ್ಟು 571 ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ವಿಭಾಗದ 190 ಹುಡುಗರು ಮತ್ತು 358 ಹುಡುಗಿಯರನ್ನು ಒಳಗೊಂಡಂತೆ 548 ವಿದ್ಯಾರ್ಥಿಗಳು ಸೇರಿ ಒಟ್ಟು 1119 ಪದವೀಧರರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಜತೆಗೆ ವಿವಿಧ ಕೋರ್ಸುಗಳಲ್ಲಿ ಉನ್ನತ ಸ್ಥಾನ ಪಡೆದಿರುವ 67 ಪದವೀಧರರನ್ನು ಪುರಸ್ಕರಿಸಲಾಯಿತು.

## ಉಚಿತ ಕಂಪ್ಯೂಟರ್ ಡಿಟಿಪಿ/ ಗ್ರಾಫಿಕ್ ಡಿಸೈನಿಂಗ್ ತರಬೇತಿಗೆ ಅರ್ಜಿ ಆಹ್ವಾನ

**ಮಂಡ್ಯ:** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಕಂಪ್ಯೂಟರ್ ಡಿಟಿಪಿ/ ಗ್ರಾಫಿಕ್ ಡಿಸೈನಿಂಗ್ ಕುರಿತು 45 ದಿನಗಳ ಉಚಿತ ತರಬೇತಿಯು ಜುಲೈ 10 ರಿಂದ ಆಯೋಜಿಸಲಾಗಿದೆ. ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ-ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು 18 ರಿಂದ 45 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆಯೊಂದಿಗೆ ಆಂಗ್ಲ ಭಾಷೆಯನ್ನು ಸಹ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಅಭ್ಯರ್ಥಿಗಳು ಆಧಾರ್ ಕಾರ್ಡ್ನ್ನ ಹೊಂದಿರಬೇಕು ಹಾಗೂ ಬಿಪಿಎಲ್ ಕಾರ್ಡ್ ಅನ್ನು ಹೊಂದಿರುವ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ತರಬೇತಿಯು ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತರಿಸಲಾಗುವುದು. ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನವಾಗಿದೆ. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಅರಿಶಿನಕುಂಟೆ, ರುಡ್ಸೆಟ್ ಸಂಸ್ಥೆ, ದೂ.ಸಂ: 9740982585, ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀರಿನ ಅದಾಲತ್

**ಬೆಂಗಳೂರು:** ಬೆಂಗಳೂರು ಜಲ ಮಂಡಳಿಯ ವಿವಿಧ ಉಪ ವಿಭಾಗಗಳಾದ ಆಗ್ನೇಯ -3, ಆಗ್ನೇಯ-6, ಪಶ್ಚಿಮ 1-3, ವಾಯುವ್ಯ -5, ಉತ್ತರ 2-3, ದಕ್ಷಿಣ 1-3, ನೈರುತ್ಯ ? 3, ನೈರುತ್ಯ -6, ಮತ್ತು ಪೂರ್ವ 2-4, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಮೇ 23 ರಂದು ಬೆಳಿಗ್ಗೆ 9.30 ಗಂಟೆಯಿಂದ 11 ಗಂಟೆಯವರೆಗೆ ನೀರಿನ ಅದಾಲತ್ನ್ನು ಹಮ್ಮಿಕೊಳ್ಳಲಾಗಿದೆ. ಅದಾಲತ್ ಸೇವಾ ಠಾಣೆಗಳಾದ ಅರಳೂರು, ದೊಡ್ಡ ಕಣ್ಣನಹಳ್ಳಿ, ಕಸವನಹಳ್ಳಿ, ಬಿ.ಟಿ.ಎಂ ಲೇಔಟ್, 1,2 ಮತ್ತು 3, ವೆಸ್ಟ್ ಆಫ್ ಕಾರ್ಡ್ ರಸ್ತೆ, 1 ಮತ್ತು 2, ಕಾಮಾಕ್ಷಿಪಾಳ್ಯ, ಕಮಲಾನಗರ, ಮಹಾಲಕ್ಷ್ಮೀ ಲೇಔಟ್, ಅಗ್ರಹಾರ ದಾಸರಹಳ್ಳಿ, ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಸಂದ್ರ, ಸಿಡೇದಹಳ್ಳಿ, ದೊಡ್ಡಬಿದರಕಲ್ಲು, ಜಿ.ಕೆ.ವಿ.ಕೆ, ಮಾನ್ಯತಾ ಟೆಕ್ಪಾರ್ಕ್, ಅಂಜನಾಪುರ, ಬ್ಯಾಂಕ್ ಆಫೀಸರ್ಸ್ ಲೇಔಟ್, ಗೊಟ್ಟಿಗೆರೆ, ಎಂ.ಎನ್, ಪಾರ್ಕ್, ಬಿ.ಟಿ.ಆರ್, ಮೌಂಟ್ಜಾಯ್, ನಾಗೇಂದ್ರಬ್ಲಾಕ್, ಗಿರಿನಗರ, ಅಂಗಧೀರನಹಳ್ಳಿ, ಹೆಮ್ಮಿಗೆಪುರ, ಬನಶಂಕರಿ 6ನೇ ಹಂತ, ಕೆ.ಆರ್. ಪುರಂ, ಬಸವನಪುರ, ದೇವಸಂದ್ರ, ರಾಮಮೂರ್ತಿ ನಗರ, ವಿಜಿನಾಪುರ, ದೂರವಾಣಿನಗರ ಇಲ್ಲಿ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ದೂರುಗಳನ್ನು ದಾಖಲಿಸಬಹುದು. ಹಾಗೂ ವಾಟ್ಸ್ಆಫ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದಾಗಿದೆ ಎಂದು ಬೆಂಗಳೂರು ಜಲ ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**ರಾಮನಗರ:** ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ ಖಾಲಿ ಇರುವ ವಿವಿಧ ವಿಷಯಗಳ ಶಿಕ್ಷಕರ ಹುದ್ದೆಗೆ ಅತಿಥಿ ಶಿಕ್ಷಕರನ್ನು ಗೌರವಧನದ ಆಧಾರದ ಮೇಲೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು, ಸಂಬಂಧಪಟ್ಟ ವಿಷಯದಲ್ಲಿ ಪದವಿ ಹಾಗೂ ಬಿಎಡ್/ಬಿಪಿಎಸ್ ಪದವಿ ಪಡೆದಿರುವುದು ಕಡ್ಡಾಯ. ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಅಥವಾ ನಿವೃತ್ತ ಶಿಕ್ಷಕರು ಅರ್ಜಿ ಸಲ್ಲಿಸಬಹುದು. ಮೆರಿಟ್ ಹಾಗೂ ಅನುಭವವುಳ್ಳವರಿಗೆ ಆದ್ಯತೆ ನೀಡಲಾಗುವುದು. ಆಯ್ಕೆಯಾದ ಅತಿಥಿ ಶಿಕ್ಷಕರಿಗೆ ಗೌರವ ಸಂಭಾವನೆ ನೀಡಲಾಗುವುದು. ಆಸಕ್ತರು ತಮ್ಮ ಸ್ವ-ವಿವರವುಳ್ಳ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರುಗಳಿಗೆ ಜೂನ್ 1 ರೊಳಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ರಾಮನಗರ ಟೌನ್ ಮತ್ತು ಕನಕಪುರದ ಚಿಕ್ಕಮುದವಾಡಿಯ ಮೌಲಾನಾ ಅಜಾದ್ ಶಾಲೆಯ ಮುಖ್ಯೋಪಾಧ್ಯಾಯರು, ಮೊ.ನಂ. 9945922257 ಅನ್ನು ಸಂಪರ್ಕಿಸುವಂತೆ ರಾಮನಗರ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆ ಫೋನ್- ಇನ್

**ಬೆಂಗಳೂರು:** ಬೆಂಗಳೂರು ಜಲಮಂಡಳಿಯ ವತಿಯಿಂದ ಜಲಮಂಡಳಿ ಅಧ್ಯಕ್ಷರಾದ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅವರೊಂದಿಗೆ ಫೋನ್ - ಇನ್ ಕಾರ್ಯಕ್ರಮವನ್ನು ಮೇ 24 ರಂದು ಬೆಳಗ್ಗೆ 9:30 ರಿಂದ 10:30 ರವರೆಗೆ ಆಯೋಜಿಸಲಾಗಿದೆ. ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 080-22945119 ಮತ್ತು 080-22229639 ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಬಹುದಾಗಿದೆ. ಈ ಫೋನ್-ಇನ್ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬಹುದು.

## ರಕ್ತದಾನ ಶಿಬಿರ,ಜಾಗೃತಿ

**ಬೆಂಗಳೂರು:** ವಿವೇಕಾನಂದ ಪದವಿ ಕಾಲೇಜು ಎನ್.ಎಸ್.ಎಸ್ ವಿಭಾಗ ರಾಜಾಜಿನಗರ , ಲಯನ್ಸ್ ಕ್ಲಬ್ ಬೆಂಗಳೂರು ಕ್ಯಾಪಿಟಲ್ ವತಿಯಿಂದ ರಕ್ತದಾನ ಹಾಗೂ ಜಾಗೃತಿ ಶಿಬಿರವನ್ನು ಲಯನ್ಸ್ ಹಾಗೂ ಸುಶ್ರುತ ರಕ್ತ ಕೇಂದ್ರ ಸಹಯೋಗದೊಂದಿಗೆ ವಿವೇಕಾನಂದ ಪದವಿ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿತು. ಸುಮಾರು 250 ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಸಿಬ್ಬಂದಿ ವರ್ಗದವರು ರಕ್ತದಾನ ಮಾಡಿದರು. ರಕ್ತದಾನದ ಶಿಬಿರದಲ್ಲಿ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಕೂಡ ಹಮ್ಮಿಕೊಳ್ಳಲಾಗಿತ್ತು . ಪ್ರಾಂಶುಪಾಲರಾದ ಡಾ. ಕೆ ಶಶಿಕಲಾ ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸಿದರು ಶ್ರೀ ಹೆಚ್ ಜಿ ಬಾಲಗೋಪಾಲ್, ಕಾರ್ಯದರ್ಶಿ, ಜೆಇಎಸ್, ಬೆಂಗಳೂರು ಮತ್ತು ಲಯನ್ಸ್ ಚುನಾಯಿತ ಪ್ರಥಮ ಜಿಲ್ಲಾ ರಾಜ್ಯಪಾಲರಾದ ಜಿ ಮೋಹನ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ರಕ್ತದಾನಿಗಳು ಮತ್ತು ಸ್ವಯಂಸೇವಕರಿಗೆ ಕೃತಜ್ಞತೆ ಸಲ್ಲಿಸಿದರು, ‘‘ಈ ರಕ್ತದಾನ ಶಿಬಿರದ ಯಶಸ್ಸು ಸಮಾಜದ ಸಮರ್ಪಣೆಯನ್ನು ಪ್ರತಿಬಿಂಬಿಸುತ್ತದೆ ಎಂದರು. ಈ ಸಂದರ್ಭದಲ್ಲಿ ಜನತಾ ಶಿಕ್ಷಣ ಸಂಸ್ಥೆಯ ಸದಸ್ಯರಾದ ಐ ನಾರಾಯಣ ರೆಡ್ಡಿ, ಶ್ರೀಮತಿ ಇಂದಿರಾ ಗೋಪಾಲಸ್ವಾಮಿ, ಹರೀಶ್ ಅಪ್ಪಾರೆಡ್ಡಿ, ಅನಿಲ್, ಲಯನ್ ಮನೋಜ್ ಕುಮಾರ್,ಲಯನ್ ರಾಮಚಂದ್ರ, ಕಾಲೇಜಿನ ಹಳೆಯ ವಿದ್ಯಾರ್ಥಿ ಲಯನ್ ಮುರಳಿ ಉಪಸ್ಥಿತರಿದ್ದರು. ಹಾಗೂ ಕಾಲೇಜಿನ ಎನ್ಎಸ್ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಪ್ರೊಫೆಸರ್ ಎಂ ಆರ್ ಅಭಿಷೇಕ್, ಪ್ರೊಫೆಸರ್ ಛಾಯ ರವರು ಶಿಬಿರವನ್ನು ಅತ್ಯಂತ ಯಶಸ್ವಿ ರೀತಿಯಲ್ಲಿ ಆಯೋಜಿಸಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನೋಡಿಕೊಂಡರು.



## ತೋಟಗಾರಿಕೆ ತರಬೇತಿಗಾಗಿ ಅರ್ಜಿ ಆಹ್ವಾನ

**ಚಾಮರಾಜನಗರ:** ತೋಟಗಾರಿಕೆ ಇಲಾಖೆಯಿಂದ ಮೈಸೂರಿನ ರಂಗಸಮುದ್ರ, ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ಜಿಲ್ಲೆಯ ಪಹಣಿ ಹೊಂದಿರುವ ರೈತರ ಮಕ್ಕಳಿಗೆ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ 9 ತಿಂಗಳ ತೋಟಗಾರಿಕೆ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಜುಲೈ 1 ರಿಂದ 2025ರ ಮಾರ್ಚ್ 31 ರವರೆಗೆ ತರಬೇತಿ ನೀಡಲಾಗುತ್ತದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾಗಿರಬೇಕು. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 18 ರಿಂದ 30 ವರ್ಷ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 18 ರಿಂದ 33 ವರ್ಷ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಾಗಿದ್ದಲ್ಲಿ 33 ರಿಂದ 65 ವರ್ಷದೊಳಗಿರಬೇಕು. ಅರ್ಜಿಯನ್ನು ಚಾಮರಾಜನಗರ ರಾಜ್ಯವಲಯ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯಲ್ಲಿ ಅಥವಾ ಇಲಾಖಾ ವೆಬ್‌ಸೈಟ್ https://horticulturedir.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಜೂನ್ 3ರ ಸಂಜೆ 5.30 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಉಪನಿರ್ದೇಶಕರು ಅಥವಾ ನಗರದ ಸತ್ತಿ ರಸ್ತೆಯಲ್ಲಿರುವ ರಾಜ್ಯವಲಯ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರನ್ನು ಸಂಪರ್ಕಿಸಬಹುದು.

### 5ನೇ ಸೀನಿಯರ್ ರಾಜ್ಯ ಮಟ್ಟದ ನೆಟ್‌ಬಾಲ್ ಚಾಂಪಿಯನ್ ಶಿಪ್ ಪಂದ್ಯಾವಳಿ

# 3ನೇ ಸ್ಥಾನ ಪಡೆದ ಚಾ.ನಗರ ಜಿಲ್ಲೆ



**ಚಾಮರಾಜನಗರ:** ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ನೆಟ್‌ಬಾಲ್ ಪಂದ್ಯಾವಳಿಯಲ್ಲಿ 3ನೇ ಸ್ಥಾನ ಪಡೆದ ಚಾಮರಾಜನಗರ ಜಿಲ್ಲೆಯ ಕ್ರೀಡಾಪಟುಗಳನ್ನು ಗೌರವಾಧ್ಯಕ್ಷೆ ನರ್ಗೀಸ್ ಬಾನು ಅವರು ಅಭಿನಂದಿಸಿದರು.

ಬೆಂಗಳೂರಿನ ಚಾಮರಾಜಪೇಟೆಯ ಜಿಂಕೆ ಪಾರ್ಕ್ ಎದುರಿರುವ ರಾಜೀವ್‌ಗಾಂಧಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಮೇ 18 ಮತ್ತು 19ರಂದು ನಡೆದ 5ನೇ ಸೀನಿಯರ್ ರಾಜ್ಯ ಮಟ್ಟದ ನೆಟ್‌ಬಾಲ್ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ಜಿಲ್ಲೆಯ ಕ್ರೀಡಾಪಟುಗಳು ಭಾಗವಹಿಸಿ, 3ನೇ ಸ್ಥಾನ ಗಳಿಸಿದರು. ಈ ಹಿನ್ನೆಲೆಯಲ್ಲಿ ಚಾಮರಾಜನಗರಕ್ಕೆ ಇಂದು ಆಗಮಿಸಿದ ಕ್ರೀಡಾಪಟುಗಳನ್ನು ಚಾಮರಾಜೇಶ್ವರ ದೇವಸ್ಥಾನದ ಬಳಿ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್‌ನ ಗೌರವಾಧ್ಯಕ್ಷೆ ನರ್ಗೀಸ್ ಬಾನು ಅವರು ಅಭಿನಂದಿಸಿದರು.

ನಂತರ ಮಾತನಾಡಿದ ಅವರು, ಅಮೆಚೂರ್ ನೆಟ್‌ಬಾಲ್ ಅಸೋಸಿಯೇಷನ್ ಆಫ್ ಕರ್ನಾಟಕ ಹಾಗೂ ಯೂನಿಕ್ಸ್ ಸ್ಪೋರ್ಟ್ಸ್ ಆಕಾಡೆಮಿ ವತಿಯಿಂದ ಆಯೋಜಿಸಲಾಗಿದ್ದ 5ನೇ ಸೀನಿಯರ್ ರಾಜ್ಯ ಮಟ್ಟದ ನೆಟ್‌ಬಾಲ್ ಪಂದ್ಯಾವಳಿಯಲ್ಲಿ ನಮ್ಮ ಜಿಲ್ಲೆಯ ಕ್ರೀಡಾಪಟುಗಳು ಪಾಲ್ಗೊಂಡು 3ನೇ ಸ್ಥಾನ ಪಡೆದಿರುವುದು ಸಂತಸದ ವಿಷಯ ಎಂದರು.

16 ಜಿಲ್ಲೆಯಿಂದ 32 ಟೀಮ್‌ನ ಪುರುಷ ಹಾಗೂ ಮಹಿಳೆಯರ ತಂಡಗಳು ಆಗಮಿಸಿತ್ತು. ಇವುಗಳಲ್ಲಿ ಹಲವು ತಂಡಗಳೊಂದಿಗೆ ಸೆಣಸಾಟ ನಡೆಸಿ, ಕ್ವಾಟರ್ ಫೈನಲ್‌ನಲ್ಲಿ ಬೆಳಗಾವಿ ಜಿಲ್ಲೆಯೊಂದಿಗೆ ನಡೆದ ರೋಚಕ ಪಂದ್ಯಾಟದಲ್ಲಿ ಅವರನ್ನು ಮಣಿಸಿ ಸೆಮಿಫೈನಲ್‌ಗೆ ಪಾದಾರ್ಪಣೆ ಮಾಡಿದರು.

ನಂತರ ಸೆಮಿಫೈನಲ್‌ನಲ್ಲಿ ಬೆಂಗಳೂರು ನಗರ ತಂಡದ ಮೇಲೆ ನಡೆದ ರೋಚಕ ಪಂದ್ಯದಲ್ಲಿ 22-23 ರ ಅಂತರದ ಅಂತಿಮ ಹಣಾಹಣಿಯಲ್ಲಿ 1 ಅಂಕದಿಂದ ಪರಾಜಿತಗೊಂಡು ತೃತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು ಎಂಬ ಮಾಹಿತಿ ನೀಡಿದರು.

ಜಿಲ್ಲೆಯ ಅಭಿನಾಯಕ್‌ಗೆ ಅತ್ಯುತ್ತಮ ಗೋಲು ರಕ್ಷಕ ಪ್ರಶಸ್ತಿ : ನೆಟ್‌ಬಾಲ್ ಚಾಂಪಿಯನ್ ಶಿಪ್‌ನಲ್ಲಿ ನಡೆದ ಲೀಡ್‌ನಲ್ಲಿ 3 ಪಂದ್ಯಟ, ಕ್ವಾಟರ್‌ಫೈನಲ್‌ನಲ್ಲಿ 1 ಪಂದ್ಯಾಟ, ಸೆಮಿಫೈನಲ್‌ನಲ್ಲಿ 1 ಪಂದ್ಯಾಟದಲ್ಲಿ ಪುರುಷರ ವಿಭಾಗದಲ್ಲಿ ನಮ್ಮ ಜಿಲ್ಲೆಯ ಅಭಿನಾಯಕ್‌ಗೆ ಅತ್ಯುತ್ತಮ ಗೋಲು ರಕ್ಷಕ (ಬೆಸ್ಟ್ ಗೋಲ್ ಡಿಫೆಂಡರ್) ಪ್ರಶಸ್ತಿಯನ್ನು ಅಮೆಚೂರ್ ನೆಟ್‌ಬಾಲ್ ಅಸೋಸಿಯೇಷನ್ ಆಫ್ ಕರ್ನಾಟಕ ಹಾಗೂ ಯೂನಿಕ್ಸ್ ಸ್ಪೋರ್ಟ್ಸ್ ಆಕಾಡೆಮಿ ವತಿಯಿಂದ ನೀಡಿ ಗೌರವಿಸಲಾಯಿತು ಎಂದರು.

ಜಿಲ್ಲಾ ನೆಟ್‌ಬಾಲ್ ಅಸೋಷಿಯೇಷನ್‌ನ ಅಧ್ಯಕ್ಷರಾದ ವಿ.ಶ್ರೀನಿವಾಸ ಪ್ರಸಾದ್ ಮಾತನಾಡಿ, ನಮ್ಮ ತಂಡವು ದಿನದಿಂದ ದಿನಕ್ಕೆ ಉತ್ತಮ ಪ್ರದರ್ಶನ ನೀಡುವುದರ ಮೂಲಕ ಕ್ರೀಡೆಯಲ್ಲಿ ಯಶಸ್ಸು ಸಾಧಿಸುತ್ತಿರುವುದು ಶ್ಲಾಘನೀಯ ವಿಚಾರ ಎಂದರು.

ಕ್ರೀಡಾಪಟುಗಳಿಗೆ ತರಬೇತಿ ನೀಡುವ ಮೂಲಕ ಅವರನ್ನು ಅತ್ಯುತ್ತಮ ಕ್ರೀಡಾಪಟುಗಳನ್ನಾಗಿ ರೂಪಿಸುತ್ತಿರುವ ತರಬೇತುದಾರರಾದ ಮಹದೇವ ಪ್ರಸಾದ್ ಅವರ ಪರಿಶ್ರಮ ಹಾಗೂ ಅವರ ಮಾರ್ಗದರ್ಶನವೂ ಕೂಡಾ ಪ್ರಶಸ್ತಿಗಳಿಸಲು ಮುಖ್ಯ ಕಾರಣ. ಮುಂದಿನ ದಿನಗಳಲ್ಲಿ ನಮ್ಮ ಜಿಲ್ಲೆಗೆ ಇನ್ನೂ ಹೆಚ್ಚಿನ ಕೀರ್ತಿ ಯಶಸ್ಸನ್ನು ತರಲೆಂದು ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮುಖ್ಯ ತರಬೇತುದಾರರಾದ ಮಹದೇವ ಪ್ರಸಾದ್, ಸಹಾಯಕ ತರಬೇತುದಾರರಾದ ಸೋಮಶೇಖರ್, ವ್ಯವಸ್ಥಾಪಕ ಮಾದೇಶ್, ಕ್ರೀಡಾಪಟುಗಳಾದ ತಂಡದ ನಾಯಕ ಚಂದು, ಸದಸ್ಯರಾದ ಸಂದೀಪ್ ಎಸ್., ದಿನೇಶ್.ಎಂ., ಅಭಿ.ಎಸ್., ಅಭಿನಾಯಕ್ .ಡಿ., ಸಂಯಕ್, ಚೇತನ್, ಪವನ್‌ಕುಮಾರ್, ದಿಲೀಪ್, ಪ್ರಜ್ವಲ್‌ಕುಮಾರ್, ನಿತಿನ್‌ನಾಯಕ್, ಮಹದೇವ ಇದ್ದರು.

ಇತ್ತೀಚೆಗೆ ಮಧ್ಯಪ್ರದೇಶದ ಇಂದೋರ್ ಜಿಲ್ಲೆ ಕೊರಗಾಂವ್‌ನ ಬೋರವ ಜವಾಹರ್‌ಲಾಲ್ ನೆಹರೂ ಇನ್ಸ್ಟಿಟ್ಯೂಟ್‌ನಲ್ಲಿ ನಡೆದ 36ನೇ ರಾಷ್ಟ್ರೀಯ ಜೂನಿಯರ್ ಚಾಂಪಿಯನ್ ಶಿಪ್‌ನ ಬಾಲಕಿಯರ ವಿಭಾಗದಲ್ಲಿ 2ನೇ ರನ್ನರ್ ಅಪ್, ಮತ್ತು ಫಾಸ್ಟ್ 5 ಜೂನಿಯರ್ ಚಾಂಪಿಯನ್ ಶಿಪ್‌ನ ಬಾಲಕರ ವಿಭಾಗದಲ್ಲಿ 2ನೇ ರನ್ನರ್ ಅಪ್ ಪ್ರಶಸ್ತಿಗಳಿಸುವ ಮೂಲಕ ಉತ್ತಮ ಪ್ರದರ್ಶನ ನೀಡಿ ಕಂಚಿನ ಪದಕ ಪಡೆದುಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.

## ಗುಂಡ್ಲುಪೇಟೆ : ವಾಲ್ಮೀಕಿ ಆಶ್ರಮ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಚಾಮರಾಜನಗರ:** ಗುಂಡ್ಲುಪೇಟೆ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ಬರಗಿ, ಬಂಡೀಪುರ ಮತ್ತು ಮದ್ದೂರು ಸರ್ಕಾರಿ ವಾಲ್ಮೀಕಿ ಆಶ್ರಮ ಶಾಲೆಯ 1 ರಿಂದ 6ನೇ ತರಗತಿಗಳಲ್ಲಿ ಖಾಲಿಯಿರುವ ಸ್ಥಾನಗಳಿಗೆ ಅರ್ಹ ಪರಿಶಿಷ್ಟ ಪಂಗಡ, ಪರಿಶಿಷ್ಟಜಾತಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ವಸತಿ ಶಾಲೆಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರವೇಶ ಬಯಸುವ ವಿದ್ಯಾರ್ಥಿಗಳು ಗುಂಡ್ಲುಪೇಟೆ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಹಾಗೂ ವಸತಿ ಶಾಲೆಗಳಿಂದ ಅರ್ಜಿ ಪಡೆದು ಅಗತ್ಯ ದಾಖಲಾತಿಗಳೊಂದಿಗೆ ಮುಖ್ಯೋಪಾಧ್ಯಾಯರಿಗೆ ಮೇ 31ರೊಳಗೆ ಸಲ್ಲಿಸಬೇಕು. ಆದಿವಾಸಿ, ಜೇನುಕುರುಬ, ಬೆಟ್ಟಕುರುಬ ಸಮುದಾಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಗುಂಡ್ಲುಪೇಟೆ ತಾಲೂಕು ಸಮಾಜ ಕಲ್ಯಾಣ ಇಲಾಖೆ ದೂ.ಸಂ 9480843091 ಹಾಗೂ ಮುಖ್ಯೋಪಾಧ್ಯರಾದ ಸ್ವಾಮಿ ಅವರ ಮೊ.ಸಂ 9980286809 ಸಂಪರ್ಕಿಸುವಂತೆ ಗುಂಡ್ಲುಪೇಟೆ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೋರಗೆರೆಯಲ್ಲಿ ಶುಕ್ರವಾರ ಶ್ರೀದೇವಿ ಮಹಾತ್ಮೆ ನಾಟಕ

**ಹುಳಿಯಾರು:** ಹುಳಿಯಾರು ಹೋಬಳಿಯ ಕೋರಗೆರೆ ಗ್ರಾಮ ದೇವತೆ ಶ್ರೀ ಆದಿಶಕ್ತಿದೇವಿ ಮತ್ತು ಶ್ರೀಆಂಜನೇಯಸ್ವಾಮಿಯವರ ಜಾತ್ರಾ ಮಹೋತ್ಸವದ ಅಂಗವಾಗಿ ಮೇ.24 ರ ಶುಕ್ರವಾರ ರಾತ್ರಿ 8 ಕ್ಕೆ ಶ್ರೀ ದೇವಿ ಮಹಾತ್ಮೆ ಅಥವಾ ರಕ್ತ ಬೀಜಾಸುರನ ವಧೆ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ನಾಟಕ ಪ್ರದರ್ಶನವನ್ನು ಶಾಸಕರಾದ ಸಿ.ಬಿ.ಸುರೇಶ್‌ಬಾಬು ಉದ್ಘಾಟಿಸುವರು, ಗ್ರಾಪಂ ಅಧ್ಯಕ್ಷ ಬಿ.ಎಸ್.ದಿನೇಶ್ ಅಧ್ಯಕ್ಷತೆ ವಹಿಸುವರು. ಗ್ರಾಪಂ ಮಾಜಿ ಅಧ್ಯಕ್ಷ ಕೆ.ಎಂ.ಮಂಜುನಾಥ್, ಸದಸ್ಯ ವಿ.ಸಿ.ಶೋಭಾ, ಕೆ.ಎನ್.ಉಮೇಶ್ ಉಪಸ್ಥಿತರಿರುವರು. ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ, ಮಾಜಿ ಶಾಸಕ ಕೆ.ಎಸ್. ಕಿರಣ್‌ಕುಮಾರ್, ಪಿಎಸ್‌ಐ ಬಸವರಾಜು, ಬೆಸ್ಕಾಂನ ಉಮೇಶ್‌ನಾಯ್ಕ, ತಿಮ್ಮೇಗೌಡ, ಸೊಸೈಟಿ ಅಧ್ಯಕ್ಷ ವಿಶ್ವನಾಥ್, ಪಿಡಿಒ ನವೀನ್‌ಕುಮಾರ್, ಗ್ರಾಮ ಲೆಕ್ಕಿಗ ಚಂದ್ರು ಆಗಮಿಸಲಿದ್ದಾರೆ.

## ವೀರಭದ್ರ ಸ್ವಾಮಿ ಗೋಷ್ಠಿ ಹಾಗೂ ಅಕ್ಕನ ಬಳಗದ ವಜ್ರ ಮಹೋತ್ಸವ



**ವಿಜಯಪುರ:** ಪಟ್ಟಣದಲ್ಲಿ ಸುಮಾರು 63 ವರ್ಷಗಳಿಂದಲೂ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸೇವಾ ಚಟುವಟಿಕೆಗಳನ್ನು ನಡೆಸಿಕೊಂಡು ಬರುವ ಮೂಲಕ ಧಾರ್ಮಿಕ ಚಿಂತಕರಲ್ಲಿ ಚಿಂತನೆಯನ್ನು ಮೂಡಿಸುವ ಮೂಲಕ ಜಾಗೃತಿ ಮೂಡಿಸುತ್ತಿರುವ ಪಟ್ಟಣದ ಶ್ರೀ ವೀರಭದ್ರ ಸ್ವಾಮಿ ಗೋಷ್ಠಿ ಹಾಗೂ ಅಕ್ಕನ ಬಳಗದ ಸೇವಾ ಟ್ರಸ್ಟ್‌ನ ವಜ್ರ ಮಹೋತ್ಸವ ಕಾರ್ಯಕ್ರಮ ಹಾಗೂ 351ನೇ ಮಾಸಿಕ ಶಿವಾನುಭವ ಗೋಷ್ಠಿ ಸಾಮೂಹಿಕ ಇಷ್ಟಲಿಂಗ ಪೂಜೆ ಮತ್ತು ನೂತನ ಪದಾಧಿಕಾರ ಸ್ವೀಕಾರ ಸಮಾರಂಭವನ್ನು ಮೇ 24ರ ಶುಕ್ರವಾರದಂದು ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಕಾರ್ಯದರ್ಶಿ, ಮ..ಸುರೇಶ ಬಾಬು ಪ್ರಕಟಣೆಯಲ್ಲಿ ತಿಳಿಸಿರುವರು. ಕಾರ್ಯಕ್ರಮದ ದಿವ್ಯ ನೇತೃತ್ವ ವಹಿಸಲಿರುವ ಶ್ರೀಮದ್ವಿಭೂತಿಪುರ ಸಂಸ್ಥಾನ ಮಠಾಧೀಶರಾದ ಶ್ರೀ ಡಾ. ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ರವರನ್ನು ಬೆಳಗ್ಗೆ 9:00 ಗಂಟೆಗೆ ಅಕ್ಕನ ಬಳಗದ ಅರಿವಿನ ಮನೆಯಿಂದ ವೀರಗಾಸೆ ತಂಡ ಹಾಗೂ ಮುತ್ತೈದೆಯರ ಪೂರ್ಣ ಕುಂಭ ಕಳಸಗಳೊಂದಿಗೆ ಶ್ರೀ ನಗರೇಶ್ವರ ಸ್ವಾಮಿ ಪ್ರಾರ್ಥನಾ ಮಂದಿರಕ್ಕೆ ಭವ್ಯ ಮೆರವಣಿಗೆಯೊಂದಿಗೆ ಕರೆದೊಯ್ಯಲಾಗುವುದು. ಶ್ರೀನಗರೇಶ್ವರ ಸ್ವಾಮಿ ಪ್ರಾರ್ಥನಾ ಮಂದಿರದಲ್ಲಿ ಬೆಳಗ್ಗೆ 9:30ಕ್ಕೆ ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ಸ್ವಾಮೀಜಿ ರವರ ನೇತೃತ್ವದಲ್ಲಿ ನೆರವೇರಿಸಲಾಗುವುದು. ಮಧ್ಯಾಹ್ನ 1 ಗಂಟೆಗೆ ಸ್ವಾಮೀಜಿರವರ ದಿವ್ಯ ಸಾನಿಧ್ಯದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು ಅಮೇರಿಕಾ ನಿವಾಸಿಗಳಾದ ಗ್ರೀಷ್ಮ ಹಾಗೂ ಆಧ್ಯ ರವರಿಂದ ಸ್ವಾಗತ ನೃತ್ಯ ಏರ್ಪಡಿಸಲಾಗಿದ್ದು, ಬೆಂಗಳೂರಿನ ಅಯೋಧ್ಯಾನಗರ ಶಿವಾಚಾರ್ಯ ನಗರ್ತ ವಿದ್ಯಾವರ್ಧಕ ಸಂಘದ (ಮಾತೃ ಸಂಸ್ಥೆ) ಅಧ್ಯಕ್ಷರಾದ ಎಸ್ ಪ್ರಕಾಶ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಲಿರುವರು. ವೀರಭದ್ರ ಸ್ವಾಮಿ ಗೋಷ್ಠಿಯ ಅಧ್ಯಕ್ಷರಾದ ಸಿ ಬಸಪ್ಪ ರವರು ಅಧ್ಯಕ್ಷತೆ ವಹಿಸಲಿದ್ದು, ಕಾರ್ಯದರ್ಶಿ ಮ.ಸುರೇಶ್ ಬಾಬುರವರಿಂದ ಪ್ರಾಸ್ತಾವಿಕ ನುಡಿ ಏರ್ಪಡಿಸಲಾಗಿದೆ. ಬೆಂಗಳೂರಿನ ನೇಟೀವ್ ಡ್ರೀಮ್ ಟೆಕ್ನಾಲಜೀಸ್‌ನ ಸಂಸ್ಥಾಪಕರಾದ ಚಂದನ್ ರವರು ಸುಜ್ಞಾನ ಪ್ರಿಯ ಸಂಪಾದಕತ್ವದ ಭಕ್ತಿ ನೀರಾಜನಕೃತಿಯನ್ನು ಲೋಕಾರ್ಪಣೆ ಗೊಳಿಸಲಿರುವರು. ಬೆಂಗಳೂರಿನ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಎಂ ಎಸ್ ಕೃಷ್ಣಮೂರ್ತಿ, ಖಜಾಂಚಿ ಎಂ ಶಂಕರ್, ಗೋಷ್ಠಿ ಬಳಗದ ಗೌರವಾಧ್ಯಕ್ಷರಾದ ಪಿ ಚಂದ್ರಪ್ಪ, ನಿಯೋಜಿತ ಅಧ್ಯಕ್ಷರಾದ ವಿ ಅನಿಲ್ ಕುಮಾರ್, ಉಪಾಧ್ಯಕ್ಷರಾದ ಅಂಬಾಭವಾನಿ ಬಸವರಸಪ್ಪ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿರುವರು. ಇದುವರೆಗೂ ಮಾಸಿಕ ಶಿವಾನುಭವ ಗೋಷ್ಠಿ ಕಾರ್ಯಕ್ರಮದ ಎಲ್ಲಾ ಸೇವಾಕರ್ತರುಗಳಿಗೆ ಹಾಗೂ ಅಕ್ಕನ ಬಳಗದ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡು ಬಂದ ಹಿರಿಯರುಗಳಿಗೆ ಗೌರವ ಸಮರ್ಪಣೆ ಏರ್ಪಡಿಸಲಾಗಿರುತ್ತದೆ.

## ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಚಾಮರಾಜನಗರ:** ಗುಂಡ್ಲುಪೇಟೆ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳಾದ ಗುಂಡ್ಲುಪೇಟೆ ಪಟ್ಟಣ, ಬಾಚಹಳ್ಳಿ, ಬೊಮ್ಮಲಾಪುರ, ಹಂಗಳ, ಕಬ್ಬಹಳ್ಳಿ ವಿದ್ಯಾರ್ಥಿನಿಲಯಗಳಿಗೆ 5 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಅರ್ಹ ಬಾಲಕರಿಂದ ಹಾಗೂ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳಾದ ಗುಂಡ್ಲುಪೇಟೆ ಪಟ್ಟಣ, ಕಬ್ಬಹಳ್ಳಿ, ಬೇಗೂರು ವಿದ್ಯಾರ್ಥಿನಿಲಯಗಳಿಗೆ 5 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಅರ್ಹ ಬಾಲಕಿಯರು ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಸಲ್ಲಿಸಬಹುದು.

ಗುಂಡ್ಲುಪೇಟೆ ಪಟ್ಟಣದಲ್ಲಿರುವ ಮೆಟ್ರಿಕ್ ನಂತರದ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮೊ, ಪದವಿ, ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರಾಗಿದ್ದಾರೆ. ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ ವೆಬ್‌ಸೈಟ್ https://sw.kar.nic.in®Ü ಮೂಲಕ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ಸ್ವೀಕೃತ ಪ್ರತಿಯ ಜೊತೆಗೆ ಅಗತ್ಯ ದಾಖಲಾತಿಗಳನ್ನು ಸಂಬಂಧಿಸಿದ ಮೇಲ್ವಿಚಾರಕರು ಅಥವಾ ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಗುಂಡ್ಲುಪೇಟೆ ಸಮಾಜ ಕಲ್ಯಾಣ ಇಲಾಖೆಯ ದೂ. ಸಂ- 9480843091 ಹಾಗೂ ಸಂಬಂಧಿಸಿದ ನಿಲಯಗಳ ಮೇಲ್ವಿಚಾರಕರನ್ನು ಸಂಪರ್ಕಿಸಬಹುದೆಂದು ಗುಂಡ್ಲುಪೇಟೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ್ಯಾಷನಲ್ ಸೇಫ್ಟಿ ಕೌನ್ಸಿಲ್ ತರಬೇತಿ

**ಮೈಸೂರು :** ನಗರದ ಪ್ರತಿಷ್ಠಿತ ಸ್ಕ್ಯಾನರೇ ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಭಾಗವಾಗಿ ರಕ್ಷಣಾತ್ಮಕ ಚಾಲನೆಯ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಶನಿವಾರ ಆಯೋಜಿಸಿದೆ. ಈ ಕಾರ್ಯಕ್ರಮವನ್ನು ರಾಷ್ಟ್ರೀಯ ಸುರಕ್ಷತಾ ಮಂಡಳಿಯು ನಡೆಸಿಕೊಡಲಿದ್ದು ಸುರಕ್ಷತಾ ಜಾಗೃತಿ ಮತ್ತು ರಕ್ಷಣಾತ್ಮಕ ಚಾಲನಾ ಸಲಹೆಗಳು ಮತ್ತು ರಸ್ತೆ ಜಾಗೃತಿ ಕುರಿತು ತಜ್ಞರು ತರಬೇತಿ ನೀಡಲಿದ್ದಾರೆ. ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಸ್ಕ್ಯಾನರೇ ಹೆಲ್ತ್‌ಕೇರ್ ಡಿವಿಜನ್, ಇನ್ಫೋಸಿಸ್ ಮೈಸೂರು ಕ್ಯಾಂಪಸ್ ಸಮೀಪ ಈ ಕಾರ್ಯಕ್ರಮ ನಡೆಯಲಿದೆ.

# ದಕ್ಷಿಣ ಶಿಕ್ಷಕರ ಕ್ಷೇತ್ರ ಗೆಲ್ಲಲು ಮೈತ್ರಿ ಬಲ ಪ್ರದರ್ಶನ



**ಮೈಸೂರು:** ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರ ಗೆಲ್ಲಲು ಬಿಜೆಪಿ ಜೆಡಿಎಸ್ ಪಕ್ಷಗಳ ಮುಖಂಡರು ಒಗ್ಗಟ್ಟಿನ ಬಲ ಪ್ರದರ್ಶಿಸಿದರು.

ನಿವೇದಿತಾ ನಗರದ ಕಲ್ಯಾಣ ಮಂಟಪದಲ್ಲಿ ನಡೆದ ಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹಾಗೂ ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ನೇತೃತ್ವದಲ್ಲಿ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಗೆಲ್ಲಿಸಲು ಮಾಡಬೇಕಾದ ರಣತಂತ್ರ ರೂಪಿಸಿದರು. ರಾಜ್ಯದಲ್ಲಿ ಒಂದು ಲಕ್ಷ ಶಿಕ್ಷಕರ ನೇಮಕಾತಿ ಮಾಡಿದ್ದು ಎಚ್.ಡಿ.ದೇವೇಗೌಡರ ಸರ್ಕಾರ. ನಂತರ 2006-07ರಲ್ಲಿ ಅತಿ ಹೆಚ್ಚು ಶಾಲಾ ಕಾಲೇಜುಗಳನ್ನು ಸ್ಥಾಪಿಸಿ 56 ಸಾವಿರ ಶಿಕ್ಷಕರ ನೇಮಕಾತಿ ಮಾಡಿದ್ದು ಜೆಡಿಎಸ್ ಬಿಜೆಪಿ ಸರ್ಕಾರ. ಶಿಕ್ಷಕರು ನಮ್ಮನ್ನೇ ಬೆಂಬಲಿಸಲಿದ್ದಾರೆ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಶಿಕ್ಷಕರ ಮನವೊಲಿಸಿ ಮತದಾನದ ದಿನ ಅತಿ ಹೆಚ್ಚು ಮತಗಳು ಮೈತ್ರಿ ಅಭ್ಯರ್ಥಿ ವಿವೇಕಾನಂದ ಅವರಿಗೆ ದೊರೆಯುವಂತೆ ಮಾಡಬೇಕು. ಮತದಾರರ ಮನೆಗಳಿಗೆ ಖುದ್ದಾಗಿ ಹೋಗಿ ಮನವಿ ಮಾಡಬೇಕು. ಮೈಸೂರು ಮಂಡ್ಯ, ಹಾಸನ ಹಾಗೂ ಚಾಮರಾಜನಗರದ ಶಿಕ್ಷಕರು ದಾಖಲೆಯ ಮತಗಳಿಂದ ಗೆಲ್ಲಿಸಬೇಕು ಎಂದು ಕಾರ್ಯಕರ್ತರಿಗೆ ಸೂಚಿಸಿದರು.

ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ಎರಡೂ ಪಕ್ಷಗಳ ಶಕ್ತಿಯನ್ನು ನಾಡಿನ ಜನರು ಗಮನಿಸಿದ್ದಾರೆ. ಯಾವುದೇ ಚುನಾವಣೆಯನ್ನು ಮೈತ್ರಿ ಪಕ್ಷಗಳು ಕಡೆಗಣಿಸುವುದಿಲ್ಲ. ಪರಿಷತ್‌ನಲ್ಲಿ ನಮ್ಮ ಬಲ ಹೆಚ್ಚಿರುವುದರಿಂದ ಕಾಂಗ್ರೆಸ್ ಸರ್ಕಾರಕ್ಕೆ ಭಯ ಹುಟ್ಟಿದೆ. ಮಸೂದೆಗಳಿಗೆ ನಮ್ಮ ವಿಶ್ವಾಸ ಬೇಕೇ ಬೇಕಿದೆ. ಈ ಚುನಾವಣೆಯಲ್ಲೂ ನಮ್ಮದೇ ಅಭ್ಯರ್ಥಿ ಜಯಗಳಿಸಲಿದ್ದಾರೆ ಎಂದರು.

ಚುನಾವಣೆಯಲ್ಲಿ ಪಕ್ಷದ ಗುರುತು ಇರುವುದಿಲ್ಲ. 2ನೇ ಸಂಖ್ಯೆಯ ಗುರುತಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಬೇಕು. ಶಿಕ್ಷಣ ವಿರೋಧಿಗಳಾದ ಕಾಂಗ್ರೆಸ್‌ಗೆ ಪಾಠ ಕಲಿಸಬೇಕು ಎಂದು ಕೋರಿದರು.

ಮುಖಂಡ ಸಾ.ರಾ.ಮಹೇಶ್ ಮಾತನಾಡಿ, ನಮ್ಮಿಂದಲೇ ಗೆದ್ದವರು ಎದುರಾಳಿ ಪಕ್ಷದ ಅಭ್ಯರ್ಥಿಯಾಗಿದ್ದಾರೆ. ನಮ್ಮ ವರಿಷ್ಠರು, ಮುಖಂಡರ ಬಗ್ಗೆ ಹಗುರವಾಗಿ ಮಾತನಾಡುತ್ತಿದ್ದಾರೆ. ಕಾರ್ಯಕರ್ತರು ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಕು ಎಂದರು.

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಮಾತನಾಡಿ, ಕಾಂಗ್ರೆಸ್ ಪಕ್ಷದ ದರ್ಪ, ದಬ್ಬಾಳಿಕೆಗಳ ನಡುವೆ ಒಗ್ಗಟ್ಟಾಗಿ ಮುಂದೆ ಹೋದರೆ ನಮ್ಮ ಅಭ್ಯರ್ಥಿ ಗೆಲ್ಲಲಿದ್ದಾರೆ. ನಮ್ಮನ್ನು ಯಾರೂ ಬೇರ್ಪಡಿಸಲಾಗದು. ಶ್ರಮಿಸಿದರೆ ಮಾತ್ರ ಶಾಶ್ವತ ಉಳಿಗಾಲ ಎಂದು ಹೇಳಿದರು. ಶಾಸಕರಾದ ಟಿ.ಎಸ್.ಶ್ರೀವತ್ಸ, ಸ್ವರೂಪ್ ಗೌಡ, ಸಿಮೆಂಟ್ ಮಂಜು, ಮುಖಂಡರಾದ ಕೆ.ಮಹದೇವ್, ಎನ್.ಮಹೇಶ್, ಬಿ.ಹರ್ಷವರ್ಧನ್, ಅಶ್ವಿನ್ ಕುಮಾರ್, ನಿರಂಜನ್ ಕುಮಾರ್, ಲಿಂಗೇಶ್, ಎಲ್.ನಾಗೇಂದ್ರ, ಕವೀಶ್ ಗೌಡ, ಶಿವಕುಮಾರ್, ಆರ್.ಲಿಂಗಪ್ಪ, ರಮೇಶ್, ಎಚ್.ಕೆ.ಕುಮಾರಸ್ವಾಮಿ, ಬಾಲರಾಜ್, ಎಚ್.ಕೆ.ಸುರೇಶ್, ತೋಂಟದಾರ್ಯ, ನಂಜುಂಡೇಗೌಡ, ರಮೇಶ್ ಗೌಡ, ಎನ್.ಆರ್.ಸಂತೋಷ್, ಎಚ್.ಕೆ.ರಾಮು, ಪ್ರೀತಂ ನಾಗಪ್ಪ, ಚೆಲುವೇಗೌಡ, ದಾಕ್ಷಾಯಿಣಿ, ಮೈ.ವಿ.ರವಿಶಂಕರ್, ಎಲ್.ಆರ್. ಮಹದೇವಸ್ವಾಮಿ ಹಾಜರಿದ್ದರು.

# ಸಂಜೆ ಟಿಪ್ಸ್




## ಪೋರ್ಟ್ ಪೋಲಿಯೊ ಪ್ರದರ್ಶನ

ವಿದ್ಯಾರ್ಥಿಗಳ ಐಡಿಯಾಗಳು, ಆವಿಷ್ಕಾರ ಮತ್ತು ಜಾಣ್ಮೆಯನ್ನು ಸಂಭ್ರಮಿಸುವ ಪರ್ಲ್ ಅಕಾಡೆಮಿ ತನ್ನ ಬೆಂಗಳೂರು ಕ್ಯಾಂಪಸ್ ನಲ್ಲಿ ತನ್ನ ವಾರ್ಷಿಕ ಕಾರ್ಯಕ್ರಮ 'ಪೋರ್ಟ್ ಪೋಲಿಯೊ 2024' ಪ್ರಸ್ತುತಪಡಿಸಿತು. ಭಾರತದ ತಂತ್ರಜ್ಞಾನ ಕೇಂದ್ರ, ಬೆಂಗಳೂರಿನಲ್ಲಿ ನಡೆದ ಈ ಪ್ರದರ್ಶನವು ಸಂಚಲನಾತ್ಮಕ ತಂತ್ರಜ್ಞಾನದ ಸುತ್ತಲೂ ಚಿಂತನೆಗೆ ಹಚ್ಚುವ ಪರಿಕಲ್ಪನೆಗಳ ಮೂಲಕ ನಗರದ ಸೃಜನಶೀಲ ಮತ್ತು ಆವಿಷ್ಕಾರಕ ಸಂವಾದಗಳನ್ನು ನಡೆಸಿತು. ಈ ಕಾರ್ಯಕ್ರಮವು ವರ್ಚುಯಲ್ ಜಗತ್ತಿನಲ್ಲಿ ಅಲೆಮಾರಿಗಳಂತೆ ಇರುವ ಡಿಜಿಟಲ್ ನೇಟಿವ್ ಗಳಿಂದ ಸ್ಫೂರ್ತಿ ಪಡೆದ 'ಟೆಕ್ ನೊಮ್ಯಾಡ್ಸ್' ವಸ್ತು ಆಧರಿಸಿತ್ತು. ಪ್ರದರ್ಶಿಸಲಾದ ಪ್ರಾಜೆಕ್ಟ್ ಗಳು ತಂತ್ರಜ್ಞಾನ ಮತ್ತು ಸೃಜನಶೀಲತೆಯ ಆಸಕ್ತಿದಾಯಕ ಸಂಯೋಜನೆಯಾಗಿದ್ದವು. ಪರ್ಲ್ ಅಕಾಡೆಮಿ ಅಧ್ಯಕ್ಷೆ ಅದಿತಿ ಶ್ರೀವಾಸ್ತವ ಮತ್ತು ಪರ್ಲ್ ಅಕಾಡೆಮಿ ಬೆಂಗಳೂರಿನ ರೀಜನಲ್ ಕ್ಯಾಂಪಸ್ ಡೈರೆಕ್ಟರ್ ಸನ್ಯೋಗಿತಾ ಛಾಧಾ, ಫ್ಯಾಷನ್, ಬಿಸಿನೆಸ್, ಇಂಟೀರಿಯರ್ ಡೀನ್ ಆಂಟೊನಿಯೊ ಮೌರಿಜೊ ಗ್ರಿಯೊಳಿ ಮತ್ತು ಕಮ್ಯುನಿಕೇಷನ್, ಡಿಸೈನ್, ಫಿಲ್ಮ್ ಅಂಡ್ ಗೇಮಿಂಗ್ ಡೀನ್ ಸಿ.ಬಿ. ಅರುಣ್ ಅವರೊಂದಿಗೆ ಉದ್ಯಮದ ಖ್ಯಾತನಾಮರು ಮತ್ತು ಗಣ್ಯ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪರ್ಲ್ ಅಕಾಡೆಮಿಯು ಇತ್ತೀಚೆಗೆ ಎಫ್.ಡಿ.ಸಿ.ಐ.ನೊಂದಿಗೆ ತನ್ನ ಸುದೀರ್ಘ ಬಾಂಧವ್ಯವನ್ನು ಸದೃಢಗೊಳಿಸಿದ್ದು ಅಲ್ಪಾವಧಿ ಕೋರ್ಸ್ ಗಳಿಗೆ ಕೋ-ಸರ್ಟಿಫಿಕೇಷನ್ ಮತ್ತು ಪ್ರಮುಖ ಭಾರತೀಯ ಫ್ಯಾಷನ್ ಡಿಸೈನರ್ ಗಳಿಂದ ಮಾಸ್ಟರ್ ಕ್ಲಾಸ್ ಅಲ್ಲದೆ ವಿದ್ಯಾರ್ಥಿಗಳಿಗೆ ಮೌಲ್ಯಯುತ ಕಲಿಕಾ ಅನುಭವಗಳು ಮತ್ತು ಉದ್ಯಮದ ನೇರ ಅನುಭವ ಪಡೆದುಕೊಳ್ಳಲು ನೆರವಾಗುತ್ತಿದೆ. ಎಫ್.ಡಿ.ಸಿ.ಐ. ಸಹಯೋಗವು ವಿದ್ಯಾರ್ಥಿಗಳಿಗೆ ಅವರ ಕಲೆಯನ್ನು ಲ್ಯಾಕ್ಮೆ ಫ್ಯಾಷನ್ ವೀಕ್ ಮತ್ತು ಇಂಡಿಯಾ ಕೊಟ್ಯೂರ್ ವೀಕ್ ಗಳಲ್ಲಿ ಪ್ರದರ್ಶಿಸಲು ಅವಕಾಶ ಕಲ್ಪಿಸಿತು. ವಿದ್ಯಾರ್ಥಿಗಳು ಸಿ.ಎಲ್.ಒ. 3ಡಿ ಸಾಫ್ಟ್ ವೇರ್ ನೆರವಿನಿಂದ ವರ್ಚುಯಲ್, ಜೀವನಕ್ಕೆ ಹತ್ತಿರವಾದ ಫ್ಯಾಷನ್ ಡಿಸೈನ್ ಪ್ರಾಜೆಕ್ಟ್ ಗಳನ್ನು ಅತ್ಯಾಧುನಿಕ ಸಿಮುಲೇಷನ್ ತಂತ್ರಜ್ಞಾನದ ಮೂಲಕ ರೂಪಿಸಿದರು.

## ಚೀಸ್ ಕುಕ್ಕೀಸ್

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

2 ಟೇಬಲ್ ಸ್ಪೂನ್ ತುರಿದ ಪ್ರೊಸೆಸ್ಡ್ ಚೀಸ್, ಕಪ್-ಬೆಣ್ಣೆ, ಚಿಟಿಕೆ-ಖಾರದ ಪುಡಿ, ಚಿಟಿಕೆ-ಉಪ್ಪು, 1 ಕಪ್- ಮೈದಾ.

### ಮಾಡುವ ವಿಧಾನ

ಮೊದಲಿಗೆ ಬೆಣ್ಣೆಯನ್ನು ಒಂದು ಬೌಲ್ ಗೆ ಹಾಕಿಕೊಂಡು ಅದನ್ನು ಚೆನ್ನಾಗಿ ಬೀಟ್ ಮಾಡಿಕೊಳ್ಳಿ. ಇದು ಕ್ರೀಂನ ಹದಕ್ಕೆ ಬರಲಿ. ನಂತರ ಇದಕ್ಕೆ ಚೀಸ್, ಖಾರದಪುಡಿ, ಉಪ್ಪು ಹಾಕಿ ಮತ್ತೊಮ್ಮೆ ಚೆನ್ನಾಗಿ ಮಿಕ್ಸ್ ಮಾಡಿ. ಮೈದಾ ಹಿಟ್ಟನ್ನು ಈ ಮಿಶ್ರಣಕ್ಕೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ನಾದಿಕೊಂಡು ಒಂದು ತಟ್ಟೆ ಮುಚ್ಚಿ 15 ನಿಮಿಷಗಳ ಕಾಲ ಫ್ರಿಡ್ಜ್ ನಲ್ಲಿಡಿ. ನಂತರ ಹೊರಕ್ಕೆ ತೆಗೆದು ಚಪಾತಿ ಮಣೆಯ ಮೇಲೆ ಸ್ವಲ್ಪ ಮೈದಾ ಹಿಟ್ಟು ಉದುರಿಸಿ ಸ್ವಲ್ಪ ದಪ್ಪಕ್ಕೆ ಲಟ್ಟಿಸಿಕೊಳ್ಳಿ. ತೀರಾ ತೆಳು ಮಾಡಬೇಡಿ. ನಂತರ ಕುಕ್ಕಿ ಕಟರ್ ಅಥವಾ ವೃತ್ತಾಕಾರದ ಬೌಲ್ ನ ಸಹಾಯದಿಂದ ಲಟ್ಟಿಸಿಕೊಂಡ ಚಪಾತಿಯನ್ನು ವೃತ್ತಾಕಾರದಲ್ಲಿ ಕುಕ್ಕಿಸ್ ರೀತಿ ಕತ್ತರಿಸಿಕೊಳ್ಳಿ. ಬೇಕಿಂಗ್ ಟ್ರೇ ಗೆ ತುಪ್ಪ ಸವರಿ ಅದನ್ನು ಒವೆನ್ ನಲ್ಲಿ ಪ್ರಿ ಹೀಟ್ ಮಾಡಿಕೊಂಡು ನಂತರ ಕುಕ್ಕಿಸ್ ಅನ್ನು ಅದರ ಮೇಲೆ ಇಟ್ಟು 15 ನಿಮಿಷಗಳ ಕಾಲ ಬೇಕ್ ಮಾಡಿಕೊಳ್ಳಿ. ಇದನ್ನು ಗಾಳಿಯಾಡದ ಡಬ್ಬದಲ್ಲಿ ತುಂಬಿಸಿಟ್ಟುಕೊಳ್ಳಬಹುದು.

## ನಟಿ ಆಲಿಯಾ ಭಟ್ ವಿರುದ್ಧ ರೊಚ್ಚಿಗೆದ್ದ ನೆಟ್ಟಿಗರು



ಕೆಲ ದಿನಗಳ ಹಿಂದಷ್ಟೇ ಚುನಾವಮೆ ನಡೆದಿದ್ದು, ಬಾಲಿವುಡ್ನ ಅನೇಕ ನಟ ನಟಿಯರು ಬಂದು ಓಟ್ ಹಾಕಿದ್ದಾರೆ. ಅಕ್ಷಯ್ ಕುಮಾರ್, ರಣ್ವೀರ್ ಸಿಂಗ್, ದೀಪಿಕಾ ಪಡುಕೋಣೆ ಸೇರಿ ಹಲವು ಬಾಲಿವುಡ್ ಸೆಲೆಬ್ರಿಟಿಗಳು ಪ್ರಜಾಪ್ರಭುತ್ವದ ಹಕ್ಕನ್ನು ಚಲಾಯಿಸಿದ್ದಾರೆ.ಆಲಿಯಾ ಭಟ್ ಪತಿ ರಣ್ಬೀರ್ ಕಪೂರ್ ಕೂಡ ಓಟ್ ಹಾಕಿದ್ದಾರೆ. ಆದರೆ ಆಲಿಯಾ ಭಟ್ ಮಾತ್ರ ಓಟ್ ಮಾಡಲು ಬಂದಿಲ್ಲ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಆಲಿಯಾ ಟ್ರೋಲ್ ಆಗಿದ್ದು, ಆಕೆ ಭಾರತೀಯ ಪ್ರಜೆಯಲ್ಲ, ಬ್ರಿಟನ್ ನಾಗರಿಕತ್ವ ಹೊಂದಿದ್ದಾರೆ. ಹಾಗಾಗಿ ಅವರಿಗೆ ಓಟ್ ಹಾಕುವ ಹಕ್ಕಿಲ್ಲವೆಂದು ಟೀಕಿಸಿದ್ದಾರೆ.ಆಕೆಗೆ ಮೊದಲು ಭಾರತದ ಪೌರತ್ವ ಪಡೆದುಕೊಳ್ಳಲಿ ಹೇಳಿ, ಇಲ್ಲವಾದರೆ ಭಾರತ ಬಿಟ್ಟು ತೊಲಗಲಿ ಎಂದು ಕೆಲವರು ಆಕ್ರೋಶ ಹೊರಹಾಕಿದ್ದಾರೆ. ನಟ ಅಕ್ಷಯ್ ಕುಮಾರ್ ಬಗ್ಗೆ ಕೂಡ ಇದೇ ರೀತಿ ಟೀಕೆ ಕೇಳಿ ಬಂದಿತ್ತು, ಅಕ್ಷಯ್ ಈ ಮೊದಲು ಕೆನಡಾದಲ್ಲಿ ಕೆಲಸ ಮಾಡುತ್ತಿದ್ದ ಕಾರಣ, ಅವರು ಕೆನಡಾ ಪೌರತ್ವ ಹೊಂದಿದ್ದರು. ಈ ಕಾರಣಕ್ಕೆ ಅಕ್ಷಯ್ ಮೊದಲು ಭಾರತೀಯ ಪೌರತ್ವ ಪಡೆಯಲಿ ಎಂದು ಹಲವರು ಆಗ್ರಹಿಸಿದ್ದರು.ಅಕ್ಷಯ್ ಇದೀಗ ಭಾರತೀಯ ಪೌರತ್ವ ಪಡೆದಿದ್ದು, ಈ ಬಾರಿ ಮೊದಲ ಬಾರಿ ಲೋಕಸಭಾ ಚುನಾವಣೆಗೆ ಓಟ್ ಮಾಡಿದ್ದಾರೆ. ಆಲಿಯಾ ತಾಯಿ ಬ್ರಿಟನ್ ವಾಸಿಯಾಗಿದ್ದು, ಆಲಿಯಾ ಬ್ರಿಟನ್ನಲ್ಲೇ ಹುಟ್ಟಿ ಬೆಳೆದಿದ್ದಳು. ಅವರ ಅಜ್ಜಿ ಕೂಡ ಇಂಗ್ಲೆಂಡ್ ನವರಾಗಿದ್ದರು. ಆದರೆ ಆಲೀಯಾ ಇಷ್ಟು ವರ್ಷದಿಂದ ಭಾರತದಲ್ಲಿ ಇದ್ದರೂ, ಆಕೆ ಭಾರತದ ಪೌರತ್ವ ಪಡೆಯದಿದ್ದು ಮಾತ್ರ ನಾಚಿಕೆಗೇಡಿನ ವಿಷಯ.

### ಬ್ಲಾಕ್ಔಟ್ 2024' ಪಟ್ಟಿಯಲ್ಲಿ ಆಲಿಯಾ

ಮೆಟ್ ಗಾಲಾ 2024ರಲ್ಲಿ ಅತ್ಯಂತ ಖ್ಯಾತಿ ಪಡೆದ ತಾರೆಯರಲ್ಲಿ ಆಲಿಯಾ ಭಟ್ ಕೂಡ ಒಬ್ಬರು ಎಂಬುದು ಗಮನಾರ್ಹ. ಆದ್ರೆ, ಆಲಿಯಾ ಭಟ್ ಅವರ ಹೆಸರನ್ನು 'ಬ್ಲಾಕ್ಔಟ್ 2024' ಪಟ್ಟಿಯಲ್ಲಿ ನೋಂದಾಯಿಸಲಾಗಿದೆ. ಈವೆಂಟ್ನಲ್ಲಿ ವಿಶ್ವದ ಜ್ವಲಂತ ಸಮಸ್ಯೆ ಬಗ್ಗೆ ಮೌನ ವಹಿಸಿದ್ದಕ್ಕಾಗಿ ಆಲಿಯಾ ಟೀಕೆಗಳನ್ನು ಎದುರಿಸುತ್ತಿದ್ದಾರೆ. ಈ ಪಟ್ಟಿಯಲ್ಲಿ ಹಲವು ವಿದೇಶಿ ತಾರೆಯರ ಹೆಸರೂ ಕೂಡ ಸೇರಿದೆ. ಗಾಜಾ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಗೆ ಕೆಲ ವಿಶ್ವಪ್ರಸಿದ್ಧ ತಾರೆಯರು ಯಾವುದೇ ಪ್ರತಿಕ್ರಿಯೆ ನೀಡದಿರುವುದರ ಬಗ್ಗೆ ಕಳೆದ ಕೆಲ ತಿಂಗಳುಗಳಿಂದ ಚರ್ಚೆ ನಡೆಯುತ್ತಿದೆ. ಮೆಟ್ ಗಾಲಾ 2024ರ ನಂತರ, ಈ ಸಮಸ್ಯೆ ಇನ್ನಷ್ಟು ಸದ್ದು ಮಾಡಿದೆ. ಜನರು ಎಕ್ಸ್ನಲ್ಲಿ ನಿರ್ಬಂಧಿಸಲಾದ ಕೆಲ ಸೆಲೆಬ್ರಿಟಿಗಳ ಪಟ್ಟಿಯನ್ನು ಹಂಚಿಕೊಳ್ಳುತ್ತಿದ್ದಾರೆ.

ಈ ಬಹಿಷ್ಕಾರ ಅಥವಾ ಬ್ಲಾಕಿಂಗ್ ಅಭಿಯಾನವು, ವಿಶ್ವ ಪ್ರಸಿದ್ಧ ವ್ಯಕ್ತಿಗಳು ಶಾಂತಿಗಾಗಿ ಕರೆ ಕೊಡಲು ತಮ್ಮ ದೊಡ್ಡ ವೇದಿಕೆಗಳನ್ನು ಬಳಸಲು ಪ್ರೇರೇಪಿಸುವ ಗುರಿಯನ್ನು ಹೊಂದಿದೆ. ಆದರೆ, ಆಲಿಯಾ ಭಟ್ ಸೇರಿದಂತೆ ವಿಶ್ವ ಪ್ರಸಿದ್ಧ ತಾರೆಗಳು ಈ ವಿಷಯದ ಬಗ್ಗೆ ಮೌನವಹಿಸಿರೋದು ಆಕ್ರೋಶಕ್ಕೆ ಕಾರಣವಾಗಿದೆ.

## ಮಳೆಗಾಲದಲ್ಲಿ ಆರೋಗ್ಯದ ಬಗ್ಗೆ ಕಾಳಜಿ ಇರಲಿ





### ಹೆಲ್ತ್ ಟಿಪ್ಸ್

ಮುಂಗಾರು ಪೂರ್ವ ಮಳೆ ಪ್ರಾರಂಭವಾಗಿದ್ದು, ನಮ್ಮ ಆರೋಗ್ಯ ಕಡೆ ಗಮನ ಹರಿಸುವುದು ತುಂಬಾ ಉತ್ತಮ. ಏಕೆಂದರೆ ಮಳೆಯಿಂದಲೂ ನಮಗೆ ಹಲವು ರೋಗ-ರುಜಿನುಗಳು ಬರುವ ಸಾಧ್ಯತೆ ಅತಿ ಹೆಚ್ಚಿದೆ.

ಮಳೆಗಾಲದಲ್ಲಿ ಮಳೆ ನೀರು ನಿಂತು ಅಲ್ಲಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಸೊಳ್ಳೆಗಳು ನಮಗೆ ಕಚ್ಚುವುದರಿಂದ ಡೆಂಗ್ಯೂ, ಮಲೇರಿಯಾದಂತಹ ಜ್ವರಗಳು ನಮ್ಮನ್ನು ಕಾಡುತ್ತದೆ.

ಮನೆಯ ಸುತ್ತಮುತ್ತ ಮಳೆನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಮನೆಯೊಳಗೆ ಸೊಳ್ಳೆ ಪರದೆಗಳನ್ನು ಬಳಸುವುದು ಒಳ್ಳೆಯದು.

ಎಲ್ಲೆಡೆ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದರಿಂದ ರಸ್ತೆ ಬದಿ, ಹೋಟೆಲ್ ಅಥವಾ ಹೊರಗಿನ ಆಹಾರವನ್ನು ತಿನ್ನುವುದು ನಿಲ್ಲಿಸಿಬಿಡಿ. ಮಳೆಗಾಲದಲ್ಲಿ ಹೊರಗಿನ ಆಹಾರ-ತಿಂಡಿ ಆರೋಗ್ಯಕ್ಕೆ ಹಾನಿ ಮಾಡುತ್ತದೆ. ಅಲ್ಲದೇ ಪ್ರಕೃತಿಗೆ ಹೊಸದಾಗಿ ನೀರು ಸೇರಿಕೊಳ್ಳುವುದರಿಂದ ಕೆಮ್ಮು, ನೆಗಡಿ, ಶೀತದಂತ ಕಾಯಿಲೆಗಳು ಬೇಗ ಬರುತ್ತದೆ.

ಮಳೆಗಾಲದಲ್ಲಿ ಮನೆಗೆ ತರುವಂತ ಹಣ್ಣು, ತರಕಾರಿಗಳನ್ನು ಚೆನ್ನಾಗಿ ತೊಳೆಯಬೇಕು. ಹೊರಗೆ ತಂಪಾದ ವಾತಾವರಣ ಇರುವುದರಿಂದ ಬ್ಯಾಕ್ಟೀರಿಯಾಗಳು ಬೇಗ ನಾಶವಾಗುವುದಿಲ್ಲ. ಹೀಗಾಗಿ ಹಣ್ಣು, ತರಕಾರಿಗಳನ್ನ ತೊಳೆದು ತಿನ್ನುವುದು ಬಹಳ ಉತ್ತಮ.

ಯಾವುದೇ ನಗರ ಬಹುತೇಕ ಮಾಲಿನ್ಯಕಾರಕ ಕಣಗಳಿಂದ ತುಂಬಿವೆ. ಹೀಗಾಗಿ ಮಳೆಯಲ್ಲಿ ನೆನೆದು ಬಂದಾಗ ಮನೆಯಲ್ಲಿನ ನೀರಿನಿಂದ ಸ್ನಾನ ಮಾಡಿ. ನೆನೆದು ಬಂದ ಬಟ್ಟೆಯಲ್ಲೇ ಇರಬೇಡಿ. ಒದ್ದೆ ಬಟ್ಟೆಯಲ್ಲೇ ಇದ್ದರೇ ಸೋಂಕು ತಗುಲಬಹುದು.

ವಿಟಮಿನ್ ಸಿ ಅಂಶವಿರುವ ಆಹಾರಗಳನ್ನ ಸೇವಿಸುವುದರಿಂದ ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಬಹುದು. ನಿಂಬೆಹಣ್ಣಿನ ಶರಬತ್ತು, ಬಾಳೆಹಣ್ಣು, ಬಿಟ್ರೂಟ್ನಂತ ಹಣ್ಣು, ತರಕಾರಿ ಸೇವಿಸಿ. ಹೆಚ್ಚು ಕೊಬ್ಬಿನಾಂಶವಿರುವ ಜಂಕ್ ಫುಡ್ಗಳನ್ನ ತೆಗೆದುಕೊಳ್ಳಬಾರದು.

## ಉಗುರುಗಳು ಸುಲಭವಾಗಿ ತುಂಡಾಗಲು ಕಾರಣವೇನು?

### ಬ್ಯೂಟಿ ಟಿಪ್ಸ್



ಉಗುರುಗಳು ಒಡೆಯುತ್ತವೆ, ಇದರಿಂದಾಗಿ ಹುಡುಗಿಯರು ತುಂಬಾ ಚಿಂತಿತರಾಗುತ್ತಾರೆ. ಯಾವುದೇ ಕಾರಣವಿಲ್ಲದೆ ಉಗುರುಗಳು ಒಡೆಯಲು ಪ್ರಾರಂಭಿಸುವುದು ಅಥವಾ ಮಂದವಾಗಿ ಕಾಣಿಸಿಕೊಳ್ಳುವುದು ಅನೇಕ ಬಾರಿ ಕಂಡುಬರುತ್ತದೆ. ಈ ರೀತಿಲಕ್ಷಣಗಳು ನಿಮಗೆ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿದ್ದರೆ, ಅದನ್ನು ನಿರ್ಲಕ್ಷಿಸಬೇಡಿ. ಉಗುರುಗಳು ದುರ್ಬಲಗೊಳ್ಳಲು ಮತ್ತು ಆಗಾಗ್ಗೆ ಒಡೆಯಲು ಕಾರಣಗಳೇನು ಎಂಬುದನ್ನು ಇಲ್ಲಿ ತಿಳಿದುಕೊಳ್ಳಿ. ದೇಹದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವ ಕ್ಯಾಲ್ಸಿಯಂ, ಮೂಳೆಗಳನ್ನು ಬಲವಾಗಿಡಲು ಮತ್ತು ನಿಮ್ಮ ಹಲ್ಲುಗಳು ಮತ್ತು ಉಗುರುಗಳಿಗೆ ಬಹಳ ಮುಖ್ಯವಾಗಿದೆ. ದೇಹದಲ್ಲಿ ಕ್ಯಾಲ್ಸಿಯಂ ಕೊರತೆಯಿಂದಾಗಿ, ನಿಮ್ಮ ಉಗುರುಗಳು ದುರ್ಬಲವಾಗಲು ಮತ್ತು ಒಡೆಯಲು ಪ್ರಾರಂಭವಾಗಬಹುದು. ದೇಹದಲ್ಲಿ ಕಬ್ಬಿಣದ ಕೊರತೆಯಿಂದಾಗಿ, ಹಿಮೋಗ್ಲೋಬಿನ್ ಉತ್ಪಾದನೆಯು ಅಡ್ಡಿಯಾಗುತ್ತದೆ, ಇದರಿಂದಾಗಿ ದೇಹದಲ್ಲಿ ರಕ್ತಹೀನತೆ ಕಂಡುಬರುತ್ತದೆ. ಇದು ನಿಮ್ಮ ಉಗುರುಗಳ ಬಣ್ಣದಲ್ಲಿ ಬದಲಾವಣೆಗೆ ಕಾರಣವಾಗಬಹುದು.

ಇದಲ್ಲದೆ, ಉಗುರುಗಳು ತುಂಬಾ ದುರ್ಬಲಗೊಳ್ಳುತ್ತವೆ, ಇದರಿಂದಾಗಿ ಆಗಾಗ್ಗೆ ಉಗುರುಗಳು ಒಡೆಯುವಿಕೆಯಂತಹ ಸಮಸ್ಯೆಗಳು ಉಂಟಾಗಬಹುದು. ದೇಹದಲ್ಲಿ ವಿಟಮಿನ್ ಬಿ 12 ಕೊರತೆಯಿಂದಾಗಿ, ಜೀವಕೋಶಗಳ ರಚನೆಯಲ್ಲಿ ಸಮಸ್ಯೆ ಉಂಟಾಗಬಹುದು, ಈ ಕಾರಣದಿಂದಾಗಿ, ಉಗುರುಗಳು ದುರ್ಬಲಗೊಳ್ಳುವುದರ ಜೊತೆಗೆ, ಇದು ನಿಮ್ಮ ಚರ್ಮದ ಮೇಲೆ ಪರಿಣಾಮ ಬೀರುತ್ತದೆ. ಇದಲ್ಲದೇ ತೂಕ ಕಡಿಮೆಯಾಗುವುದು, ಹಸಿವಾಗದಿರುವುದು, ಕೈಕಾಲು ಜುಮ್ಮೆನ್ನುವುದು ಇತ್ಯಾದಿ ಸಮಸ್ಯೆಗಳೂ ಬರಲಾರಂಭಿಸುತ್ತವೆ. ಹೈಪೋಥೈರಾಯ್ಡ್ ಹಾರ್ಮೋನ್ ಸಮಸ್ಯೆಯಾಗಿದ್ದು, ಇದರಿಂದ ಆಯಾಸ, ತೂಕ ಹೆಚ್ಚಾಗುವುದು, ಸ್ನಾಯು ನೋವು ಇತ್ಯಾದಿಗಳಲ್ಲದೆ, ಕೂದಲು ಉದುರುವಿಕೆ ಮತ್ತು ದುರ್ಬಲಗೊಳ್ಳುವುದು ಮತ್ತು ಉಗುರುಗಳ ಒಡೆಯುವಿಕೆಯಂತಹ ಸಮಸ್ಯೆಗಳು ಸಹ ಉಂಟಾಗಬಹುದು.

## ಫನ್ ವರ್ಲ್ಡ್ ಅಮ್ಯೂಸ್ಮೆಂಟ್ ಪಾರ್ಕ್ ನಿಂದ ಅದ್ಭುತ ಹೊಸ ಆಕರ್ಷಣೆಗಳ ಅನಾವರಣ





ಫನ್ ವರ್ಲ್ಡ್ ಅಮ್ಯೂಸ್ಮೆಂಟ್ ಪಾರ್ಕ್ ಬೆಂಗಳೂರಿನಲ್ಲಿ ಥ್ರಿಲ್ ಮತ್ತು ಉತ್ಸಾಹವನ್ನು ಮರು ವ್ಯಾಖ್ಯಾನಿಸುವ ತನ್ನ ಹೊಚ್ಚಹೊಸ ಆಕರ್ಷಣೆಗಳನ್ನು ಅನಾವರಣಗೊಳಿಸಲು ಸಂತೋಷ ಪಡುತ್ತದೆ. ಹಲವು ವರ್ಷಗಳಿಂದ ಕೋಟ್ಯಂತರ ಜನರನ್ನು ರಂಜಿಸುತ್ತಿರುವ ಪರಂಪರೆ ಹೊಂದಿರುವ ಫನ್ ವರ್ಲ್ಡ್ ಕುಟುಂಬಗಳು ಮತ್ತು ಸಾಹಸ ನಿರೀಕ್ಷಿಸುವರಿಗೆ ಪ್ರಮುಖ ತಾಣವಾಗಿ ಮುಂದುವರಿಯುತ್ತಿದೆ.

ಫನ್ ವರ್ಲ್ಡ್ ಇದೀಗ 29 ರೋಮಾಂಚಕ ಹೊಸ ವಾಟರ್ ಸ್ಲೈಡ್ ಗಳನ್ನು ಪರಿಚಯಿಸಿದ್ದು ಅದರಲ್ಲಿ ದೇಶದಲ್ಲೇ ಅತ್ಯಂತ ಎತ್ತರದ ರೈಡ್ ಒಳಗೊಂಡಿದ್ದು ಈ ವಿಶೇಷವು ನಮ್ಮ ಪಾರ್ಕ್ ನಲ್ಲಿ ಮಾತ್ರ ಲಭ್ಯವಿದೆ. ಈ ಮಹತ್ತರ ಸೇರ್ಪಡೆಯು ಹಿಂದೆಂದೂ ಕಾಣದ ರೋಮಾಂಚಕ ಅನುಭವ ನೀಡುತ್ತದೆ. ಈ ಉತ್ಸಾಹಕ್ಕೆ ಸೇರ್ಪಡೆಯಾದಂತೆ ಫನ್ ವರ್ಲ್ಡ್ ಹೆಮ್ಮೆಯಿಂದ ದೇಶದ ಅತ್ಯಂತ ದೊಡ್ಡ ಕರೌಸಲ್ ಹೊಂದಿದ್ದು 100 ಸೀಟುಗಳ ಸಾಮರ್ಥ್ಯ ಹೊಂದಿದ್ದ ಎಲ್ಲ ವಯೋಮಾನದವರನ್ನೂ ರಂಜಿಸುತ್ತದೆ.

ಬೆಂಗಳೂರಿನ ನಗರದ ಕೇಂದ್ರದಲ್ಲಿರುವ ಫನ್ ವರ್ಲ್ಡ್ ನಲ್ಲಿರುವ ಹೊಸ ಮಾನವ ನಿರ್ಮಿತ ಜಲಪಾತವು ಪಾರ್ಕ್ ನ ಸಾಹಸಗಳ ಸಾಲಿಗೆ ಆಕರ್ಷಕ ಸೇರ್ಪಡೆಯಾಗಿದೆ.

ಈ ಪ್ರಾರಂಭೋತ್ಸವದಲ್ಲಿ ವಯಸ್ಕರು ಹಾಗೂ ಮಕ್ಕಳಿಗೆ ಎಚ್ಚರಿಕೆಯಿಂದ ರೂಪಿಸಲಾದ 10 ಉತ್ಸಾಹಕರ ಕ್ರೀಡೆಗಳನ್ನು ಪ್ರದರ್ಶಿಸಿದ್ದು ಅವು ಪಾರ್ಕ್ ನ ವಿಸ್ತಾರ ಕೊಡುಗೆಗಳನ್ನು ಮತ್ತಷ್ಟು ಹೆಚ್ಚಿಸುತ್ತವೆ. ಒಟ್ಟು 85ಕ್ಕೂ ಹೆಚ್ಚು ರೈಡ್ ಗಳನ್ನು ಯುವ ಮತ್ತು ಯುವ ಮನಸ್ಸು ಹೊಂದಿದವರಿಗೆ ತಂದಿರುವ ಫನ್ ವರ್ಲ್ಡ್ ಭೇಟಿ ನೀಡಿದ ಎಲ್ಲರಿಗೂ ಸ್ಮರಣೀಯ ಅನುಭವ ನೀಡುತ್ತದೆ.

ಫನ್ ವರ್ಲ್ ಮ್ಯಾನೇಜರ್ ಶ್ರೀ ಪ್ರದೀಪ್, ''ನಾವು ನಮ್ಮ ಹೊಚ್ಚಹೊಸ ಆಕರ್ಷಣೆಗಳ ರೋಮಾಂಚನ ಮತ್ತು ಅದ್ಭುತವನ್ನು ಅನುಭವಿಸಲು ಸಾರ್ವಜನಿಕರನ್ನು ಆಹ್ವಾನಿಸಲು ಸಂತೋಷಿಸುತ್ತೇವೆ'' ಎಂದರು. ''ಈ ಮಹತ್ತರ ರೈಡ್ ಗಳು ಮತ್ತು ಅನುಭವಗಳ ಪರಿಚಯದಿಂದ ನಾವು ಸ್ಮರಣೀಯ ನೆನಪುಗಳನ್ನು ಸೃಷ್ಟಿಸಲು ಮತ್ತು ಎಲ್ಲ ವಯೋಮಾನದ ಸಂದರ್ಶಕರಿಗೆ ಸರಿಸಾಟಿ ಇರದ ಮನರಂಜನೆ ನೀಡುವ ಗುರಿ ಹೊಂದಿದ್ದೇವೆ'' ಎಂದರು. ಹಿಂದೆಂದೂ ಕಾಣದಂತಹ ಸಾಹಸದಲ್ಲಿ ತೊಡಗಿಕೊಳ್ಳುವ ಅವಕಾಶ ತಪ್ಪಿಸಿಕೊಳ್ಳಬೇಡಿ. ನಾವು ಹೊಚ್ಚಹೊಸ ಕೊಡುಗೆಗಳನ್ನು ಅನಾವರಣಗೊಳಿಸುತ್ತಿರುವ ಫನ್ ವರ್ಲ್ಡ್ ಸೇರಿಕೊಳ್ಳಿರಿ ಮತ್ತು ವಿನೋದ ಮತ್ತು ಉತ್ಸಾಹದ ಸ್ಫೂರ್ತಿಯನ್ನು ಸಂಭ್ರಮಿಸಿ.

ಫನ್ ವರ್ಲ್ಡ್, ಟಿ.ವಿ. ಟವರ್ ಎದುರು, ಪ್ಯಾಲೇಸ್ ಗ್ರೌಂಡ್ಸ್, ಜಯಮಹಲ್ ಮುಖ್ಯರಸ್ತೆ, ಜೆ.ಸಿ.ನಗರ, ಬೆಂಗಳೂರು

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

**ಮೇಷ:** ನೆಮ್ಮದಿ ಶಾಂತಿ, ಗೆಳೆಯರಿಂದ ಸಹಾಯ, ಮಾನಸಿಕ ಒತ್ತಡ, ಮಾತಿಗೆ ಮರುಳಾಗದಿರಿ.

**ವೃಷಭ:** ಬಹು ಸೌಖ್ಯ, ಮಾನಸಿಕ ಒತ್ತಡ, ಮುಗಿನ ಮೇಲೆ ಕೋಪ, ಚೋರ ಭಯ, ಅಕಾಲ ಭೋಜನ.

**ಮಿಥುನ:** ಆಕಸ್ಮಿಕ ಖರ್ಚು, ಪರರ ಮಾತಿಗೆ ಕಿವಿ ಕೊಡಬೇಡಿ, ಸ್ತ್ರೀಯರು ತಾಳ್ಮೆಯಿಂದ ಇರಿ.

**ಕಟಕ:** ನಾನು ವಿಚಾರಗಳಲ್ಲಿ ಆಸಕ್ತಿ, ನೀಚ ಜನರಿಂದ ದೂರವಿರಿ, ವಿದೇಶ ಪ್ರಯಾಣ, ಕುಟುಂಬ ಸೌಖ್ಯ.

**ಸಿಂಹ:** ಕೆಲಸ ಕಾರ್ಯಗಳು ವಿಳಂಬ, ವಿಪರೀತ ವ್ಯಸನ, ಅಧಿಕ ತಿರುಗಾಟ, ಸರ್ಕಾರಿ ಕೆಲಸದವರಿಗೆ ತೊಂದರೆ.

**ಕನ್ಯಾ:** ಸಣ್ಣ ಪುಟ್ಟ ವಿಷಯಗಳಿಂದ ಮನಸ್ತಾಪ, ಹಿತ ಶತ್ರು ಭಾದೆ, ಕಾರ್ಯ ಸಾಧನೆ, ವಿವಿದ ರೀತಿಯಿಂದ ಧನ ಲಾಭ.

**ತುಲಾ:** ಮಿತ್ರರಿಂದ ನಿಂದನೆ, ಅನರ್ಥ, ಮಕ್ಕಳಿಂದ ನೋವು, ರೋಗಭಾದೆ, ಯತ್ನ ಕಾರ್ಯ ಭಂಗ.

**ವೃಶ್ಚಿಕ:** ಎಷ್ಟೇ ಹಣ ಬಂದರೂ ಉಳಿಯುವುದಿಲ್ಲ, ಸ್ವಯಂಕೃತ ಅಪರಾಧ, ಕಾರ್ಯ ವಿಘಾತ, ವಾದ ವಿವಾದ.

**ಧನಸ್ಸು:** ಕೆಲಸದಲ್ಲಿ ಏಕಾಗ್ರತೆ, ಗುರಿಯನ್ನು ಸಾಧಿಸುವಿರಿ, ಸ್ತ್ರೀಯರಿಗೆ ಶುಭ, ಹಿರಿಯರಲ್ಲಿ ಭಕ್ತಿ.

**ಮಕರ:** ರಾಜಕೀಯ ಕ್ಷೇತ್ರದವರಿಗೆ ಶುಭ, ದೈವಿಕ ಚಿಂತನೆ, ಅನ್ಯರ ಮನಸ್ಸು ಗೆಲ್ಲುವಿರಿ, ರೋಗ ಭಾದೆ.

**ಕುಂಭ:** ಅತಿ ಬುದ್ಧಿವಂತಿಕೆ, ಅಮೂಲ್ಯ ವಸ್ತುಗಳ ಖರೀದಿ, ಹಣಕಾಸಿನ ಪರಿಸ್ಥಿತಿ ಉತ್ತಮ, ಪ್ರತಿಷ್ಠಿತ ಜನರ ಪರಿಚಯ.

**ಮೀನ:** ಬಾಕಿ ವಸೂಲಿ, ಉದ್ಯೋಗದಲ್ಲಿ ಅಭಿವೃದ್ಧಿ, ಧನ ಲಾಭ, ಅನಾವಶ್ಯಕ ವಿಷಯಗಳಿಂದ ದೂರವಿರಿ.

## ವಿಶ್ವ ಆಮೆ ದಿನ




ದೃಷ್ಟಾಂತಗಳು, ಕಥೆಗಳು ಮತ್ತು ಪಾಪ್ ಸಂಸ್ಕೃತಿಯಲ್ಲಿ ಆಮೆಗಳು ಮತ್ತು ಆಮೆಗಳು ಸಾಮಾನ್ಯ ದೃಶ್ಯಗಳಾಗಿವೆ ಮತ್ತು ಈ ಚೇತರಿಸಿಕೊಳ್ಳುವ ಪ್ರಾಣಿಗಳನ್ನು ಗೌರವಿಸಲು ನಾವು ಮೇ 23 ರಂದು ವಿಶ್ವ ಆಮೆ ದಿನವನ್ನು ಆಚರಿಸುತ್ತೇವೆ. ಆಮೆಗಳು ಮತ್ತು ಆಮೆಗಳು ಬುದ್ಧಿವಂತಿಕೆ ಮತ್ತು ಪರಿಶ್ರಮಕ್ಕೆ ಸಂಬಂಧಿಸಿವೆ. ಅವು ಪ್ರಪಂಚದಾದ್ಯಂತ ಅನೇಕ ಪರಿಸರದಲ್ಲಿ ಕಂಡುಬರುವ ಸರೀಸೃಪಗಳಾಗಿವೆ. ಈ ಜೀವಿಗಳು ತಮ್ಮ ಪರಿಸರ ವ್ಯವಸ್ಥೆಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅವರು ಇತರ ಜೀವಿಗಳು ವಾಸಿಸುವ ರಂಧ್ರಗಳನ್ನು ಅಗೆಯುತ್ತಾರೆ ಮತ್ತು ತೀರದಲ್ಲಿ ಕೊಚ್ಚಿಕೊಂಡು ಹೋಗುವ ಸತ್ತ ಮೀನುಗಳನ್ನು ತಿನ್ನುವ ಮೂಲಕ ನಮ್ಮ ಕಡಲತೀರಗಳನ್ನು ಸ್ವಚ್ಛವಾಗಿರಿಸುತ್ತಾರೆ. ಅವರು ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳುತ್ತಾರೆ ಮತ್ತು ಆದ್ದರಿಂದ, ಈ ಶಾಂತ ಪ್ರಾಣಿಗಳನ್ನು ಸಂರಕ್ಷಿಸುವುದು ಮುಖ್ಯವಾಗಿದೆ. ಆಮೆ ಮತ್ತು ಆಮೆಯ ನಡುವೆ ಗೊಂದಲಕ್ಕೊಳಗಾಗುವುದು ಸುಲಭ. ಇವೆರಡರ ನಡುವಿನ ಪ್ರಮುಖ ವ್ಯತ್ಯಾಸವೆಂದರೆ ಆಮೆಗಳು ಕೆಲವೊಮ್ಮೆ ನೀರಿನಲ್ಲಿ ವಾಸಿಸುತ್ತವೆ, ಆದರೆ ಆಮೆಗಳು ಭೂಮಿಯಲ್ಲಿ ಮಾತ್ರ ವಾಸಿಸುತ್ತವೆ. ಆಮೆಗಳು 40 ವರ್ಷ ವಯಸ್ಸಿನವರೆಗೆ ಬದುಕುತ್ತವೆ ಮತ್ತು ಸುವ್ಯವಸ್ಥಿತ ಮತ್ತು ಹೆಚ್ಚಾಗಿ ಚಪ್ಪಟೆ ಚಿಪ್ಪುಗಳನ್ನು ಹೊಂದಿರುತ್ತವೆ. ಮತ್ತೊಂದೆಡೆ, ಆಮೆಗಳು 300 ವರ್ಷಗಳವರೆಗೆ ಬದುಕಬಲ್ಲವು ಮತ್ತು ಅವು ದೊಡ್ಡದಾದ, ಹೆಚ್ಚು ಗುಮ್ಮಟಾಕಾರದ ಚಿಪ್ಪುಗಳನ್ನು ಹೊಂದಿರುತ್ತವೆ. ನೀವು ಹೆಚ್ಚಾಗಿ ಸಮುದ್ರದಲ್ಲಿ ಆಮೆಗಳನ್ನು ಕಾಣಬಹುದು, ಆದರೆ ಆಮೆಗಳು ದಟ್ಟವಾದ ಕಾಡುಗಳು ಮತ್ತು ಹುಲ್ಲುಗಾವಲುಗಳಲ್ಲಿ ವಾಸಿಸುತ್ತವೆ.

ಆಮೆಗಳು ಮತ್ತು ಆಮೆಗಳು ಎರಡು ವಿಭಿನ್ನ ಪ್ರಾಣಿಗಳು ಆದರೆ ಈ ದಿನವು ಎರಡನ್ನೂ ಆಚರಿಸಲು ಮತ್ತು ರಕ್ಷಿಸಲು ಮೀಸಲಾಗಿದೆ. 2002 ರಲ್ಲಿ ಅಮೇರಿಕನ್ ಆಮೆ ಪಾರುಗಾಣಿಕಾ ದಿನವನ್ನು ಮೊದಲ ಬಾರಿಗೆ ಆಚರಿಸಲಾಯಿತು ಮತ್ತು ಇದು ಮಾನವನ ಹಸ್ತಕ್ಷೇಪ ಮತ್ತು ಪರಿಸರ ಅಪಾಯಗಳಿಂದಾಗಿ ಈ ಪ್ರಾಣಿಗಳ ಸಂಕಟ ಮತ್ತು ಕ್ಷೀಣಿಸುತ್ತಿರುವ ಸಂಖ್ಯೆಯನ್ನು ಎತ್ತಿ ತೋರಿಸುತ್ತದೆ. ಶಾಲೆಗಳು, ಪಾರುಗಾಣಿಕಾ ಕೇಂದ್ರಗಳು ಮತ್ತು ಪ್ರಕೃತಿ ಪ್ರೇಮಿಗಳು ಈ ದಿನದಂದು ಈ ಜೀವಿಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಒಟ್ಟಾಗಿ ಸೇರುತ್ತಾರೆ ಮತ್ತು ಅವುಗಳನ್ನು ಉಳಿಸಲು ಸಹಾಯ ಮಾಡಲು ತಮ್ಮ ನಿಷ್ಠೆಯನ್ನು ಪ್ರತಿಜ್ಞೆ ಮಾಡುತ್ತಾರೆ. ಅಮೇರಿಕನ್ ಆಮೆ ಪಾರುಗಾಣಿಕಾವನ್ನು ಸುಸಾನ್ ಟೆಲ್ಲೆಮ್ ಮತ್ತು ಮಾರ್ಷಲ್ ಥಾಂಪ್ಸನ್ ರಚಿಸಿದ್ದಾರೆ. ಅವರು ಚಾರಿಟಿ ಡ್ರೈವ್ಗಳನ್ನು ಆಯೋಜಿಸುತ್ತಾರೆ ಮತ್ತು ಈ ಚಿಪ್ಪಿನ ಸರೀಸೃಪಗಳ ನಿರ್ಣಾಯಕ ಪರಿಸ್ಥಿತಿಗಳ ಬಗ್ಗೆ ಜಾಗೃತಿ ಮೂಡಿಸಲು ಸಕ್ರಿಯವಾಗಿ ಕೆಲಸ ಮಾಡುತ್ತಾರೆ. ಸರೀಸೃಪಗಳು ಸೇರಿದಂತೆ ಎಲ್ಲಾ ಪ್ರಾಣಿಗಳ ಮಾನವೀಯ ಚಿಕಿತ್ಸೆಗಾಗಿ ದಂಪತಿಗಳು ಹೆಸರುವಾಸಿಯಾಗಿದ್ದಾರೆ. 1990 ರಲ್ಲಿ ಸ್ಥಾಪನೆಯಾದಾಗಿನಿಂದ, ಅಮೇರಿಕನ್ ಆಮೆ ಪಾರುಗಾಣಿಕಾ ಸಂಸ್ಥೆಯು 4,000 ಕ್ಕೂ ಹೆಚ್ಚು ಆಮೆಗಳು ಮತ್ತು ಆಮೆಗಳಿಗೆ ಮನೆಗಳನ್ನು ನೀಡಿದೆ.

# ಬ್ರಿಟನ್ ಸಾರ್ವತ್ರಿಕ ಚುನಾವಣೆ ದಿನಾಂಕ ಘೋಷಿಸಿದ ಬ್ರಿಟನ್ ಪ್ರಧಾನಿ



**ಬ್ರಿಟನ್:** ಬ್ರಿಟಿಷ್ ಪ್ರಧಾನಿ ರಿಷಿ ಸುನಕ್ ಬುಧವಾರ ರಾಷ್ಟ್ರೀಯ ಚುನಾವಣೆಗೆ ಕರೆ ನೀಡಿದ್ದು, ಜುಲೈ 4 ರಂದು ತಮ್ಮ ಆಡಳಿತಾರೂಢ ಕನ್ಸರ್ವೇಟಿವ್ಗಳು 14 ವರ್ಷಗಳ ಅಧಿಕಾರದ ನಂತರ ಪ್ರತಿಪಕ್ಷ ಲೇಬರ್ ಪಕ್ಷದ ವಿರುದ್ಧ ಸೋಲುವ ನಿರೀಕ್ಷೆಯಿದೆ. ಹೊಸ ಮತದಾನದ ಸಮಯದ ಬಗ್ಗೆ ತಿಂಗಳುಗಳ ಊಹಾಪೋಹಗಳಿಗೆ ತೆರೆ ಎಳೆದ 44 ವರ್ಷದ ಸುನಕ್, ತಮ್ಮ 10 ಡೌನಿಂಗ್ ಸ್ಟ್ರೀಟ್ ನಿವಾಸದ ಹೊರಗೆ ಕೆಲವರು ನಿರೀಕ್ಷಿಸಿದ್ದಕ್ಕಿಂತ ಮುಂಚಿತವಾಗಿ ಚುನಾವಣೆಗೆ ಕರೆ ನೀಡುತ್ತಿರುವುದಾಗಿ ಘೋಷಿಸಿದರು. ಚುನಾವಣೆಯಲ್ಲಿ ಸುನಕ್ ಅವರು ಲೇಬರ್ ಪಕ್ಷಕ್ಕಿಂತ ಬಹಳ ಹಿಂದೆ ಬಿದ್ದಿರುವುದು ಮಾತ್ರವಲ್ಲ, ಅವರ ಪಕ್ಷದ ಕೆಲವರಿಂದ ಪ್ರತ್ಯೇಕವಾಗಿದ್ದಾರೆ ಮತ್ತು ಕೊಳಕು ಪ್ರಚಾರದ ಮೂಲಕ ಅವರನ್ನು ಮುನ್ನಡೆಸಲು ಸಲಹೆಗಾರರ ಸಣ್ಣ ತಂಡದ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ.

ಆದರೆ ಹಣದುಬ್ಬರ ಕುಸಿತ ಮತ್ತು ಸುಮಾರು ಮೂರು ವರ್ಷಗಳಲ್ಲಿ ಆರ್ಥಿಕತೆಯು ಅತ್ಯಂತ ವೇಗವಾಗಿ ಬೆಳೆಯುತ್ತಿರುವಂತಹ ಕೆಲವು ಆರ್ಥಿಕ ಲಾಭಗಳೊಂದಿಗೆ, ಈಗ ಅಪಾಯವನ್ನು ತೆಗೆದುಕೊಳ್ಳುವ ಮತ್ತು ಹೊಸ ಅವಧಿಗೆ ತನ್ನ ಕಾರ್ಯಸೂಚಿಯನ್ನು ಮತದಾರರಿಗೆ ಔಪಚಾರಿಕವಾಗಿ ಪ್ರಸ್ತುತಪಡಿಸುವ ಸಮಯ ಎಂದು ಅವರು ನಿರ್ಧರಿಸಿದ್ದಾರೆ ಎಂದು ತೋರುತ್ತದೆ.

# ವಿಮಾನ ಅವಘಡದ: ಕ್ಷಮೆಯಾಚಿಸಿದ ಸಿಂಗಾಪುರ ಏರ್ ಲೈನ್ಸ್CEO



**ಲಂಡನ್:** ಲಂಡನ್‌ನಿಂದ ಸಿಂಗಾಪುರಕ್ಕೆ ತೆರಳುತ್ತಿದ್ದ ವಿಮಾನದಲ್ಲಿ ತೀವ್ರ ಪ್ರಕ್ಷುಬ್ಧತೆಯಿಂದಾಗಿ ಒಬ್ಬ ಪ್ರಯಾಣಿಕ ಸಾವನ್ನಪ್ಪಿದ ಮತ್ತು ಸುಮಾರು 70 ಜನರು ಗಾಯಗೊಂಡ ನಂತರ ಸಿಂಗಾಪುರ್ ಏರ್ಲೈನ್ಸ್ ಸಿಇಒ ಬುಧವಾರ ಸಾರ್ವಜನಿಕ ಕ್ಷಮೆಯಾಚಿಸಿದ್ದಾರೆ.

ವೀಡಿಯೊ ಸಂದೇಶದಲ್ಲಿ, ಗೋಹ್ ಚೂನ್ ಫೋಂಗ್ ಅವರು ಮಂಗಳವಾರ ಎಸ್ಕ್ಯೂ 321 ವಿಮಾನದಲ್ಲಿದ್ದ ಪ್ರತಿಯೊಬ್ಬರೂ ಅನುಭವಿಸಿದ ಆಘಾತಕಾರಿ ಅನುಭವಕ್ಕಾಗಿ ನಾವು ತುಂಬಾ ವಿಷಾದಿಸುತ್ತೇವೆ ಎಂದು ಹೇಳಿದರು.

ಲಂಡನ್ನಿಂದ ಸಿಂಗಾಪುರಕ್ಕೆ ತೆರಳುತ್ತಿದ್ದ ಸಿಂಗಾಪುರ್ ಏರ್ಲೈನ್ಸ್ ವಿಮಾನವು 37,000 ಅಡಿ ಎತ್ತರದಲ್ಲಿ ಹಠಾತ್ ತೀವ್ರ ಪ್ರಕ್ಷುಬ್ಧತೆಯನ್ನು ಎದುರಿಸಿತು. ಬೋಯಿಂಗ್ 777-300ಇಆರ್ ವಿಮಾನದಲ್ಲಿ 211 ಪ್ರಯಾಣಿಕರು ಮತ್ತು 18 ಸಿಬ್ಬಂದಿ ಇದ್ದರು. ಗಾಯಗೊಂಡವರಲ್ಲಿ 18 ಮಂದಿ ಆಸ್ಪತ್ರೆಗೆ ದಾಖಲಾಗಿದ್ದು, 12 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದ್ದರೆ, ಸಮಿತಿವೇಜ್ ಆಸ್ಪತ್ರೆ 71 ಪ್ರಯಾಣಿಕರಿಗೆ ಚಿಕಿತ್ಸೆ ನೀಡುತ್ತಿದೆ.

ಸಿಂಗಾಪುರ್ ಏರ್ಲೈನ್ಸ್ ಪರವಾಗಿ, ಮೃತರ ಕುಟುಂಬ ಮತ್ತು ಪ್ರೀತಿಪಾತ್ರರಿಗೆ ನನ್ನ ಆಳವಾದ ಸಂತಾಪವನ್ನು ವ್ಯಕ್ತಪಡಿಸಲು ಬಯಸುತ್ತೇನೆ. ಎಸ್ಕ್ಯೂ 321 ವಿಮಾನದಲ್ಲಿದ್ದ ಪ್ರತಿಯೊಬ್ಬರೂ ಅನುಭವಿಸಿದ ಆಘಾತಕಾರಿ ಅನುಭವಕ್ಕಾಗಿ ನಾವು ತುಂಬಾ ವಿಷಾದಿಸುತ್ತೇವೆ ಎಂದು ಫಾಂಗ್ ಹೇಳಿದರು.

# ಜರ್ಮನ್ ಲೇಖಕಿ ಜೆನ್ನಿ ಎರ್ಪೆನ್ಬೆಕ್‌ಗೆ ಬೂಕರ್ ಪ್ರಶಸ್ತಿ




**ಲಂಡನ್:** ಜರ್ಮನ್ ಲೇಖಕಿ ಜೆನ್ನಿ ಎರ್ಪೆನ್ಬೆಕ್ ಹಾಗೂ ಅನುವಾದಕ ಮೈಕೆಲ್ ಹೊಫ್ಮನ್ ಅವರಿಗೆ 2024ನೇ ಸಾಲಿನ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ದೊರೆತಿದೆ. ಪೂರ್ವ ಜರ್ಮನಿಯ ಅಂತಿಮ ವರ್ಷಗಳ ಹಿನ್ನೆಲೆಯಿರುವ ಪ್ರೇಮಕಥನ 'ಕೈರೋಸ್ 'ಗಾಗಿ ಇವರಿಬ್ಬರು ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. ಈಗ ಅಸ್ತಿತ್ವದಲ್ಲಿ ಇಲ್ಲದಿರುವ ಕಮ್ಯೂನಿಸ್ಟ್ ರಾಷ್ಟ್ರವಾದ ಪೂರ್ವ ಜರ್ಮನಿಯ ಜನಜೀವನ ತಿಳಿದುಕೊಳ್ಳಲು ಈ ಕೃತಿಯು ಓದುಗರಿಗೆ ನೆರವಾಗಲಿದೆ ಎಂದು ಎರ್ಪೆನ್ಬೆಕ್ ತಿಳಿಸಿದ್ದಾರೆ. ಬೂಕರ್ ಪ್ರಶಸ್ತಿ ಸ್ಪರ್ಧೆಗೆ 149 ಕೃತಿಗಳು ಸಲ್ಲಿಕೆಯಾಗಿದ್ದು, ಅವುಗಳಲ್ಲಿ ಕೈರೋಸ್ ಸೇರಿದಂತೆ ಆರು ಕೃತಿಗಳು ಅಂತಿಮ ಹಂತವನ್ನು ಪ್ರವೇಶಿಸಿದ್ದವು. ಕೈರೋಸ್ ಕಾದಂಬರಿಯು ಅವುಗಳೆಲ್ಲವನ್ನೂ ಹಿಂದಿಕ್ಕಿ ಬೂಕರ್ ಪುರಸ್ಕಾರವನ್ನು ಗೆದ್ದುಕೊಂಡಿದೆ ಜಗತ್ತಿನ ಯಾವುದೇ ಭಾಷೆಯಿಂದ ಇಂಗ್ಲಿಷ್ಗೆ ಭಾಷಾಂತರಿಸಲ್ಪಟ್ಟ ಹಾಗೂ ಬ್ರಿಟನ್ ಅಥವಾ ಐಯರ್ಲ್ಯಾಂಡ್ನಲ್ಲಿ ಪ್ರಕಾಶನಗೊಂಡ ಸಾಹಿತ್ಯಕ್ಕೆ ಬೂಕರ್ ಪ್ರಶಸ್ತಿಯನ್ನು ನೀಡಲಾಗುತ್ತದೆ. ಬೂಕರ್ ಪ್ರಶಸ್ತಿಯು 50 ಸಾವಿರ ಪೌಂಡ್ (ಸುಮಾರು 64ಸಾವಿರ ಡಾಲರ್ ) ಒಳಗೊಂಡಿದ್ದು, ಅದನ್ನು ಲೇಖಕ ಹಾಗೂ ಭಾಷಾಂತರಕಾರರ ನಡುವೆ ಹಂಚಿಕೊಳ್ಳಲಾಗುತ್ತದೆ.

# ದಕ್ಷಿಣ ಬ್ರೆಜಿಲ್‌ನಲ್ಲಿ ಮಳೆ



**ದಕ್ಷಿಣ ಬ್ರೆಜಿಲ್:** ಹವಾಮಾನ ಪೀಡಿತ ರಿಯೊಗ್ರಾಂಡೆ ಡೊಸುಲ್ರಾಜ್ಯದಲ್ಲಿ ಕಳೆದ ಕೆಲವು ಗಂಟೆಗಳಲ್ಲಿ ಇನ್ನೂ ನಾಲ್ಕು ಶವಗಳು ಪತ್ತೆಯಾಗಿದ್ದು, ಈ ಮೂಲಕ ಸಾವಿನಸಂಖ್ಯೆ 161ಕ್ಕೆ ಏರಿದೆ ಎಂದು ನಾಗರಿಕ ರಕ್ಷಣಾ ಸಂಸ್ಥೆ ತಿಳಿಸಿದೆ.

ಏಪ್ರಿಲ್ 29 ರಿಂದ ದಾಖಲೆಯ ಮಳೆ ರಾಜ್ಯವನ್ನು ನಾಶಪಡಿಸಿದೆ, ಇದು 464 ನಗರಗಳಲ್ಲಿ ಮಾರಣಾಂತಿಕ ಪ್ರವಾಹ ಮತ್ತು ಭೂಕುಸಿತಕ್ಕೆ ಕಾರಣವಾಗಿದೆ ಮತ್ತು ರಾಜಧಾನಿ ಪೋರ್ಟೊ ಅಲೆಗ್ರೆ ಸೇರಿದಂತೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 2.2 ದಶಲಕ್ಷಕ್ಕೂ ಹೆಚ್ಚು ನಿವಾಸಿಗಳ ಮೇಲೆ ಪರಿಣಾಮ ಬೀರಿದೆ ಎಂದು ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಪೋರ್ಟೊ ಅಲೆಗ್ರೆಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಅನಿರ್ದಿಷ್ಟವಾಗಿ ಮುಚ್ಚಲಾಯಿತು, ಆದ್ದರಿಂದ ಫೆಡರಲ್ ಸರ್ಕಾರವು ಕ್ಯಾನೋವಾಸ್ ವಾಯುಪಡೆಯ ವಾಯುನೆಲೆಯನ್ನು ವಾಣಿಜ್ಯ ವಿಮಾನಗಳಿಗೆ ಬಳಸಲು ಅಧಿಕಾರ ನೀಡಿತು.

85 ಜನರು ಕಾಣೆಯಾಗಿರುವುದರಿಂದ ಮತ್ತು 806 ಜನರು ಗಾಯಗೊಂಡಿರುವುದರಿಂದ ಮುಂದಿನ ದಿನಗಳಲ್ಲಿ ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಸಂಸ್ಥೆ ತಿಳಿಸಿದೆ.

ಅರ್ಜೆಂಟೀನಾ ಮತ್ತು ಉರುಗ್ವೆ ಗಡಿಯಲ್ಲಿರುವ ಕೃಷಿ ಶಕ್ತಿ ಕೇಂದ್ರವಾದ ಬ್ರೆಜಿಲ್ನ ದಕ್ಷಿಣದ ರಾಜ್ಯದಾದ್ಯಂತ ಭದ್ರತಾ ಪಡೆಗಳು ಮತ್ತು ಪ್ರಥಮ ಪ್ರತಿಕ್ರಿಯೆದಾರರು ಸುಮಾರು 82,666 ಬದುಕುಳಿದವರನ್ನು ರಕ್ಷಿಸಲಾಗಿದೆ.

# ರಯಿಸೀಗೆ ಅಂತಿಮ ವಿದಾಯ



**ಟೆಹರಾನ್:** ರವಿವಾರ ನಡೆದ ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟ ಇರಾನ್ ಅಧ್ಯಕ್ಷ ಇಬ್ರಾಹೀಂ ರಯಿಸೀ ಹಾಗೂ ವಿದೇಶಾಂಗ ಸಚಿವ ಹುಸೈನ್ ಅಮಿರ್ ಅಬ್ದುಲಹಿಯಾನ್ ಹಾಗೂ ಇತರ ಆರು ಮಂದಿಯ ಅಂತ್ಯಕ್ರಿಯೆಯ ಪ್ರಯುಕ್ತ ಆಯೋಜಿಸಲಾದ ಪ್ರಾರ್ಥನಾ ಸಭೆಯ ನೇತೃತ್ವವನ್ನು ಇರಾನ್ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಾಮಿನೈ ವಹಿಸಿದ್ದರು.

ಟೆಹರಾನ್ ವಿಶ್ವವಿದ್ಯಾನಿಲಯದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು. ಮೃತರನ್ನು ಇರಿಸಲಾಗಿದ್ದ ಶವಪೆಟ್ಟಿಗೆಗಳ ಮೇಲೆ ಇರಾನ್ನ ರಾಷ್ಟ್ರಧ್ವಜಗಳನ್ನು ಹೊದಿಸಲಾಗಿತ್ತು.

ಇರಾನ್ ಅಧ್ಯಕ್ಷರ ಅಂತಿಮ ಯಾತ್ರೆಯ ವಿರುದ್ಧ ಪ್ರತಿಭಟನೆಗಳನ್ನು ನಡೆಸುವುದು ಹಾಗೂ ಆನ್ಲೈನ್ನಲ್ಲಿ ಅವಹೇಳನಕಾರಿ ಪೋಸ್ಟ್‌ಗಳನ್ನು ಪ್ರಕಟಿಸುವುದರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಸಾಮೂಹಿಕ ಪ್ರಾರ್ಥನೆಯ ಸಂದರ್ಭ ಇರಾನ್ನ ಹಂಗಾಮಿ ಅಧ್ಯಕ್ಷ ಮೊಹಮ್ಮದ್ ಮುಖ್ಬೀರ, ಅಯಾತೊಲಾ ಖಾಮಿನೈ ಅವರ ಬಳಿ ಶೋಕತಪ್ತರಾಗಿ ನಿಂತಿರುವುದು ಕಂಡುಬಂದಿತು.

ಆನಂತರ ಮೃತದೇಹಗಳನ್ನು ಇರಿಸಲಾದ ಶವಪೆಟ್ಟಿಗೆಗಳನ್ನು ಮೆರವಣಿಗೆಯ ಮೂಲಕ ರಯಿಸೀ ಅವರು ಈ ಮೊದಲು ಭಾಷಣಗಳನ್ನು ಮಾಡಿದ್ದ ಅಝಾದಿ ಚೌಕಕ್ಕೆ ತರಲಾಯಿತು. ಇರಾನ್ನ ಅರೆಸೈನಿಕ ಪಡೆಯಾದ ರೆವೆಲ್ಯೂಶನರಿ ಗಾರ್ಡ್ಸ್ ಉನ್ನತ ನಾಯಕರು ಕೂಡಾ ಸಭೆಯಲ್ಲಿ ಉಪಸ್ಥಿತರಿದ್ದರು.

# ಇಸ್ರೇಲ್‌ಗೆ ಎದುರಾಯ್ತು ಆಘಾತ

**ಇಸ್ರೇಲ್:** ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ನಡುವೆ ಕಾಳಗ ನಡೆಯುತ್ತಿರುವ ಸಮಯದಲ್ಲಿ, ಇಸ್ರೇಲ್ಗೆ ಶಾಕ್ ಮೇಲೆ ಶಾಕ್ ಸಿಗುತ್ತಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಯುದ್ಧ ನಿಲ್ಲಿಸುವಂತೆ ಇಸ್ರೇಲ್ ವಿರುದ್ಧ ಒತ್ತಡ ಹೆಚ್ಚಾದ ಸಮಯದಲ್ಲೇ, ಮತ್ತೊಂದು ಆಘಾತ ಕೂಡ ಎದುರಾಗಿದೆ. ಅರೆ ಇಸ್ರೇಲ್ಗೆ ಎದುರಾದ ಆ ಆಘಾತ ಏನು ಹಾಗಾದ್ರೆ, ಯುದ್ಧ ನಿಲ್ಲುತ್ತಾ ಮುಂದೆ ಓದಿ. ಅಂದಹಾಗೆ ಪ್ಯಾಲೆಸ್ತೀನ್ ದೇಶಕ್ಕೆ ಮಾನ್ಯತೆ ನೀಡುವುದಾಗಿ ನಾರ್ವೆ, ಸ್ಪೇನ್ ಮತ್ತು ಐರ್ಲೆಂಡ್ ಹೇಳಿವೆ. ಈ ಐತಿಹಾಸಿಕ ಘೋಷಣೆ ಒಂದು ಕಡೆ ಪ್ಯಾಲೆಸ್ತೀನ್ ಜನರಿಗೆ ಖುಷಿ ಕೊಟ್ಟಿದ್ದರೆ, ಮತ್ತೊಂದು ಕಡೆ ಇಸ್ರೇಲ್ಗೆ ಭಾರಿ ದೊಡ್ಡ ಆಘಾತ ನೀಡಿದೆ. ಯಾಕಂದ್ರೆ, ಹಮಾಸ್ ವಿರುದ್ಧ ಯುದ್ಧ ಮಾಡುವ ನೆಪದಲ್ಲಿ ಇಸ್ರೇಲ್ ಸೇನೆ ಪ್ಯಾಲೆಸ್ತೀನ್ನ ಅಮಾಯಕರ ವಿರುದ್ಧ ಕೂಡ ಹಿಂಸೆಗೆ ಇಳಿದಿದೆ ಎಂಬ ಆರೋಪ ಕೇಳಿಬರುತ್ತಿದೆ. ಇದರ ಜೊತೆಗೆ ಅಂತಾರಾಷ್ಟ್ರೀಯವಾಗಿ ಕೂಡ ಪ್ಯಾಲೆಸ್ತೀನ್ಗೆ ಈಗ ಮತ್ತಷ್ಟು ಬಲ ಸಿಕ್ಕಿದೆ. ಹಾಗಾದರೆ ಈ ನಿರ್ಣಯದ ಬಗ್ಗೆ ಇಸ್ರೇಲ್ ಕೋಪದಲ್ಲಿ ಕೈಗೊಂಡ ನಿರ್ಧಾರ ಎಂತಹದ್ದು ಬನ್ನಿ ತಿಳಿಯೋಣ. ನಾರ್ವೆ, ಸ್ಪೇನ್ ಮತ್ತು ಐರ್ಲೆಂಡ್ ಇದೀಗ ಪ್ಯಾಲೆಸ್ತೀನ್ ದೇಶಕ್ಕೆ ಮಾನ್ಯತೆ ನೀಡುವ ಕುರಿತು ಕೈಗೊಂಡಿರುವ ನಿರ್ಣಯಕ್ಕೆ ಇಸ್ರೇಲ್ ಕೆಂಡ ಕಾರಿದೆ. ಈ ಘೋಷಣೆಯನ್ನು ಇದೀಗ ಇಸ್ರೇಲ್ ಖಂಡಿಸಿದೆ. ನಾರ್ವೆ ಮತ್ತು ಐರ್ಲೆಂಡ್ನಲ್ಲಿ ಇರುವ ತನ್ನ ರಾಯಭಾರಿಗಳು ವಾಪಸ್ ಬರಬೇಕು ಎಂದು ಕೂಡ ಇಸ್ರೇಲ್ ಸೂಚಿಸಿದೆ.



# ಬಾಂಗ್ಲಾದೇಶ ಸಂಸದ ಅನ್ವರುಲ್ ಶವವಾಗಿ ಪತ್ತೆ

**ಬಾಂಗ್ಲಾದೇಶ:** ಕಳೆದ ಹತ್ತು ದಿನಗಳ ಹಿಂದೆ ಚಿಕಿತ್ಸೆಗೆಂದು ಭಾರತಕ್ಕೆ ಬಂದಿದ್ದ ಬಾಂಗ್ಲಾದೇಶದ ಸಂಸದ ಅನ್ವರುಲ್ ಅಜೀಂ ಅನಾರ್ ಕೋಲ್ಕತ್ತಾದ ನ್ಯೂಟೌನ್ ಪ್ರದೇಶದಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಅನಾರ್ ಕೆಲವು ದಿನಗಳಿಂದ ನಾಪತ್ತೆಯಾಗಿದ್ದರು, ಅವರ ಪತ್ತೆಗೆ ಪೊಲೀಸರು ಶೋಧ ಕಾರ್ಯ ಆರಂಭಿಸಿದ್ದರು. ಕೋಲ್ಕತ್ತಾದಲ್ಲಿರುವ ಬಾಂಗ್ಲಾದೇಶದ ಡೆಪ್ಯುಟಿ ಹೈಕಮಿಷನ್ನ ಹಿರಿಯ ಅಧಿಕಾರಿಗಳ ಪ್ರಕಾರ, ಹಸೀನಾ ಅವರ ಪಕ್ಷದಿಂದ ಮೂರು ಬಾರಿ ಸಂಸದರಾಗಿದ್ದ ಅನಾರ್ ಕೋಲ್ಕತ್ತಾಗೆ ಆಗಮಿಸಿದ ಒಂದು ದಿನದ ನಂತರ ನಾಪತ್ತೆಯಾಗಿದ್ದರು. ವೈದ್ಯಕೀಯ ಚಿಕಿತ್ಸೆಗೆಂದು ಕೋಲ್ಕತ್ತಾಗೆ ಬಂದಿದ್ದ ಅನಾರ್ ಬಾರಾನಗರದಲ್ಲಿರುವ ಸ್ನೇಹಿತ ಗೋಪಾಲ್ ಬಿಸ್ವಾಸ್ ಅವರ ಮನೆಯಲ್ಲಿ ಉಳಿದುಕೊಂಡಿದ್ದರು. ಮೇ 13ರಂದು ಯಾರನ್ನೋ ಭೇಟಿಯಾಗಲು ಹೋಗುತ್ತಿದ್ದೇನೆಂದು ಹೊರಟವರು ಮತ್ತೆ ಮನೆಗೆ ಹಿಂದಿರುಗಲಿಲ್ಲ.ಸಂಸದರು ಚಿನ್ನದ ಆಮದು ಹಾಗೂ ರಫ್ತು ವ್ಯವಹಾರವನ್ನು ಹೊಂದಿದ್ದರು, ಹತ್ಯೆಯಲ್ಲಿ ಅಂತಾರಾಷ್ಟ್ರೀಯ ಕ್ರಿಮಿನಲ್ಗಳ ಕೈವಾಡವಿದೆ ಎನ್ನುವ ಶಂಕೆ ವ್ಯಕ್ತವಾಗಿದೆ. ಪ್ರಾಥಮಿಕ ತನಿಖೆಯಲ್ಲಿ ನಂತರ ಪೊಲೀಸರು ಮಹಿಳೆ ಸೇರಿದಂತೆ ನಾಲ್ವರು ಬಾಂಗ್ಲಾದೇಶಿ ಪ್ರಜೆಗಳನ್ನು ಆರೋಪಿಗಳು ಎಂದು ಗುರುತಿಸಿದ್ದು, ಅವರಲ್ಲಿ ಒಬ್ಬರನ್ನು ಬಂಧಿಸಲಾಗಿದೆ.

# 3 ವರ್ಷದ ಮಗುವಿನ ವಿರುದ್ಧ ವಿದ್ಯುತ್ ಕಳ್ಳತನ ಕೇಸ್!



**ಇಸ್ಲಾಮಾಬಾದ್:** ಪಾಕಿಸ್ತಾನದಲ್ಲಿ ಆಘಾತಕಾರಿ ಪ್ರಕರಣವೊಂದು ಬೆಳಕಿಗೆ ಬಂದಿದೆ. ಮೂರು ವರ್ಷದ ಮಗುವಿನ ವಿರುದ್ಧ ವಿದ್ಯುತ್ ಕಳ್ಳತನ ಪ್ರಕರಣವನ್ನು ದಾಖಲಿಸಿರುವ ಘಟನೆ ಖೈಬರ್ ಪಖ್ತುಂಖ್ವಾ ಪ್ರಾಂತ್ಯ ನಡೆದಿದೆ.

ಪೇಶಾವರ ಎಲೆಕ್ಟ್ರಿಕ್ ಸಪ್ಲೈ ಕಂಪನಿ (ಪೆಸ್ಕೋ) ಮತ್ತು ನೀರು ಹಾಗೂ ವಿದ್ಯುತ್ ಅಭಿವೃದ್ಧಿ ಪ್ರಾಧಿಕಾರ (ವಾಪ್ಡಾ) ದೂರುಗಳ ಮೇರೆಗೆ ವಿದ್ಯುತ್ ಕಳ್ಳತನ ಆರೋಪ ಮೇಲೆ ಅಪ್ರಾಪ್ತ ಬಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮಗುವನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಕೋರ್ಟ್ನಲ್ಲಿ ಅಫಿಡವಿಟ್ ಸಲ್ಲಿಸಿದ ನಂತರ ನ್ಯಾಯಾಧೀಶರು ಪ್ರಕರಣವನ್ನು ವಜಾಗೊಳಿಸಿದ್ದಾರೆ. ಈ ಪ್ರಕರಣದ ಮೂಲಕ ಅಪಾದಿತ ವಿದ್ಯುತ್ ಕಳ್ಳತನದಿಂದಾಗಿ ರಾಷ್ಟ್ರೀಯ ಖಜಾನೆಗೆ 438 ಶತಕೋಟಿ (ಪಾಕ್ ರೂಪಾಯಿ) ನಷ್ಟ ಅನುಭವಿಸಿರುವ ಆಘಾತಕಾರಿ ಸಂಗತಿ ಬಹಿರಂಗವಾಗಿದೆ. ಇನ್ನೂ, ಸರ್ಕಾರಿ ಇಲಾಖೆಗಳು ಸರಿಯಾಗಿ ಬಿಲ್ ಪಾವತಿ ಮಾಡುತ್ತಿಲ್ಲ ಎಂಬ ಆರೋಪಗಳು ಕೇಳಿಬಂದಿವೆ. 2022-23 ಆರ್ಥಿಕ ವರ್ಷದಲ್ಲಿ ಪ್ರಾಂತೀಯ ಇಲಾಖೆಗಳು 1.91 ಶತಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯದ ವಿದ್ಯುತ್ ಬಳಕೆ ಮಾಡಿವೆ. ಇದರಿಂದ ಕೇವಲ 76 ಶತಕೋಟಿ ಮಾತ್ರ ಪಾವತಿಯಾಗಿದೆ ಎಂದು ಇಂಧನ ಇಲಾಖೆ ತಿಳಿಸಿದೆ.

# ವಿಶ್ವದ ಮೊದಲ 'ತಲೆ ಕಸಿ ವ್ಯವಸ್ಥೆ'ಯ ಗ್ರಾಫಿಕ್ ವಿಡಿಯೋ ವೈರಲ್

**ಯುಕೆ:** ವಿಸ್ಮಯ ಮತ್ತು ವಿವಾದ ಎರಡನ್ನೂ ಹುಟ್ಟುಹಾಕಿದ ಅದ್ಭುತ ಬಹಿರಂಗಪಡಿಸುವಿಕೆಯಲ್ಲಿ, ಯುನೈಟೆಡ್ ಸ್ಟೇಟ್ಸ್ ಮೂಲದ ಪ್ರವರ್ತಕ ನರವಿಜ್ಞಾನ ಮತ್ತು ಬಯೋಮೆಡಿಕಲ್



ಎಂಜಿನಿಯರಿಂಗ್ ಸ್ಟಾರ್ಟ್‌ಅಪ್ ಬ್ರೈನ್ಬ್ರಿಡ್ಜ್ ವಿಶ್ವದ ಮೊದಲ ತಲೆ ಕಸಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ತನ್ನ ಧೈರ್ಯಶಾಲಿ ಧ್ಯೇಯವನ್ನು ಅನಾವರಣಗೊಳಿಸಿದೆ. ಈ ಆಘಾತಕಾರಿ ಪ್ರಕಟಣೆಯು ಸಿಮ್ಯುಲೇಟೆಡ್ ಕಾರ್ಯವಿಧಾನವನ್ನು ಚಿತ್ರಿಸುವ ಬೆನ್ನುಮೂಳೆಯನ್ನು ನಡುಗಿಸುವ ವೀಡಿಯೊದೊಂದಿಗೆ ಬರುತ್ತದೆ.

ಇದರಲ್ಲಿ ಎರಡು ಸ್ವಾಯತ್ತ ಶಸ್ತ್ರಚಿಕಿತ್ಸಾ ರೋಬೋಟ್ಗಳು ಮಾನವ ತಲೆಯನ್ನು ಒಂದು ರೊಬೊಟಿಕ್ ದೇಹದಿಂದ ಇನ್ನೊಂದಕ್ಕೆ ತಡೆರಹಿತವಾಗಿ ವರ್ಗಾಯಿಸುತ್ತವೆ. ಸೈ-ಫಿಕ್ಷನ್ ಥ್ರಿಲ್ಲರ್ಸ್ ದೃಶ್ಯಗಳನ್ನು ನೆನಪಿಸುವಾಗ, ಬ್ರೈನ್ಬ್ರಿಡ್ಜ್ ತನ್ನ ಪ್ರಯತ್ನವು ವೈಜ್ಞಾನಿಕ ಅನ್ವೇಷಣೆಯಲ್ಲಿ ದೃಢವಾಗಿ ನೆಲೆಗೊಂಡಿದೆ ಎಂದು ಪ್ರತಿಪಾದಿಸುತ್ತದೆ. ಇದು ಹಂತ -4 ಕ್ಯಾನ್ಸರ್, ಪಾರ್ಶ್ವವಾಯು ಮತ್ತು ಅಲ್ಝೈಮರ್ ಮತ್ತು ಪಾರ್ಕಿನ್ಸನ್ನಂತಹ ದುರ್ಬಲಗೊಳಿಸುವ ನ್ಯೂರೋಡಿಜೆನರೇಟಿವ್ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಭರವಸೆಯ ಕಿರಣವನ್ನು ನೀಡುವ ಗುರಿಯನ್ನು ಹೊಂದಿದೆ.

# ಸೌಂದರ್ಯ ಸ್ಪರ್ಧೆಯ ವಿಜೇತರಿಬ್ಬರೂ ರಾಜೀನಾಮೆ




**ಅಮೇರಿಕಾ:** ಯುಎಸ್‌ಎಯ ಪ್ರಸಿದ್ಧ ಸೌಂದರ್ಯ ಸ್ಪರ್ಧೆ ವಿಜೇತರಿಬ್ಬರು ರಾಜೀನಾಮೆ ನೀಡಿದ್ದು ಕಾರಣ ನಿಗೂಢವಾಗಿದೆ.ಇತ್ತೀಚೆಗೆ ಮಿಸ್ USA 2023 ಪ್ರಶಸ್ತಿಯನ್ನು ಪಡೆದ ಸ್ಪರ್ಧಿ ನೋಲಿಯಾ ವೊಯ್ಗ್ಟ್ ರಾಜೀನಾಮೆ ನೀಡಿದ ಬೆನ್ನಲ್ಲೇ ಮಿಸ್ ಟೀನ್ ಯುಎಸ್‌ಎ ವಿಜೇತೆಯಾಗಿದ್ದ ಉಮಾಸೋಫಿಯಾ ಶ್ರೀವಾಸ್ತವ ಕೂಡ ರಾಜೀನಾಮೆ ನೀಡಿದ್ದಾರೆ.ಈ ಬಗ್ಗೆ ಅವರು ಇನ್ಸ್ಟಾಗ್ರಾಂನಲ್ಲಿ ದೊಡ್ಡ ಪೋಸ್ಟ್ ಒಂದನ್ನು ಹಾಕಿದ್ದಾರೆ.ನೋಲಿಯಾ ಮೇ 9ರಂದು ಬರೆದ ಪತ್ರದ ಪ್ರಕಾರ, ಈ ಸ್ಪರ್ಧೆಯ ಸಿಇಒ ಲೈಂಗಿಕ ಕಿರುಕುಳದ ಘಟನೆಯನ್ನು ತಪ್ಪಾಗಿ ನಿರ್ವಹಿಸಿದ್ದಾರೆ. ಸ್ಪರ್ಧೆಯ ಸ್ಥಳದಲ್ಲಿ ಉತ್ತಮ ಕೆಲಸದ ವಾತಾವರಣವನ್ನು ಸೃಷ್ಟಿಸಿಲ್ಲ ಎಂದು ವೊಯ್ಗ್ಟ್ ಆರೋಪಿಸಿದ್ದಾರೆ.ಮಿಸ್ USA ಸಂಸ್ಥೆಯೊಳಗೆ ವಿಷಕಾರಿ ಕೆಲಸದ ವಾತಾವರಣವಿದೆ, ಅದು ಕಳಪೆ ನಿರ್ವಹಣೆಯಾಗಿದೆ. ಅಲ್ಲಿ ಕಿರುಕುಳ ನೀಡಲಾಗುತ್ತದೆ ಎಂದು 24 ವರ್ಷದ ನೋಲಿಯಾ ಪತ್ರದಲ್ಲಿ ಬರೆದಿದ್ದಾರೆ. ಮಿಸ್ USA ಆಗಿ ನನ್ನ ಪ್ರಯಾಣವು ನಂಬಲಾಗದಷ್ಟು ಅರ್ಥಪೂರ್ಣವಾಗಿದೆ. ನಾನು ಬಹಳ ಹೆಮ್ಮೆಯಿಂದ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದೆ. ದುಃಖಕರವೆಂದರೆ, ಮಿಸ್ USA 2023 ಪ್ರಶಸ್ತಿಗೆ ರಾಜೀನಾಮೆ ನೀಡಲು ನಾನು ಕಠಿಣ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ ಎಂದು ನೋಲಿಯಾ ತಿಳಿಸಿದ್ದರು. ಇದು ತೀವ್ರ, ಚರ್ಚೆಗೆ ಕಾರಣವಾಗಿತ್ತು. ಇವರ ಬೆನ್ನಲ್ಲೇ ಮಿಸ್ ಟೀನ್ ಯುಎಸ್‌ಎ ವಿಜೇತೆ ಉಮಾಸೋಫಿಯಾ ಶ್ರೀವಾಸ್ತವ ಕೂಡ ರಾಜೀನಾಮೆ ನೀಡುವ ಮೂಲಕ ಈ ಸ್ಪರ್ಧೆಯ ಬಗ್ಗೆ ತೀವ್ರ, ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ.




# ಆಸ್ಟ್ರೇಲಿಯದಲ್ಲಿ ಮಗುವಿಗೆ ಹಕ್ಕಿಜ್ವರದ ಸೋಂಕು

**ಕ್ಯಾನ್ಬೆರ್ರಾ:** ಆಸ್ಟ್ರೇಲಿಯದಲ್ಲಿ ಮೊದಲ ಬಾರಿಗೆ ಮಗುವಿಗೆ ಹಕ್ಕಿಜ್ವರದ ವೈರಸ್ ಸೋಂಕು ತಗಲಿದ ಪ್ರಕರಣ ಮಂಗಳವಾರ ದೃಢಪಟ್ಟಿವೆ. ಈ ಮಗುವು ತನ್ನ ಕುಟುಂಬಿಕರೊಂದಿಗೆ ಕೆಲವು ವಾರಗಳ ಹಿಂದೆ ಭಾರತದಲ್ಲಿದ್ದಾಗ ಅದಕ್ಕೆ ಈ ಸೋಂಕು ತಗಲಿರಬೇಕೆಂದು ತಜ್ಞರು ಶಂಕಿಸಿರುವುದಾಗಿ ಮಾಧ್ಯಮ ವರದಿಯೊಂದು ಬುಧವಾರ ತಿಳಿಸಿದೆ. ಈ ವರ್ಷದ ಮಾರ್ಚ್ನಲ್ಲಿ ಅದು ಅಸ್ವಸ್ಥಗೊಂಡಿತ್ತು. ಆದರೆ ಈಗ ಅದು ಸಂಪೂರ್ಣವಾಗಿ ಚೇತರಿಸಿಕೊಂಡಿದೆ'' ಎಂದು ಅದು ಎಕ್ಸ್ ಪೋಸ್ಟ್ ಮಾಡಿದೆ.



# ಇಯೊವಾದಲ್ಲಿ ಬಿರುಗಾಳಿಯ ಆರ್ಭಟ

**ರೀನ್ಫೀಲ್ಡ್:** ಅಮೆರಿಕದ ಇಯೊವಾ ರಾಜ್ಯದ ಪುಟ್ಟ ಪಟ್ಟಣವಾದ ಗ್ರೀನ್ಫೀಲ್ಡ್ ನಲ್ಲಿ ಮಂಗಳವಾರ ಬೀಸಿದ ಭೀಕರ ಬಿರುಗಾಳಿಗೆ ಹಲವಾರು ಮಂದಿ ಸಾವನ್ನಪ್ಪಿದ್ದಾರೆ ಹಾಗೂ ಹಲವಾರು ಮನೆಗಳು ಕುಸಿದುಬಿದ್ದಿದ್ದು, ಕಾರು ಮತ್ತಿತರ ವಾಹನಗಳು ಚೆಲ್ಲಾಪಿಲ್ಲಿಯಾಗಿ ಚದುರಿಬಿದ್ದಿವೆ.ಸುಮಾರು 2 ಸಾವಿರ ಜನಸಂಖ್ಯೆಯ ಗ್ರೀನ್ಫೀಲ್ಡ್ ಪಟ್ಟಣವನ್ನು ವ್ಯಾಪಕ ವಿನಾಶವನ್ನುಂಟು ಮಾಡಿದ ಬಿರುಗಾಳಿ ಆನಂತರ ಪೂರ್ವಾಭಿಮುಖವಾಗಿ ಚಲಿಸಿದ್ದು, ಇಲಿನಾಯ್ಸ್ ಹಾಗೂ ವಿಸ್ಕೊನ್ಸಿನ್ ರಾಜ್ಯಗಳ ಹಲವು ಭಾಗಗಳಲ್ಲಿ ಹಾವಳಿಯೆಬ್ಬಿಸಿದೆ. ಈ ಎರಡೂ ರಾಜ್ಯಗಳ ಹಲವೆಡೆ ವಿದ್ಯುತ್ಕಂಬಗಳು ಉರುಳಿಬಿದ್ದಿದ್ದು, ಸಾವಿರಾರು ಜನರು ವಿದ್ಯುತ್ ಇಲ್ಲದೆಯೇ ದಿನಕಳೆಯಬೇಕಾಯಿತು. ಗ್ರೀನ್ಫೀಲ್ಡ್ ನಲ್ಲಿ ಬಿರುಗಾಳಿಯ ಹೊಡೆತಕ್ಕೆ ಆಸ್ಪತ್ರೆಯೊಂದು ಧರಾಶಾಯಿಯಾಗಿದ್ದು 12 ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಅವರನ್ನು ಆನಂತರ ಬೇರೊಂದು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗಿದೆಯೆಂದು ಇಯೊವಾ ರಾಜ್ಯದ ಗಸ್ತುದಳದ ಸಾರ್ಜಂಟ್ ಅಲೆಕ್ಸ್ ಡಿಂಕ್ಲಾ ತಿಳಿಸಿದ್ದಾರೆ. ಬಿರುಗಾಳಿಯ ಹಾವಳಿಗೆ ಸಾವುಗಳು ಸಂಭವಿಸಿರುವುದು ದೃಢಪಟ್ಟಿದೆಯೆಂದು ಅವರು ಹೇಳಿದ್ದಾರೆ. ಬಿರುಗಾಳಿ ಹಾವಳಿಯ ನಂತರ ನಾಪತ್ತೆಯಾದವರಿದ್ದರೆ ಆ ಬಗ್ಗೆ ವರದಿಯೂ ನೀಡುವಂತೆಯೂ ಅವರು ಸ್ಥಳೀಯರಿಗೆ ಮನವಿ ಮಾಡಿದ್ದಾರೆ.



# 30ನೇ ಬಾರಿಗೆ ಮೌಂಟ್ ಎವರೆಸ್ಟ್ ಏರಿ ವಿಶ್ವದಾಖಲೆ

**ಕಾಠ್ಮಂಡು:** ನೇಪಾಳದ ಶೆರ್ಪಾ ಪರ್ವತಾರೋಹಿ ಮತ್ತು ಮಾರ್ಗದರ್ಶಿ ಕಾಮಿ ರೀಟಾ ಶೆರ್ಪಾ ಬುಧವಾರ ಬೆಳಿಗ್ಗೆ ಮೌಂಟ್ ಎವರೆಸ್ಟ್ ಶಿಖರದ 30ನೇ ಶಿಖರವನ್ನು ಏರುವ ಮೂಲಕ ಮತ್ತೊಮ್ಮೆ ವಿಶ್ವ ದಾಖಲೆ ನಿರ್ಮಿಸಿದ್ದಾರೆ.ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳ ಪ್ರಕಾರ, ಮೌಂಟ್ ಎವರೆಸ್ಟ್ ಸೇರಿದಂತೆ ನೇಪಾಳದ ಎತ್ತರದ ಹಿಮಾಲಯದಲ್ಲಿ ಯಾತ್ರೆಯ ಮೇಲ್ವಿಚಾರಣೆ ನಡೆಸುತ್ತಿರುವ ಕಾಮಿ ರೀಟಾ ಇಂದು ಬೆಳಿಗ್ಗೆ 30 ನೇ ಬಾರಿಗೆ ವಿಶ್ವದ ಅತಿ ಎತ್ತರದ ಶಿಖರದ ಮೇಲೆ ನಿಂತಿದ್ದಾರೆ. ಇಂದು ಬೆಳಿಗ್ಗೆ 7:49 ಕ್ಕೆ, ಕಾಮಿ ರೀಟಾ ಶೆರ್ಪಾ ಅವರು ಕೇವಲ ಒಂಬತ್ತು ದಿನಗಳ ಹಿಂದೆ ಸ್ಥಾಪಿಸಿದ ತಮ್ಮದೇ ದಾಖಲೆಯನ್ನು ಮುರಿದರು. ಇದು ವಿಶ್ವದ ಅಗ್ರಸ್ಥಾನಕ್ಕೆ ಅವರ 30 ನೇ ಆರೋಹಣವನ್ನು ಸೂಚಿಸುತ್ತದೆ ಎಂದು ದಂಡಯಾತ್ರೆ ಮೇಲ್ವಿಚಾರಣೆ ಮತ್ತು ಸೌಲಭ್ಯ ಕ್ಷೇತ್ರ ಕಚೇರಿಯ ಮುಖ್ಯಸ್ಥ ಖಿಮ್ಲಾಲ್ ಗೌತಮ್ ದೃಢಪಡಿಸಿದ್ದಾರೆ. ಮೇ 12 ರಂದು ಅವರ ಮೊದಲ ಆರೋಹಣದ ನಂತರ ಇದು ಋತುವಿನ ಎರಡನೇ ಆರೋಹಣವಾಗಿದೆ. ನೇಪಾಳದ ಸೋಲುಖುಂಬುವಿನ ಥಾಮೆ ಗ್ರಾಮದ ಕಾಮಿ ರೀಟಾ ಸೆವೆನ್ ಸಮ್ಮಿಟ್ ಟ್ರೆಕ್ಸ್ ನಲ್ಲಿ ಹಿರಿಯ ಮಾರ್ಗದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ. 54 ವರ್ಷದ ಷರ್ಪಾ ಪರ್ವತಾರೋಹಿ ಎರಡು ದಶಕಗಳಿಂದ ಪರ್ವತಗಳನ್ನು ಏರುತ್ತಿದ್ದಾರೆ. ಅವರ ಪರ್ವತಾರೋಹಣ ಪ್ರಯಾಣವು 1992 ರಲ್ಲಿ ಸಹಾಯಕ ಸಿಬ್ಬಂದಿ ಸದಸ್ಯರಾಗಿ ಎವರೆಸ್ಟ್ ಯಾತ್ರೆಗೆ ಸೇರಿದಾಗ ಪ್ರಾರಂಭವಾಯಿತು. ಅಂದಿನಿಂದ, ಕಾಮಿ ರೀಟಾ ನಿರ್ಭೀತಿಯಿಂದ ಹಲವಾರು ಬಾರಿ ಪರ್ವತರೋಹಣ ಮಾಡಿದ್ದಾರೆ.



Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# 'ಪುಷ್ಪ 2' ಅಪ್‌ಡೇಟ್ ಹಂಚಿಕೊಂಡ ರಶ್ಮಿಕಾ ಮಂದಣ್ಣ

ಕೊಡಗಿನ ಕುವರಿ ರಶ್ಮಿಕಾ ಮಂದಣ್ಣ ಬಹುನಿರೀಕ್ಷಿತ 'ಪುಷ್ಪ 2' ಚಿತ್ರದ ಬಗ್ಗೆ ಬಿಗ್ ಅಪ್‌ಡೇಟ್ ಹಂಚಿಕೊಂಡಿದ್ದಾರೆ. ಶ್ರೀವಲ್ಲಿಗಾಗಿ ಎದುರು ನೋಡ್ತಿದ್ದ ಫ್ಯಾನ್ಸ್‌ಗೆ ನಟಿ ಸಿಹಿಸುದ್ದಿ ನೀಡಿದ್ದಾರೆ.

ಸುಕುಮಾರ್ ನಿರ್ದೇಶನದ 'ಪುಷ್ಪ' 1 ಸಿನಿಮಾ ಗಲ್ಲಾಪೆಟ್ಟಿಗೆ ಲೂಟಿ ಮಾಡಿತ್ತು. ಅಲ್ಲು ಅರ್ಜುನ್ ಮತ್ತು ರಶ್ಮಿಕಾ ಮಂದಣ್ಣ ಕಾಂಬಿನೇಷನ್ ಸಿನಿಮಾ ಗೆಲುವಿಗೆ ಕಾರಣವಾಗಿತ್ತು. ಈಗ 'ಪುಷ್ಪ 2' ಚಿತ್ರತಂಡ ಮತ್ತೆ ಮನರಂಜನೆ ಕೊಡಲು ರೆಡಿಯಾಗಿದೆ.

ಇದೀಗ ಪುಷ್ಪ 2 ಸಿನಿಮಾ 2ನೇ ಸಾಂಗ್ ಬಿಡುಗಡೆ ಮಾಡುವ ಬಗ್ಗೆ ನಟಿ ಸೋಷಿಯಲ್ ಮೀಡಿಯಾದಲ್ಲಿ ಮಾಹಿತಿ ನೀಡಿದ್ದಾರೆ. ಈ ಹಾಡು ಶೂಟ್ ಮಾಡಲು ಚೆನ್ನಾಗಿತ್ತು. ನಿಮ್ಮೆಲ್ಲರಿಗೂ ಈ ಹಾಡು ಇಷ್ಟವಾಗುತ್ತೆ ಎಂದು ಖಾತ್ರಿಯಿದೆ ಎಂದು ರಶ್ಮಿಕಾ ಬರೆದುಕೊಂಡಿದ್ದಾರೆ. ಚಿತ್ರದ 2ನೇ ಹಾಡು ಮೇ 23ರಂದು 11:07ಕ್ಕೆ ರಿಲೀಸ್ ಮಾಡೋದಾಗಿ ತಿಳಿಸಿದ್ದಾರೆ.

ಸದ್ಯ 'ಪುಷ್ಪ 2' ಸಿನಿಮಾದ ಜೊತೆ ಅನಿಮಲ್ ಪಾರ್ಕ್, ರೈನ್‌ಬೋ, ದಿ ಗರ್ಲ್‌ಫ್ರೆಂಡ್, ಚಾವಾ ಸೇರಿದಂತೆ ಹಲವು ಸಿನಿಮಾಗಳಲ್ಲಿ ರಶ್ಮಿಕಾ ಮಂದಣ್ಣ ಬ್ಯುಸಿಯಾಗಿದ್ದಾರೆ.



# ಹೀರೋಯಿನ್ ಆದ ಖ್ಯಾತ ಯೂಟ್ಯೂಬರ್ ನಿಹಾರಿಕಾ



ಬೆಂಗಳೂರು ಮೂಲದ ಖ್ಯಾತ ಯೂಟ್ಯೂಬರ್ ನಿಹಾರಿಕಾ ಎನ್.ಎಂ ವಿಭಿನ್ನ ಕಂಟೆಂಟ್‌ಗಳ ಮೂಲಕ ಸೋಷಿಯಲ್ ಮೀಡಿಯಾದಲ್ಲಿ ಸೆನ್ಸೇಷನ್ ಕ್ರಿಯೇಟ್ ಮಾಡಿದ್ದಾರೆ. ಇದೀಗ ಬೆಳ್ಳಿತೆರೆಯಲ್ಲಿ ನಾಯಕಿಯಾಗಿ ಎಂಟ್ರಿ ಕೊಡಲು ನಿಹಾರಿಕಾ ರೆಡಿಯಾಗಿದ್ದಾರೆ.

ನಿಹಾರಿಕಾ ಈಗ ಕಂಟೆಂಟ್ ಕ್ರಿಯೇಟರ್‌ನಿಂದ ನಾಯಕಿಯಾಗಿ ಬಡ್ತಿ ಪಡೆಯುತ್ತಿದ್ದಾರೆ. ತೆಲುಗು ಅಲ್ಲ, ಬದಲಿಗೆ ತಮಿಳು ಚಿತ್ರದ ಮೂಲಕ ಎಂಟ್ರಿ ಕೊಡ್ತಿದ್ದಾರೆ. ನಿಹಾರಿಕಾ ನಾಯಕಿಯಾಗಿ ನಟಿಸಲಿರುವ ಸಿನಿಮಾವನ್ನು ದಕ್ಷಿಣದ ಪ್ರಖ್ಯಾತ ನಿರ್ಮಾಣ ಸಂಸ್ಥೆ ಲೈಕಾ ನಿರ್ಮಾಣ ಮಾಡುತ್ತಿದೆ. ಅಥರ್ವ ಈ ಚಿತ್ರದ ನಾಯಕನಾಗಿದ್ದು, ಆಕಾಶ್ ಭಾಸ್ಕರನ್ ಈ ಚಿತ್ರವನ್ನ ನಿರ್ದೇಶಿಸಲಿದ್ದಾರೆ.

ಇನ್ನೂ ಹೆಸರಿಡದ ಈ ಚಿತ್ರ ಪಕ್ಕಾ ಹಾಸ್ಯ ಪ್ರಧಾನ ಸಿನಿಮಾವಾಗಿದೆ. ರೊಮ್ಯಾನ್ಸ್ ಜೊತೆಗೆ ಕಾಮಿಡಿ ಇರುವ ರೋಡ್ ಟ್ರಿಪ್ ಈ ಚಿತ್ರದ ಜೀವಾಳ. ಸಂಗೀತ ನಿರ್ದೇಶಕ ಎಸ್.ಥಮನ್ ಈ ಚಿತ್ರದ ಸಂಗೀತ ನಿರ್ದೇಶಕರು. ಈ ಚಿತ್ರದಲ್ಲಿ ಅವರು ಪಾತ್ರವೊಂದನ್ನು ಕೂಡ ನಿರ್ವಹಿಸುತ್ತಿದ್ದಾರೆ. ಚಿತ್ರದ ತಾಂತ್ರಿಕ ವಿಭಾಗದಲ್ಲಿ ಯಾರೆಲ್ಲ ಕೆಲಸ ಮಾಡಲಿದ್ದಾರೆ ಅನ್ನುವ ಪ್ರಶ್ನೆಗೆ ಸದ್ಯಕ್ಕೆ ಉತ್ತರ ಇಲ್ಲ. ಸದ್ಯ ಚಿತ್ರದ ಪ್ರೀ-ಪ್ರೊಡಕ್ಷನ್ ಕೆಲಸ ಆರಂಭವಾಗಿದ್ದು, ಶೀಘ್ರದಲ್ಲಿಯೇ ಚಿತ್ರದ ಮುಹೂರ್ತ ನೆರವೇರಲಿದೆ. ಅಂದಹಾಗೆ, ನಿಹಾರಿಕಾ ಬೇಡಿಕೆ ಎಷ್ಟಿದೆ ಎಂದರೆ, ನ್ಯಾಷನಲ್ ಸ್ಟಾರ್ ಯಶ್ 'ಕೆಜಿಎಫ್ 2' ಚಿತ್ರದ ಬಿಡುಗಡೆ ಸಮಯದಲ್ಲಿ, ನಿಹಾರಿಕಾ ಅವರನ್ನ ಚಿತ್ರದ ಪ್ರಚಾರಕ್ಕೆ ಬಳಸಿಕೊಂಡಿದ್ದರು. ಆ ಕಾಲಕ್ಕೆ ವಿಡಿಯೋ ಸಿಕ್ಕಾಪಟ್ಟೆ ವೈರಲ್ ಕೂಡ ಆಗಿತ್ತು. ತೆಲುಗಿನ ಮಹೇಶ್ ಬಾಬು, ವಿಜಯ್ ದೇವರಕೊಂಡ ಅವರಿಂದ ಹಿಡಿದು ಬಾಲಿವುಡ್‌ನ ರಣ್‌ಬೀರ್ ಕಪೂರ್, ಪ್ರಿಯಾಂಕಾ ಚೋಪ್ರಾವರೆಗೂ ನಿಹಾರಿಕಾ ಜೊತೆ ಸಿನಿಮಾ ಪ್ರಚಾರ ಮಾಡಿಸಿಕೊಂಡಿದ್ದಾರೆ. ಇದೀಗ ನೆಚ್ಚಿನ ಯೂಟ್ಯೂಬರ್ ನಾಯಕಿಯಾಗಿರೋದು ಸಹಜವಾಗಿ ಫ್ಯಾನ್ಸ್‌ಗೆ ಖುಷಿ ಕೊಟ್ಟಿದೆ.

# ಲಿಪ್‌ಲಾಕ್ ಮಾಡೋಕೆ ಸಜ್ಜಾದ ಕೀರ್ತಿ ಸುರೇಶ್



ಸೌತ್ ಸಿನಿಮಾಗಳಲ್ಲಿ ಗಮನ ಸೆಳೆದ ಸುಂದರಿ ಕೀರ್ತಿ ಸುರೇಶ್ ಬಾಲಿವುಡ್‌ಗೆ ಹಾರಿದ್ದಾರೆ. ವರುಣ್ ಧವನ್ ಜೊತೆ ರೊಮ್ಯಾನ್ಸ್ ಮಾಡಲು ಸಜ್ಜಾಗಿದ್ದಾರೆ. ಇದೀಗ ಈ ಸಿನಿಮಾಗಾಗಿ ಮಡಿವಂತಿಕೆ ಬಿಟ್ಟು ಲಿಪ್‌ಲಾಕ್ ಮಾಡೋಕೆ ಕೀರ್ತಿ ಸುರೇಶ್ ರೆಡಿಯಾಗಿದ್ದಾರೆ.

ತೆಲುಗು, ತಮಿಳು, ಮಲಯಾಳಂ ಸಿನಿಮಾಗಳಲ್ಲಿ ಕೀರ್ತಿ ಸುರೇಶ್ ನಟಿಸಿ ಸೂಪರ್ ಸ್ಟಾರ್ ಆಗಿ ಮಿಂಚಿದವರು. ಅದರಲ್ಲೂ ಮಹಾನಟಿ ಸಿನಿಮಾದ ನಟನೆಗಾಗಿ ರಾಷ್ಟ್ರ ಪ್ರಶಸ್ತಿ ಪಡೆದ ವಿಜೇತ ನಟಿ. ಸೂಪರ್ ಹಿಟ್ ಚಿತ್ರಗಳನ್ನು ನೀಡಿದ್ರು. ಗ್ಲ್ಯಾಮರಸ್ ಹಾಟ್ ಪಾತ್ರಗಳಲ್ಲಿ ಕೀರ್ತಿ ನಟಿಸಿರಲಿಲ್ಲ. ಆದರೆ ಈಗ ರೂಲ್ಸ್‌ನೆಲ್ಲಾ ಈಗ ಮೂಲೆಗಿಟ್ಟು ಬಾಲಿವುಡ್‌ಗೆ ತಕ್ಕಂತೆ ನಟಿ ಬದಲಾಗಲು ರೆಡಿಯಾಗಿದ್ದಾರೆ.

'ಜವಾನ್' ಡೈರೆಕ್ಟರ್ ಅಟ್ಲಿ ನಿರ್ದೇಶನದಲ್ಲಿ ವರುಣ್ ಧವನ್ ಚಿತ್ರ ಮೂಡಿ ಬರುತ್ತಿದೆ. ಈ ಚಿತ್ರದ ಮೂಲಕ ಕೀರ್ತಿ ಸುರೇಶ್ ಬಾಲಿವುಡ್‌ಗೆ ಕಾಲಿಡುತ್ತಿದ್ದಾರೆ. ಈ ಚಿತ್ರಕ್ಕಾಗಿ ಲಿಪಲಾಕ್ ಮತ್ತು ಇಂಟಿಮೇಟ್ ದೃಶ್ಯಗಳಲ್ಲಿ ನಟಿ ಕಾಣಿಸಿಕೊಳ್ತಿದ್ದಾರೆ. ಡೈರೆಕ್ಟರ್ ಅಟ್ಲಿ ಆರ್ಡರ್‌ಗೆ ನಟಿ ಓಕೆ ಎಂದಿದ್ದಾರೆ. ಸದ್ಯ ಸುದ್ದಿ ಕೇಳಿ ಅಭಿಮಾನಿಗಳು ಅಚ್ಚರಿ ವ್ಯಕ್ತಪಡಿಸಿದ್ದಾರೆ. ನಟಿಯ ಬಾಲಿವುಡ್ ಸಿನಿಮಾ ನೋಡಲು ಫ್ಯಾನ್ಸ್ ಕಾಯ್ತಿದ್ದಾರೆ.

ಅಂದಹಾಗೆ, ವರುಣ್ ಧವನ್ ಜೊತೆಗಿನ ಸಿನಿಮಾ ರಿಲೀಸ್‌ಗೂ ಮುನ್ನವೇ ಅಕ್ಷಯ್ ಕುಮಾರ್ ನಟನೆಯ ಹೊಸ ಚಿತ್ರಕ್ಕೆ ಕೀರ್ತಿ ನಾಯಕಿಯಾಗಿ ಫೈನಲ್ ಆಗಿದ್ದಾರೆ. ಸೌತ್‌ನಲ್ಲಿ ಮಿಂಚಿದಂತೆ ಬಾಲಿವುಡ್ ನಲ್ಲಿಯೂ ಬೇಡಿಕೆಯ ನಟಿಯಾಗಲಿ ಎಂಬುದೇ ಅಭಿಮಾನಿಗಳ ಆಶಯ.



## ಕೋಟ್ಯಂತರ ಆರ್‌ಸಿಬಿ ಅಭಿಮಾನಿಗಳ ಕನಸು ಭಗ್ನ

# ರಾಜಸ್ಥಾನಕ್ಕೆ 4 ವಿಕೆಟ್‌ಗಳ ಜಯ

ಕೋಟ್ಯಂತರ ಆರ್‌ಸಿಬಿ ಅಭಿಮಾನಿಗಳ ಕನಸು ಭಗ್ನಗೊಂಡಿದೆ. ನಿನ್ನೆ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ರಾಜಸ್ಥಾನ ರಾಯಲ್ಸ್ 4 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ.

173 ರನ್‌ಗಳ ಸವಾಲನ್ನು ಬೆನ್ನಟ್ಟಿದ ರಾಜಸ್ಥಾನ ರಾಯಲ್ಸ್ ಇನ್ನು 6 ಎಸೆತ ಇರುವಂತೆಯೇ 6 ವಿಕೆಟ್ ನಷ್ಟಕ್ಕೆ 174 ರನ್ ಹೊಡೆದು ಜಯ ಸಾಧಿಸಿತು. ಟಾಪ್ ಆರ್ಡರ್ ಬ್ಯಾಟರ್‌ಗಳ ವೈಫಲ್ಯ, ಕಳಪೆ ಬೌಲಿಂಗ್ ಮತ್ತು ಫೀಲ್ಡಿಂಗ್‌ಗೆ ಆರ್‌ಸಿಬಿ ಬೆಲೆ ತೆತ್ತಿದೆ.

ಮೊದಲ ವಿಕೆಟಿಗೆ ಯಶಸ್ವಿ ಜೈಸ್ವಾಲ್ ಮತ್ತು ಟಾಮ್ ಕ್ಯಾಡ್ಮೋರ್ 33 ಎಸೆತಗಳಲ್ಲಿ 46 ರನ್ ಹೊಡೆದರು. ಟಾಮ್ ಕ್ಯಾಡ್ಮೋರ್ 20 ರನ್ ಗಳಿಸಿ ಔಟಾದರೆ ಯಶಸ್ವಿ ಜೈಸ್ವಾಲ್ 45 ರನ್(30 ಎಸೆತ, 8 ಬೌಂಡರಿ) ಹೊಡೆದು ವಿಕೆಟ್ ಒಪ್ಪಿಸಿದರು. ನಾಯಕ ಸಂಜು ಸ್ಯಾಮ್ಸನ್ 17 ರನ್ ಸಿಡಿಸಿ ಔಟಾದರು.

112 ರನ್‌ಗಳಿಸಿ ಉತ್ತಮ ಸ್ಥಿತಿಯಲ್ಲಿದ್ದ ರಾಜಸ್ಥಾನ ವಿರಾಟ್ ಕೊಹ್ಲಿ ಅವರ ಅತ್ಯುತ್ತಮ ಥ್ರೋನಿಂದಾಗಿ 4ನೇ ವಿಕೆಟ್ ಕಳೆದುಕೊಂಡಿತು. 8 ರನ್ ಗಳಿಸಿದ್ದ ಧ್ರುವ್ ಜುರೆಲ್ ಎರಡನೇ ರನ್ ಓಡುವಾಗ ರನೌಟ್‌ಗೆ ಬಲಿಯಾದರು. ಕೊನೆಯಲ್ಲಿ ಹೆಟ್ಮೇಯರ್ 26 ರನ್(14 ಎಸೆತ, 3 ಬೌಂಡರಿ, 1 ಸಿಕ್ಸರ್) ಮತ್ತು ಪೊವೆಲ್ ಔಟಾಗದೇ 16 ರನ್ ಹೊಡೆದ ಪರಿಣಾಮ ರಾಜಸ್ಥಾನ ಪಂದ್ಯವನ್ನು ಗೆದ್ದುಕೊಂಡಿತು. ಶುಕ್ರವಾರ ರಾಜಸ್ಥಾನ ಮತ್ತು ಹೈದರಾಬಾದ್ ಮಧ್ಯೆ ಎರಡನೇ ಎಲಿಮಿನೇಟರ್ ಪಂದ್ಯ ನಡೆಯಲಿದೆ. ಈ ಪಂದ್ಯವನ್ನು ಗೆದ್ದವರು ಫೈನಲ್‌ನಲ್ಲಿ ಕೋಲ್ಕತ್ತಾವನ್ನು ಎದುರಿಸಲಿದ್ದಾರೆ.

ಟಾಸ್ ಸೋತು ಮೊದಲು ಬ್ಯಾಟ್ ಆರಂಭಿಸಿದ ವಿರಾಟ್ ಕೊಹ್ಲಿ ಮತ್ತು ನಾಯಕ ಡುಪ್ಲೆಸಿಸ್ ಮೊದಲ ವಿಕೆಟಿಗೆ 37 ರನ್ ಕಲೆ ಹಾಕಿದರು. 17 ರನ್ ಗಳಿಸಿದ್ದಾಗ ಈ ವೇಳೆ ಸಿಕ್ಸ್ ಸಿಡಿಸಲು ಹೋಗಿ ಡುಪ್ಲೇಸಿಸ್ ಪೊವೆಲ್ ಹಿಡಿದ ಅತ್ಯುತ್ತಮ ಕ್ಯಾಚ್‌ಗೆ ಬಲಿಯಾದರು. ಉತ್ತಮವಾಗಿ ಆಡುತ್ತಿದ್ದ ಕೊಹ್ಲಿ 33 ರನ್ (24 ಎಸೆತ, 3 ಬೌಂಡರಿ, 1 ಸಿಕ್ಸ್) ಸಿಕ್ಸ್ ಸಿಡಿಸಲು ಹೋಗಿ ವಿಕೆಟ್ ಒಪ್ಪಿಸಿದರು.

ಮೂರನೇ ವಿಕೆಟಿಗೆ ರಜತ್ ಪಾಟೀದರ್ ಮತ್ತು ಕ್ಯಾಮರೂನ್ ಗ್ರೀನ್ 31 ಎಸೆತಗಳಲ್ಲಿ 41 ರನ್ ಜೊತೆಯಾಟವಾಡಿ ಸ್ವಲ್ಪ ಚೇತರಿಕೆ ನೀಡಿದರು. ಮ್ಯಾಕ್ಸ್‌ವೆಲ್ ಮತ್ತೆ ಶೂನ್ಯಕ್ಕೆ ಔಟಾಗಿ ನಿರಾಸೆ ಮೂಡಿಸಿದರು. ಕ್ಯಾಮರೂನ್ ಗ್ರೀನ್ 27 ರನ್ (21 ಎಸೆತ, 2 ಬೌಂಡರಿ, 1 ಸಿಕ್ಸ್), ರಜತ್ ಪಾಟೀದರ್ 34 ರನ್ (22 ಎಸೆತ, 2 ಬೌಂಡರಿ, 2 ಸಿಕ್ಸ್), ಮಹಿಪಾಲ್ ಲೋಮ್ರೋರ್ 32 ರನ್(17 ಎಸೆತ, 2 ಬೌಂಡರಿ, 2 ಸಿಕ್ಸ್) ಸಿಡಿಸಿ ಔಟಾದರು. ಅಂತಿಮವಾಗಿ 8 ವಿಕೆಟ್ ನಷ್ಟಕ್ಕೆ 172 ರನ್‌ಗಳಿಸಿತು.



## ಸಿಎಂ, ಡಿಸಿಎಂ ಬೆಂಗಳೂರು ಸಿಟಿ ರೌಂಡ್ಸ್

# ಅಧಿಕಾರಿಗಳಿಗೆ ಸಿಎಂ ಖಡಕ್ ಕ್ಲಾಸ್

**ಬೆಂಗಳೂರು:** ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರು ಬೆಂಗಳೂರು ನಗರ ಪ್ರದಕ್ಷಿಣೆನಡೆಸಿದ್ದಾರೆ. ಈ ವೇಳೆ ಒಣಗಿದ ಮರ ಏಕೆ ಬಿಟ್ಕೊಂಡಿದ್ದೀರಿ, ಅನಾಹುತ ಆಗಲಿ ಅಂತನಾ? ಎಂದು ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಕ್ಲಾಸ್ ತೆಗೆದುಕೊಂಡಿದ್ದು, ನಗರದಲ್ಲಿರುವ ಒಣಮರ ಮತ್ತು ಅಪಾಯಕಾರಿ ಮರವನ್ನು ತೆರವುಗೊಳಿಸಬೇಕು. ಬೆಂಗಳೂರು ನಗರ ಸೌಂದರ್ಯಕ್ಕೆ ಹೆಚ್ಚು ಆದ್ಯತೆ ಕೊಡಬೇಕು. ಜೊತೆಗೆ ಪದ್ಮನಾಭನಗರದ ಫ್ಲೈಓವರ್ ಬಳಿ ಇರುವ ಫುಟ್‌ಪಾತ್ ಸರಿಪಡಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

**ಮಳೆ ಹಾನಿ ಪ್ರದೇಶಗಳಿಗೆ ಭೇಟಿ**

ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿದ ಸಿಎಂ, ಮಳೆ ಬಂದಾಗ ಕೆರೆಯಂತಾಗುತ್ತಿದ್ದ ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ವೀಕ್ಷಿಸಿದರು. ಈ ವೇಳೆ ಸ್ಥಳೀಯರು ಸೇರಿ, 'ಮಳೆ ಬಂದಾಗ ನೀರು ತುಂಬಿ ರಸ್ತೆ ಎಲ್ಲಾ ಜಲಾವೃತ ಆಗುತ್ತದೆ. ಹೀಗಾಗಿ ಸಮಸ್ಯೆಯನ್ನ ಬಗ್ಗೆಹರಿಸಿ ಎಂದು ಸಿಎಂ ಹಾಗೂ ಡಿಸಿಎಂಗೆ ಮನವಿ ಸಲ್ಲಿಸಿದರು. ಇದೇ ವೇಳೆ ಬೆಂಗಳೂರಿನ ಏಕೈಕ ಮತ್ತು ಪ್ರಥಮ ಡಬಲ್ ಡೆಕರ್ 2 ಟೈರ್ ವ್ಯವಸ್ಥೆಯನ್ನು ಪರಿಶೀಲಿಸಿ, ಆದಷ್ಟು ಬೇಗ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲು ಸೂಚಿಸಿದರು.

**ಮುಖ್ಯಮಂತ್ರಿಯವರು ನೀಡಿದ ಸೂಚನೆಗಳು**

ಅಲ್ಲಿಂದ ಹೊಸೂರು ಮುಖ್ಯರಸ್ತೆ ಕಡೆಗೆ ತೆರಳಿ, 'ಮೆಟ್ರೋ ಕಾಮಗಾರಿಯಿಂದಾಗಿ ಮಳೆನೀರು ಚರಂಡಿ ವಿಸ್ತೀರ್ಣ ಕಡಿಮೆಯಾಗಿ, ಪ್ರವಾಹ ಪರಿಸ್ಥಿತಿ ಉಂಟಾಗುತ್ತಿರುವ ಬಗ್ಗೆ ಗಮನಹರಿಸಿದರು. ಈ ವೇಳೆ ಪರಿಹಾರಕ್ಕೆ ಪರ್ಯಾಯ ವ್ಯವಸ್ಥೆ ಮಾಡಲು 4.5 ಕೋಟಿ ಕಾಮಗಾರಿ ಅಗತ್ಯವಿದೆ ಹಾಗೂ ಸರ್ಕಾರದ ಉನ್ನತಾಧಿಕಾರ ಸಮಿತಿಯ ಅನುಮತಿ ಅಗತ್ಯವಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿವರಿಸಿದರು. ಪರ್ಯಾಯ ವ್ಯವಸ್ಥೆಯ ಕಾಮಗಾರಿ ಕೈಗೊಳ್ಳಲು ಸಮ್ಮತಿಸಿದ ಮುಖ್ಯಮಂತ್ರಿಗಳು, ಮುಂದಿನ ಉನ್ನತಾಧಿಕಾರ ಸಮಿತಿ ಸಭೆಯ ಮುಂದೆ ಮಂಡಿಸಲು ಸೂಚಿಸಿದರು. ಜೊತೆಗೆ ಈ ಯೋಜನೆಯನ್ನು ಮುಂದಿನ 10-15 ವರ್ಷಗಳ ಪರಿಣಾಮವನ್ನು ಗಮನದಲ್ಲಿರಿಸಿಕೊಂಡು ಕ್ರಿಯಾ ಯೋಜನೆ ರೂಪಿಸಲು ಸೂಚನೆ ನೀಡಿದರು. ನಂತರ ಹೆಚ್ಚುವರಿ ಅನುದಾನ ನೀಡುವ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು.



**ರಾಜಕಾಲುವೆ ವೀಕ್ಷಣೆ ಮಾಡಿದ ಸಿಎಂ ಸಿದ್ದರಾಮಯ್ಯ**

ಕೋಡಿಚಿಕ್ಕನಹಳ್ಳಿಯ ಅನುಗ್ರಹ ಲೇಔಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ರಾಜಕಾಲುವೆ ವೀಕ್ಷಣೆ ಮಾಡಿದರು. ಜೊತೆಗೆ ರಾಜಕಾಲುವೆಯಿಂದ ಮನೆಗಳಿಗೆ ನೀರು ನುಗ್ಗುವ ಸಮಸ್ಯೆಯಿದ್ದು, ಇಲ್ಲಿನ ಪ್ರವಾಹ ನಿಯಂತ್ರಣಕ್ಕೆ ಜಾಕ್‌ವೆಲ್ ಮೂಲಕ ರಾಜಕಾಲುವೆಯಿಂದ ಹೊರ ಬರುವ ನೀರನ್ನು ಪಂಪ್ ಮಾಡಿ ಮಡಿವಾಳ ಕೆರೆಗೆ ಹರಿಸಲು ಸಿಎಂ ಸೂಚನೆ ನೀಡಿದರು. ಇದಕ್ಕೆ 4.3 ಕೋಟಿ ರೂ. ವೆಚ್ಚದ ಕಾಮಗಾರಿ ಶೀಘ್ರ ಪ್ರಾರಂಭಿಸಲು ಸೂಚಿಸಿದರು.

**ಅಧಿಕಾರಿಗಳಿಗೆ ಸಿಎಂ ನೀಡಿದ ಸೂಚನೆಗಳೇನು?**

ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದನಂತರ ದಿನಾಂಕ 2023 ನವೆಂಬರ್ 20 ರಂದು :ಖಅಕಐ ಎಂಬ ಕಂಪೆನಿಗೆ ಕಾರ್ಯಾದೇಶ ನೀಡಲಾಗಿತ್ತು. ಟೆಂಡರ್ ಷರತ್ತಿನ ಪ್ರಕಾರ 15 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕಾಗಿತ್ತು. ಆದರೆ, ಕಳೆದ ಆರು ತಿಂಗಳಲ್ಲಿ ಕೇವಲ ಶೇ. 4 ರಿಂದ 6 ರಷ್ಟು ಪ್ರಗತಿಯಾಗಿದೆ. ಈ ಮಾಹಿತಿ ತಿಳಿದ ಮುಖ್ಯಮಂತ್ರಿಗಳು ಸ್ಥಳದಲ್ಲಿದ್ದ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡರು. ಗುತ್ತಿಗೆದಾರರಿಗೆ ನಿಯಮಾನುಸಾರ ನೋಟಿಸ್ ನೀಡಿ, ಸ್ಪಂದಿಸದಿದ್ದರೆ ಕಾನೂನು ಪ್ರಕಾರ ಟೆಂಡರ್ ರದ್ದುಪಡಿಸಿ. ಬೇರೆಯವರಿಗೆ ಗುತ್ತಿಗೆ ನೀಡುವಂತೆ ಸೂಚಿಸಿದರು. ಅಗತ್ಯ ಹಣ ಕೊಟ್ಟಿದ್ದರೂ ಆರು ತಿಂಗಳಲ್ಲಿ ಕೇವಲ 4% ಕಾಮಗಾರಿ ಮಾಡಿದ್ದೀಯಲ್ಲ. ಸಾರ್ವಜನಿಕರಿಗೆ ಆಗುವ ತೊಂದರೆ ಬಗ್ಗೆ ಪ್ರಜ್ಞೆ ಬೇಡ್ವಾ, ನಿನ್ನ ಕೈಲಿ ಆಗದಿದ್ದರೆ ಜಾಗ ಖಾಲಿ ಮಾಡಿ ಎಂದು ಕಂಪನಿ ಪ್ರತಿನಿಧಿಗಳಿಗೆ ಸಿಎಂ ಸ್ಪಷ್ಟ ಎಚ್ಚರಿಕೆ ನೀಡಿದರು.

# ಐಪಿಎಲ್‌ನಲ್ಲಿ ಇತಿಹಾಸ ಸೃಷ್ಟಿ: ದಾಖಲೆ ಬರೆದ ಕೊಹ್ಲಿ



**ಅಹಮದಾಬಾದ್:** ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಐಪಿಎಲ್ ಇತಿಹಾಸದಲ್ಲಿ 8000 ರನ್ ಹೊಡೆದ ಏಕೈಕ ಬ್ಯಾಟರ್ ಎಂಬ ದಾಖಲೆಗೆ ಕೊಹ್ಲಿ ಪಾತ್ರರಾಗಿದ್ದಾರೆ.

ಒಟ್ಟು 252 ಪಂದ್ಯಗಳಿಂದ ಈ ಸಾಧನೆ ನಿರ್ಮಾಣವಾಗಿದೆ. ಐಪಿಎಲ್ ಒಟ್ಟು 8 ಶತಕ ಮತ್ತು 55 ಅರ್ಧಶತಕವನ್ನು ಕೊಹ್ಲಿ ಸಿಡಿಸಿದ್ದಾರೆ.

ಈ ವರ್ಷದ ಐಪಿಎಲ್‌ಲ್ಲಿ 15 ಪಂದ್ಯಗಳ 15 ಇನ್ನಿಂಗ್ಸ್‌ನಿಂದ ಕೊಹ್ಲಿ 741 ರನ್ ಹೊಡೆದಿದ್ದಾರೆ. 1 ಶತಕ, 5 ಅರ್ಧ ಶತಕ ಸಿಡಿಸಿದ್ದಾರೆ. ಈ ಮೂಲಕ ಅತಿ ಹೆಚ್ಚು ರನ್ ಹೊಡೆದ ಆಟಗಾರರ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದು ಆರೆಂಜ್ ಕ್ಯಾಪ್ ಧರಿಸಿದ್ದಾರೆ.

ಪಂಜಾಬ್ ಕಿಂಗ್ಸ್‌ನ ನಾಯಕ ಶಿಖರ್ ಧವನ್ ಅತಿ ಹೆಚ್ಚು ರನ್ ಹೊಡೆದ ಆಟಗಾರರ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿದ್ದಾರೆ. ಶಿಖರ್ ಧವನ್ 222 ಪಂದ್ಯಗಳಿಂದ 6,769 ರನ್ ಹೊಡೆದಿದ್ದಾರೆ. ರೋಹಿತ್ ಶರ್ಮಾ 257 ಪಂದ್ಯಗಳಿಂದ 6,628 ರನ್ ಸಿಡಿಸಿದ್ದಾರೆ.

ರಾಜಸ್ಥಾನ ವಿರುದ್ಧ ಇಂದು ನಡೆಯುತ್ತಿರುವ ಎಲಿಮಿನೇಟರ್ ಪಂದ್ಯದಲ್ಲಿ ಕೊಹ್ಲಿ 33 ರನ್(24 ಎಸೆತ, 3 ಬೌಂಡರಿ, 1 ಸಿಕ್ಸರ್) ಸಿಡಿಸಿ ಸಿಕ್ಸ್ ಸಿಡಿಸಲು ಹೋಗಿ ಕ್ಯಾಚ್ ನೀಡಿ ವಿಕೆಟ್ ಒಪ್ಪಿಸಿದರು.

# ಫೋನ್‌ನಲ್ಲಿ ಮಾತಾಡಿದ್ದಕ್ಕೆ ಡಿಕೆಶಿ ರಾಜೀನಾಮೆ ಕೊಡೋದಕ್ಕೆ ಆಗುತ್ತಾ?

**ಬೆಂಗಳೂರು:** ಫೋನ್ ಕದ್ದಾಲಿಕೆ ಆರೋಪ ಮಾಡಿರುವ ಹೆಚ್‌ಡಿಕೆ, ಆರ್.ಅಶೋಕ್ ಗೆ ಸಚಿವ ಸತೀಶ್ ಜಾರಕಿಹೊಳಿ ತಿರುಗೇಟು ನೀಡಿದ್ದಾರೆ.

ಕೇಂದ್ರದಲ್ಲಿ ಬಿಜೆಪಿಯವರದ್ದೇ ಸರ್ಕಾರ ಇದೆಯಲ್ಲವಾ..!? ತನಿಖೆ ಮಾಡಬಹುದಲ್ಲವಾ.? ಇದರಲ್ಲಿ ರಾಷ್ಟ್ರೀಯ ಭದ್ರತಾ ವಿಚಾರ ಬರುತ್ತೆ. ಕದ್ದಾಲಿಕೆ ಮಾಡಿದ್ರೆ, ತನಿಖೆ ನಡೆಸಲಿ, ಬೇಡ ಅಂದವರು ಯಾರು.? ಅಂತಾ ಸವಾಲು ಹಾಕಿದ್ರು. ಗೃಹ ಇಲಾಖೆಯಲ್ಲಿ ಕೆಲ ಸಚಿವರ ಹಸ್ತಕ್ಷೇಪ ಎಂಬ ವಿಪಕ್ಷಗಳ ಆರೋಪ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಆ ರೀತಿ ಯಾವುದೂ ಇಲ್ಲ. ನಾವು ಕೂಡ ಏನೇ ಇದ್ರೂ ಪೊಲೀಸ್ ಇಲಾಖೆ ಸಂಬಂಧ ಪರಮೇಶ್ವರ್ ಜೊತೆಯೇ ಚರ್ಚಿಸುತ್ತೇವೆ. ಆ ರೀತಿ ಯಾರೂ ಹಸ್ತಕ್ಷೇಪ ಮಾಡಿಲ್ಲ ಅಂದ್ರು.



ಇದೇ ವೇಳೆ ಸಿಡಿ ಶಿವು ಎಂದು ಡಿಸಿಎಂ ವಿರುದ್ಧ ಹೆಚ್ ಡಿಕೆ ವಾಗ್ದಾಳಿ ವಿಚಾರವಾಗಿ ಸತೀಶ್ ಜಾರಕಿಹೊಳಿ ಪ್ರತಿಕ್ರಿಯಿಸಿ, ಆರೋಪ ಮಾಡಿದ ಮೇಲೆ ದಾಖಲೆ ಕೊಡಬೇಕಿರೋದು ಅವರ ಜವಬ್ದಾರಿ. ನಾವೇ ಅಂತಿಮವಲ್ಲ, ಕೋರ್ಟ್ ಇದೆ. ಕೋರ್ಟ್‌ನಲ್ಲಿ ಕೇಳಲಿ ಎಂದ್ರು. ಡಿಕೆಶಿ ಆಡಿಯೋಗೆ ಮಾತನಾಡಿರೋದೆ ಸಾಕ್ಷಿ ಎಂಬ ಹೆಚ್‌ಡಿಕೆ ಆರೋಪ ವಿಚಾರವಾಗಿ ಗೃಹ ಸಚಿವರು ಉತ್ತರ ಕೊಡಬೇಕು, ನನಗೆ ಸಂಭಂದಪಟ್ಟ ಇಲಾಖೆ ಅಲ್ಲ ಎಂದು ವಾಗ್ದಾಳಿ ನಡೆಸಿದರು.

ಎಸ್‌ಐಟಿ ಚೀಫ್ ಗೆ ಕೇಳಬೇಕು ಅವರು ಹೇಳ್ತಾರೆ. ಅದು ಕಾನೂನು ಕ್ರಮ ಆಗುತ್ತೆ, ಒಬ್ಬೊಬ್ಬರು ಒಂದು ಹೇಳಿಕೆ ಕೊಡೋದು ಬೇಡ ಕಾದು ನೋಡೋಣ. ಕಾಂಗ್ರೆಸ್ ನವರು ದೇವೇಗೌಡರ ಕುಟುಂಬಕ್ಕೆ ನಾವ್ಯಾರು ಕಳಂಕ ತರೋದಿಕ್ಕೆ ಹೋಗಿಲ್ಲ, ಅದು ಆದ ಘಟನೆ. ನಮ್ಮ ಪಕ್ಷ, ಒಕ್ಷದ ಮುಖಂಡರು ಯಾರು ಅದಕ್ಕೆ ಸಂಭಂದಪಟ್ಟವರಲ್ಲ ಅಂತಾ ಟಾಂಗ್ ಕೊಟ್ಟರು. ಡಿಕೆಶಿ ಮಾತಾಡಿದಕ್ಕೆ ರಾಜೀನಾಮೆ ಕೊಡೋಕೆ ಆಗುತ್ತಾ.? ಪ್ರಜ್ವಲ್ ಕೇಸ್ ಅನ್ನು ಪೊಲೀಸ್ ನವರಿಗೆ ಬಿಟ್ರೆ ಒಳ್ಳೆಯದು. ವೀಡಿಯೋ ಮಾಡಿರೋದು ಹಂಚಿರೋದು ಅವರ ಪಕ್ಷದವರೇ, ನಮಗೂ ಅದಕ್ಕೂ ಸಂಬಂಧ ಇಲ್ಲ ಎಂದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com